
ಆರ್ಹತ
ಧರ್ಮ ಪ್ರಕಾಶ

(ಜೈನಧರ್ಮದ ವೈಶಿಷ್ಟ್ಯ)


ಲೇಖಕರು:

ವ್ಯಾಖ್ಯಾನ ವಾಚಸ್ಪತಿ ಸೂರಿ ಸಾರ್ವಭೌಮ
ಪೂಜ್ಯಪಾದ ಆಚಾರ್ಯದೇವ ಶ್ರೀಮದ್
ವಿಜಯಲಬ್ಧಿ ಸೂರೀಶ್ವರಜೀ ಮಹಾರಾಜ
ಪಟ್ಟಾಲಂಕೃತ ದಕ್ಷಿಣ ದೀಪಕ ಪೂಜ್ಯ
ಆಚಾರ್ಯದೇವ ಶ್ರೀಮದ್ ವಿಜಯಲಕ್ಷ್ಮಣ
ಸೂರೀಶ್ವರಜೀ ಮಹಾರಾಜ ಶಿಷ್ಯರತ್ನ ಕವಿ
ಕುಲತಿಲಕ ಪೂಜ್ಯ ಮುನಿರಾಜ

ಶ್ರೀ ಕೀರ್ತಿ ವಿಜಯಜೀ ಮಹಾರಾಜ್



ಮೈಸೂರು ಶ್ರೀಮನ್ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ
ಒಡೆಯರ್‌ರವರು ಜೈನಾಚಾರ್ಯ ಶ್ರೀ ವಿಜಯ ಲಕ್ಷ್ಮಣ ಸೂರೀಶ್ವರಜೀ
ರವರನ್ನು ಬೆಂಗಳೂರು ಶ್ವೇತಾಂಬರ ಜೈನ ಮಂದಿರದಲ್ಲಿ ಸಂದರ್ಶಿಸಿದ ಚಿತ್ರ



ಪೂಜ್ಯ ಮುನಿರಾಜ

ಶ್ರೀ ಕೀರ್ತಿವಿಜಯಜೀ ಮಹಾರಾಜ್‌ರವರು

|| ನಮೋ ಜಿಣಾಣಂ ||

ಆತ್ಮ ಕಮಲ ಲಬ್ಧಿ ಸೂರೀಶ್ವರಜೀ
ಜೈನ ಗ್ರಂಥಮಾಲೆಯ 18ನೇ ಪುಷ್ಪ

ಆರ್ಹತ್ರ
ಧರ್ಮ ಪ್ರಕಾಶ

(ಜೈನಧರ್ಮದ ವೈಶಿಷ್ಟ್ಯ)

ಲೇಖಕರು:

ವ್ಯಾಖ್ಯಾನ ವಾಚಸ್ಪತಿ ಸೂರಿ ಸಾರ್ವಭೌಮ
ಪೂಜ್ಯಪಾದ ಆಚಾರ್ಯದೇವ
ಶ್ರೀಮದ್ ವಿಜಯಲಬ್ಧಿ ಸೂರೀಶ್ವರಜೀ
ಮಹಾರಾಜ ಪಟ್ಟಾಲಂಕೃತ ದಕ್ಷಿಣ
ದೀಪಕ ಪೂಜ್ಯ ಆಚಾರ್ಯದೇವ
ಶ್ರೀಮದ್ ವಿಜಯಲಕ್ಷ್ಮಣ ಸೂರೀಶ್ವರಜೀ
ಮಹಾರಾಜ ಶಿಷ್ಯರತ್ನ
ಕವಿಕುಲತಿಲಕ ಪೂಜ್ಯ
ಮುನಿರಾಜ

ಶ್ರೀ ಕೀರ್ತಿ ವಿಜಯಜೀ ಮಹಾರಾಜ್

ಇತರ ಭಾಷೆಗಳಲ್ಲಿ

ಗುಜರಾತಿ	....	5000 ಪ್ರತಿಗಳು
ಹಿಂದಿ	....	5000 ಪ್ರತಿಗಳು
ತಮಿಳು	....	5000 ಪ್ರತಿಗಳು
ಇಂಗ್ಲಿಷ್	....	5000 ಪ್ರತಿಗಳು
ಕನ್ನಡ ಮೊದಲನೆಯ ಮುದ್ರಣ		3000 ಪ್ರತಿಗಳು
ಎರಡನೆಯ ಮುದ್ರಣ		5000 ಪ್ರತಿಗಳು
ಮೂರನೆಯ ಮುದ್ರಣ		5000 ಪ್ರತಿಗಳು
ನಾಲ್ಕನೆಯ ಮುದ್ರಣ		1000 ಪ್ರತಿಗಳು

卐

ಸಂಶೋಧಕ :

ನ್ಯಾಯಾಚಾರ್ಯ—ನಾರಾಯಣಾಚಾರ್ಯ

ಮುದ್ರಕರು :

ಎಸ್. ಎನ್. ಸಿಂಹ,

ವಿಶ್ವಬಂಧು ಪ್ರೆಸ್, ಅರಳೇಪೇಟೆ, ಬೆಂಗಳೂರು-2

Phone 3303

ಪ್ರಸ್ತಾಪನೆ

ಸಂಸಾರಚಕ್ರದ ಸರ್ವಧರ್ಮಶಾಸ್ತ್ರಗಳಲ್ಲಿಯೂ ಜೈನಧರ್ಮವು ಅತ್ಯುತ್ಕೃಷ್ಟವಾದುದು. ಜೈನಧರ್ಮದ ಮೂಲತತ್ವದ ವಿಚಾರವನ್ನು ವಿವರಿಸಲು ಅಥವಾ ಬರೆಯಲು ಯತ್ನಿಸುವುದೆಂಬುವುದು ನಿರ್ಮಲ ಆಕಾಶದಲ್ಲಿ ಪ್ರಕಾಶಿಸುತ್ತಿರುವ ಸೂರ್ಯನನ್ನು ತೋರಿಸುವಂತೆ ಅಥವಾ ವಿವರಿಸಿದಂತೆ ಆಗುತ್ತದೆ.

ಜೈನಧರ್ಮವು ಪೂರ್ಣವಾಗಿ ಆಧ್ಯಾತ್ಮಿಕ ದರ್ಶನಕ್ಕೆ ಅನ್ವಯಿಸಿದ್ದು ಪ್ರಕೃತಿಯಲ್ಲಿ ಅಡಗಿರುವ ಭಿನ್ನ ಭಿನ್ನ ಪ್ರಾಣಿವರ್ಗವನ್ನು ಅರಿತು ಅವರ ಉನ್ನತಿಗೆ ಅನುಗುಣವಾಗಿ ಭಿನ್ನ ಭಿನ್ನ ಮಾರ್ಗೋಪಾಯಗಳನ್ನು ಇದರಲ್ಲಿ ತೋರಲಾಗಿದೆ. ಈ ಪುಟ್ಟಪುಸ್ತಕದಲ್ಲಿ ಅವುಗಳ ಹೆಸರುಗಳನ್ನು ವ್ಯಕ್ತಪಡಿಸಲು ಸಹ ಸಾಕಷ್ಟು ಸ್ಥಳಾವಕಾಶವಿಲ್ಲದಿರುವ ಪ್ರಯುಕ್ತ ಅತ್ಯಂತ ಮುಖ್ಯ ಅಂಶಗಳಾದ ಕರ್ಮ, ಈಶ್ವರ, ಕರ್ತ, ಆತ್ಮ, ಸ್ಯಾದ್ವಾದ ಮತ್ತು ಷಡ್‌ದ್ರವ್ಯ, ತಪಶ್ಚರ್ಯ ಇತ್ಯಾದಿ ಅಂಶಗಳನ್ನು ಮಾತ್ರ ಸುಲಭವಾದ ಭಾಷೆಯಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ. ಕತ್ತಲಲ್ಲಿ ಪ್ರಕಾಶವನ್ನು ಬೀರುವುದು ದೀಪದ ಸ್ವಭಾವ. ಅದರಂತೆ ಈ ಪುಸ್ತಕವು, ಜೈನಧರ್ಮದ ಪ್ರಕಾಶವನ್ನು ಎಲ್ಲೆಲ್ಲಿ ಆವಶ್ಯಕವೋ ಅಲ್ಲಲ್ಲಿ ಅದನ್ನು ಹೊರಗೆಡಹುವುದು.

ಜೈನಧರ್ಮದ ಪ್ರಚಾರ ಮತ್ತು ಸಂಸರ್ಗದಿಂದ ಜನರು ಪುನರ್ಜನ್ಮ ಮತ್ತು ಪೂರ್ವಜನ್ಮಗಳು ಉಂಟೆಂದು ನಂಬಿದ್ದಾರೆ. ಅದರಂತೆ, ಜೈನಧರ್ಮದ ಮುಖ್ಯ ಸಿದ್ಧಾಂತಗಳನ್ನು ಜನರು ಒಪ್ಪಿಕೊಳ್ಳುತ್ತಿದ್ದಾರೆ. ಅದರಲ್ಲಿಯೂ ಅಹಿಂಸಾ ತತ್ವದಲ್ಲಿ ಪೂರ್ಣ ವಿಶ್ವಾಸವಿಟ್ಟು ಅದನ್ನು ತಿಳಿದು ಪಾಲಿಸಿಕೊಂಡು ಬರುತ್ತಿದ್ದಾರೆ.

ಜೈನಧರ್ಮವನ್ನು "ರತ್ನಭಂಡಾರ" ಎಂದು ಕರೆಯಬಹುದು ಅದಕ್ಕೆ ಕಾರಣ, ಸ್ಯಾದ್ವಾದ, ಕರ್ಮ, ಪಂಚಮಹಾವ್ರತ ಇತ್ಯಾದಿ ಮಹದ್ರತ್ನಗಳು ಇದರಲ್ಲಿ ಅಡಗಿರುವುವು. ಅವು ಸ್ವಯಂಪ್ರಕಾಶ ಆದುದಲ್ಲದೆ ತಮ್ಮ ಪ್ರಕಾಶದಿಂದ ಇತರ ಅಂಶಗಳನ್ನು ಪ್ರಕಾಶಕ್ಕೆ ತರುವುವು. ಆದರೆ ಇವುಗಳ ಪ್ರಚಾರವೇ ಮುಖ್ಯವಾಗಿ ಅವಶ್ಯಕವಾದುದು, ಈ ಪ್ರಚಾರಕ್ಕೆ ಈ ಪುಸ್ತಕವು ಸ್ವಲ್ಪವಾದ ಪ್ರಯತ್ನವು.

ಪೂಜ್ಯ ಮುನಿರಾಜ ಕವಿಕುಲತಿಲಕ ಶ್ರೀ ಕೀರ್ತಿ ವಿಜಯಜೀ ಮಹಾರಾಜರವರಿಗೆ ಈ ಕಾರ್ಯದಲ್ಲಿ ವಿಶೇಷ ಮಮತೆಯಿದೆ. ಅವರು ತಮ್ಮ ಪ್ರವಾಸದ ಕಾಲದಲ್ಲಿಯೂ ಮತ್ತು ಚಾತುರ್ಮಾಸದ ಅವಧಿಯಲ್ಲಿಯೂ ನಡೆಸಿದ ಚರ್ಚೆ, ಮಾಡಿದ ಭಾಷಣ ಮತ್ತು ನೀಡಿದ ಉಪದೇಶಗಳ ಕಾಲದಲ್ಲಿ ಜೈನಧರ್ಮದ ಮುಖ್ಯೋದ್ದೇಶ ಮತ್ತು ತತ್ವಗಳನ್ನು ಹೊರಗೆಡಹದೆ ಇರುತ್ತಿರಲಿಲ್ಲ.

ಇಂದಿನ ಅನೇಕ ಜಟಿಲ ಸಮಸ್ಯೆಗಳಿಗೆ ಪರಿಹಾರೋಪಾಯಗಳು ಜೈನ ಧರ್ಮದಲ್ಲಿ ಅಡಗಿವೆಯೆಂಬ ವಿಷಯವನ್ನು ವಿವಿಧ ಧರ್ಮಗಳ ಪಂಡಿತೋತ್ತಮರು ಮಾತ್ರವಲ್ಲದೆ ಸಮಾಜದ ವಿವಿಧ ಶಾಸ್ತ್ರೋತ್ತಮರೂ ಸಹ ಇದನ್ನು ಒಪ್ಪಿದ್ದಾರೆ. ಈ ವಿಜ್ಞಾನ ಯುಗದಲ್ಲಿ, ವೈಜ್ಞಾನಿಕರು, ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ, ದೀರ್ಘಕಾಲ ಪರಿಶೋಧನೆ ನಡೆಸಿ ಜಗತ್ತಿನ ಮುಂದಿಟ್ಟ ಸಿದ್ಧಿಯ ಅಂಶವನ್ನು ಜೈನಧರ್ಮದ ಅವಲಂಬಿಗಳಾದ ಪುಣ್ಯಪುರುಷರು, ಮತ್ತು ಸಾಧು ಸಂತರು ಮೊದಲೇ ಹೊರಗೆಡಹಿರುವುದು ಪರಮಾಶ್ಚರ್ಯಕರವಾದ ವಿಷಯ.

ಈ ಸಣ್ಣ ಪುಸ್ತಕಕ್ಕೆ ದೀರ್ಘವಾದ ಪ್ರಸ್ತಾವನೆಯು ಅನಾವಶ್ಯಕ. ಈ ಪುಟ್ಟಪುಸ್ತಕದ ಕೊನೆಯಲ್ಲಿ, ಜೈನ ಧರ್ಮದ ಮಹತ್ವ, ಶ್ರೇಷ್ಠತ್ವ ಮತ್ತು ಧ್ಯೇಯವನ್ನು ಕುರಿತು ವಿಖ್ಯಾತರೂ ಮತ್ತು ಪಂಡಿತರೂ ತಮ್ಮ ತಮ್ಮ ಯಾವ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆಯೋ ಅವುಗಳನ್ನು ಓದಿ ಈ ಪುಸ್ತಕವನ್ನು ಒದಗಿಸಿದ ಪೂಜ್ಯ ಮುನಿರಾಜ ಶ್ರೀ ಕೀರ್ತಿ ವಿಜಯಜೀ ಮಹಾರಾಜರವರಿಗೆ, ನಾನು ಬಹಳ ಕೃತಜ್ಞ.

ದಿವ್ಯ.

ಎರಡು ಮಾತು

ಸಮುದ್ರವನ್ನು ಒಂದು ಚಿಕ್ಕಪಾತ್ರೆಯಲ್ಲಿ ಭರ್ತಿಮಾಡಲು ಹೇಗೆ ಅಸಾಧ್ಯವೋ ಅದಕ್ಕಿಂತಲೂ ಜೈನ ಸಿದ್ಧಾಂತಗಳನ್ನು ಈ ಚಿಕ್ಕ ಪುಸ್ತಕದಲ್ಲಿ ತುಂಬುವುದು ಅಧಿಕ ಅಸಾಧ್ಯವು.

ಜೈನ ಸಾಹಿತ್ಯವು ಅತ್ಯಂತ ವಿಶಾಲವಾದುದು. ಒಂದೊಂದು ವಿಷಯ ದಲ್ಲಿಯೂ ಸಾವಿರಾರು ಶ್ಲೋಕಗಳನ್ನು ಈ ವಿಷಮ ಕಾಲದಲ್ಲಿಯೂ ನಾವು ಗಳು ಪಡೆಯುತ್ತಲಿದ್ದೇವೆ. ಈ ಜೈನ ಸಿದ್ಧಾಂತದ ತಿಳುವಳಿಕೆಗೆ ಕ್ರಮಾನು ಸಾರವಾದ ಅಭ್ಯಾಸವು ಬೇಕಾಗಿದೆ.

ಪೂಜ್ಯ ಗುರುದೇವರೊಡನೆ, ಮಹಾರಾಷ್ಟ್ರ, ಮತ್ತು ಕರ್ಣಾಟಕ ಪ್ರಾಂತಗಳಲ್ಲಿ ನಾನು ಪ್ರವಾಸಮಾಡಿದ ಸಮಯದಲ್ಲಿ, ಜೈನಧರ್ಮವೆಂದ ರೇನು ಅದರ ಸಿದ್ಧಾಂತ ಎಷ್ಟು ವಿಶಾಲವಾದದ್ದು, ಎಂಬ ಅಂಶಗಳು ಸಾರ್ವ ಜನಿಕರಿಗೆ ಸುಲಭವಾಗಿ ಅರ್ಥವಾಗುವಂತೆ, ಪುಟ್ಟ ಪುಸ್ತಕವೊಂದನ್ನು ಬರೆ ಯಬೇಕೆಂದು ನನಗೆ ತೋರಿತು. ಆತ್ಮ ಮತ್ತು ಕರ್ಮಗಳಿಗೆ ಸಂಬಂಧಿಸಿದ ವಿಷಯದರಿವು ಜನತೆಗೆ ಉಂಟಾಗುವುದರ ಜೊತೆಗೆ, ಜೈನ ಧರ್ಮವನ್ನು ಅವರು ತಿಳಿದುಕೊಳ್ಳುವುದಲ್ಲದೆ, ಜೈನಧರ್ಮದ ವಿಚಾರದಲ್ಲಿ ಮೂಡಿರುವ ತಪ್ಪು ಅಭಿಪ್ರಾಯವು ಮಾಯವಾಗಲೆಂಬ ಉದ್ದೇಶದಿಂದ ಈ ಪುಸ್ತಕವು ಸಿದ್ಧಗೊಳಿಸಲಾಯಿತು ಜೈನಧರ್ಮದ ವಿಶಾಲ ಸಿದ್ಧಾಂತವನ್ನು ಎಲ್ಲರೂ ಅರಿಯಲಿ ಮತ್ತು ಯತಾರ್ಥವಾದ ತತ್ವವನ್ನು ತಿಳಿದು ಆತ್ಮಕಲ್ಯಾಣದ ಪವಿತ್ರಮಾರ್ಗವನ್ನು ಅವಲಂಬಿಸಿ ಆಚರಣೆಗೆ ತರಲಿ ಎಂಬುದೇ ನನ್ನ ಮಹ ದಾಶೆಯಾಗಿದೆ.

ಮಹಾರಾಷ್ಟ್ರ, ಕರ್ಣಾಟಕ ಮತ್ತು ಇತರ ಪ್ರಾಂತಗಳ ನಿವಾಸಿಗಳಿಗೂ ಸಹ ಈ ಪುಸ್ತಕದಲ್ಲಿ ಅಡಕವಾತರುವ ಮಹದ್ವಿಷಯಗಳನ್ನು ಗ್ರಹಿಸಲು ಅನುಕೂಲಿಸುವಂತೆ, ಗುಜರಾತಿ, ಹಿಂದಿ, ಇಂಗ್ಲಿಷ್ ಮತ್ತು ತಮಿಳು ಭಾಷೆ ಗಳಿಗೆ ಭಾಷಾಂತರಿಸಲಾಗಿದೆ. ಮತ್ತು ೨೦ ಸಹಸ್ರ ಪ್ರತಿಗಳ ಪ್ರಕಟಣೆಗೆ ವ್ಯವಸ್ಥೆ ಮಾಡಲಾಗಿದೆ. ಸಾಹಿತ್ಯ ಪ್ರೇಮಿಗಳೂ ಸಹ ಈ ಕಾರ್ಯದಲ್ಲಿ ತಮ್ಮ

ಔದಾರ್ಯವನ್ನು ತೋರಿ ನೆರವು ನೀಡಿದ್ದಾರೆ ಅವರು ಅದಕ್ಕಾಗಿ ಅಭಿನಂದನಾರ್ಹರು. ಅವಶ್ಯಕತೆ ಒದಗಿದಂತೆಲ್ಲಾ, ಇತರ :ಭಾಷೆಗಳಲ್ಲಿಯೂ ಸಹ ಸಹಸ್ರಾರು ಪುಸ್ತಕಗಳನ್ನು ಪ್ರಕಟಿಸಲಾಗುವುದು.

ನಾನು ಒಳ್ಳೆಯ ಲೇಖಕನಲ್ಲ. ಅಲ್ಪಮತಿಯಿಂದ ನಾನು ಮಾಡಿರುವ ಕೆಲಸವು ಗುರುವರ್ಯರ ಆಶೀರ್ವಾದದಿಂದ ಸಫಲವಾಯಿತು. ಜೈನ ಧರ್ಮ ಪ್ರಚಾರ ಆಗಬೇಕೆಂಬ ಉತ್ಕಟ ಇಚ್ಛೆ ನನ್ನನ್ನು ಈ ಕಾರ್ಯಕ್ಕೆ ದೂಡಿತು. ಈ ಪುಟ್ಟ ಪುಸ್ತಕವು ಸರ್ವಾಂಗ ಸುಂದರವಾಗಿ ಇರಲು ಪೂಜ್ಯ ಗುರುದೇವರು ಇತ್ತ ಅಮೂಲ್ಯ ಸಲಹೆಗಳನ್ನು ಕೃತಜ್ಞತಾಪೂರ್ವಕವಾಗಿ ಅಂಗೀಕರಿಸಿದೆ. ಈ ಪುಟ್ಟ ಪುಸ್ತಕದಲ್ಲಿ ತೋರಿಸಲ್ಪಟ್ಟ ಯಾವತ್ತು ಒಳ್ಳೆಯ ಮತ್ತು ಉಪಯುಕ್ತ ಅಂಶಗಳೂ ಪೂಜ್ಯರಾದ ಗುರುದೇವರ ಕೃಪೆಯ ಪಲಿತವೇ ಹೊರತು ನನ್ನದೇನೂ ಇಲ್ಲ. ಆದ್ದರಿಂದ ನಾನು ಗುರುದೇವರಿಗೆ ಎಷ್ಟರ ಮಟ್ಟಿನ ಕೃತಜ್ಞತೆಯನ್ನು ಅರ್ಪಿಸಿದರೂ ಅದು ಅತ್ಯಲ್ಪವಾಗಿರುವುದು.

ಇದರಲ್ಲಿ ಮಾನವನ ಸಹಜ ಸ್ವಭಾವ ಸಿದ್ಧವಾದ ತಪ್ಪುಗಳೇನಾದರೂ ಇದ್ದ ಪಕ್ಷದಲ್ಲಿ ವಿದ್ವಜ್ಜನರು ಅದರ ಮೇಲೆ ಧ್ಯಾನವಿಡದೇ ಈ ನನ್ನ ಉತ್ಸಾಹವನ್ನಭಿವೃದ್ಧಿಗೊಳಿಸುವರೆಂದು ಆಶಿಸುತ್ತಾ ಪೂಜ್ಯ ಗುರುದೇವರ ಚರಣ ಕಮಲಗಳಲ್ಲಿ ಈ ಪುಸ್ತಕವನ್ನು ಅರ್ಪಿಸಿ ನಾನು ಸ್ವಲ್ಪ ಕೃತಾರ್ಥತೆಯನ್ನನುಭವಿಸುತ್ತೇನೆ.

ಮುನಿ ಕವಿರಾಜ

ಪೂಜ್ಯಪಾದ ದಕ್ಷಿಣ ದೀಪಕ್ ಆಚಾರ್ಯ
ಗುರುದೇವ ಶ್ರೀಮದ್ ವಿಜಯಲಕ್ಷ್ಮಣ ಸೂರೀಶ್ವರಜೀ
ಮಹಾರಾಜರವರ ಚರಣರೇಣು ಮುನಿಕೀರ್ತಿವಿಜಯ.

ಮದರಾಸ್, (ವಿಕ್ರಮ ಸಂ|| ೨೦೧೦, ಮಾರ್ಗಶಿರ ಕೃಷ್ಣ ದಶಮಿ,
ದಾದಾವಾಡಿ. ಪಾರ್ಶ್ವನಾಥ ಜನ್ಮ ಕಲ್ಯಾಣ)

★

ಪೀಠಿಕೆ

ಶ್ರೀ ಋಷಭದಾಸಜೀ ಜೈನರು, ಜೈನ ಶಾಸನದ ಯಥಾರ್ಥ ಸೇವೆಯ ಭಾವನೆಯುಳ್ಳಸೇವಕರು. ಅವರ ಸಾಹಿತ್ಯ ಪ್ರೇಮವು ಬಹಳ ಪ್ರಶಂಸನೀಯವಾದುದು. ಸಾಹಿತ್ಯದ ಪ್ರಚಾರಕ್ಕಾಗಿ ಬಹಳ ಶ್ರಮ ಪಡುತ್ತಿರುವವರು ಮತ್ತು ಮಾಡಬೇಕಾದ್ದೆಲ್ಲವನ್ನೂ ಮಾಡುತ್ತಿರುವರು. ಸ್ಥಾನಿಕ ಅನೇಕ ಸಂಸ್ಥೆಗಳ ಕಾರ್ಯವಾಹಕರಾಗಿ ಜೈನ ಮತ್ತು ಜೈನೇತರ ಸಮಾಜದಲ್ಲಿಯೂ ಒಳ್ಳೇ ಸ್ಥಾನವನ್ನು ಧರಿಸಿರುವರು.

ಇವರು ಈ ವರ್ಷ ಮದರಾಸು ಆಂಧ್ರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ ನಿಯುಕ್ತರಾಗಿರುವವರು ಇವರು ಈ ಪೀಠಿಕೆಯನ್ನು ಸಹರ್ಷವಾಗಿ ಬರೆದು ಈ ಪುಸ್ತಕದ ಸುಂದರತೆಯನ್ನು ವೃದ್ಧಿಗೊಳಿಸಿರುವರು.

ಪ್ರಕಾಶಕರು.

ವ್ಯಾಧಿಗ್ರಸ್ತನಾದ ವ್ಯಕ್ತಿ ಯಾರೇ ಆಗಲಿ, ತನ್ನ ರೋಗ ನಿವಾರಣೆಯಾಗುವವರೆಗೆ ಸದಾ ಕಾತುರನಾಗಿರುವುದು ಸ್ವಾಭಾವಿಕ ಮತ್ತು ಎಲ್ಲಿಯವರೆಗೆ ಅದರ ನಿವಾರಣೆಗೆ ತಕ್ಕ ಚಿಕಿತ್ಸೆಯ ಸಾಧನೆಯು ಸಿಕ್ಕುವದಿಲ್ಲವೋ ಅಲ್ಲಿಯವರೆಗೆ ಆತನ ಮನೋರಥವು ಈಡೇರದು. ಹಾಗೆಯೇ ಮಾಂಸ, ರಕ್ತ ಮತ್ತು ಮಲ ಮೂತ್ರ ಇತ್ಯಾದಿ ಅಶುಚಿ ಪದಾರ್ಥಗಳಿಂದ ತುಂಬಿದ ದುರ್ಗಂಧವಾದ ದೇಹವೆಂಬ ಕಾರಾಗೃಹದಲ್ಲಿ ಜನ್ಮ-ಜರಾ ಮೃತ್ಯುರೂಪೀ ಮಹಾರೋಗದಿಂದ ಮುಕ್ತರಾಗಬೇಕೆಂಬ ಆತುರ ಪೂರ್ವಕವಾದ ಅಭಿಲಾಷೆಯು ಮೇಧಾವಿಗಳಲ್ಲಿ ಉದ್ಭವಿಸುವುದು ಸ್ವಾಭಾವಿಕವೇ ಮತ್ತು ಈ ವಿಷಯದಲ್ಲಿ ಅನೇಕ ವಿಧವಾದ ವಿಚಾರಗಳೂ ತರ್ಕವಿತರ್ಕಗಳೂ ಸಹ ಉಂಟಾ

ಗುವುದು ಅನಿವಾರ್ಯವೆ. ಮಾನವ ವರ್ಗದ ಈ ವಿಧವಾದ ಸದ್ವಿಚಾರಗಳಿಗೆ 'ತತ್ವಗವೇಷಕವೃತ್ತಿ' (Philosophic attitude) ಎಂದು ಹೆಸರು ಮುಖ್ಯವಾಗಿ ನಮ್ಮ ಭಾರತಿಯರಲ್ಲಿ ಆತ್ಮಶ್ರದ್ಧೆಯ ಪ್ರಬಲ ಸಂಸ್ಕಾರಗಳು ಇರುವುದರಿಂದ ಅವರಿಗೆ ತತ್ವದರ್ಶನದಲ್ಲಿ ಪ್ರಬಲರಾದ ಮನನ ಮಂಥನ ಮತ್ತು ಅಧಿಕ ಪ್ರವೇಶವೂ ಇರುವುದರಿಂದ ಮುಕ್ತಿವಾದವೇ ನಮ್ಮ ದೇಶದ ಮಹಾ ಮಂತ್ರವಾಗಿರುವುದು. ಅಲ್ಲದೆ "ಸಾ ವಿದ್ಯಾ ಯಾ ವಿಮುಕ್ತಯೆ" ಎಂಬ ಬ್ರಹ್ಮವಾಕ್ಯವು ಭಾರತದ ದಶದಿಕ್ಕುಗಳಲ್ಲಿಯೂ ಪ್ರಸರಿಸಿದೆ. ಆದರೇ ಈ ಮುಕ್ತಿಮಾರ್ಗವನ್ನು ಇಷ್ಕಂಟಕವಾಗಿಯೂ, ನಿರಾಬಾಧೆಯಾಗಿಯೂ ಮತ್ತು ಸುಲಭ ಪ್ರಾಪ್ಯವಾಗಿಯೂ ಮಾಡುವುದರಲ್ಲಿ ಆರ್ಹತ ದರ್ಶನಕ್ಕೇ ಸರ್ವೋಚ್ಚಸ್ಥಾನವು ಕೊಡಲ್ಪಟ್ಟಿರುವುದು ಮುಕ್ತಿಮಾರ್ಗದ ಸಿದ್ಧಿಗಾಗಿ ವ್ಯವಸ್ಥಾಪೂರ್ವಕ ಪದ್ಧತಿಯುಳ್ಳ ಸಾಧನ ಸಾಮಗ್ರಿಗಳ ವರ್ಣನೆಯು ಸರ್ವಾಂಗ ಸುಂದರವಾದ ರೀತಿಯಲ್ಲಿ ಜೈನ ದರ್ಶನದಲ್ಲಿ ಕಂಡುಬರುವ ಹಾಗೆ ಮತ್ಯಾವ ದರ್ಶನಗಳಲ್ಲಿಯೂ ಕಾಣಬರುವುದಿಲ್ಲ.

ಯದ್ಯಪಿ ಅಹಿಂಸಾ, ಸತ್ಯ, ಆಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಇತ್ಯಾದಿ ಪಂಚಮೂಲ ತತ್ವಗಳು (Fundamental Principles) ಸರ್ವ ಧರ್ಮಗಳಲ್ಲಿಯೂ ತೋರುವುವು. ಆದರೆ ಅವುಗಳನ್ನು ಜೀವನ ಕ್ರಮದಲ್ಲಿ (Practicable in the life) ಯಾವ ರೀತಿ ಆಚರಣೆಗೆ ತರಬೇಕೆಂಬುದನ್ನು ಜೈನ ಧರ್ಮವು ಸರಳ ಮತ್ತು ಸಿದ್ಧವಾದ ಉಪಾಯದಲ್ಲಿ ಸುಲಭ ರೀತಿಯಲ್ಲಿ ಸೂಚಿಸಿರುವುದು ಪ್ರಸಂಶನೀಯ.

ಅರ್ಥಾತ್ ಉತ್ತರೋತ್ತರ ವಿಕಾಸಶ್ರೇಣಿ (Evolutionary Spirtiue at tadder) ಯಾವುದನ್ನು ಜೈನ ಪರಿಭಾಷೆಯಲ್ಲಿ ಗುಣಸ್ಥಾನ ಎಂದು ಹೇಳುತ್ತಾರೋ ಮತ್ತು ಜೀವನದ ಭಿನ್ನ ಭಿನ್ನ ಅವಸ್ಥೆಗಳು ಯಾವುದನ್ನು ಮಾರ್ಗಣಾದ್ವಾರ (Classified groups) ವೆಂಬುದಾಗಿ ಹೇಳುತ್ತಾರೆಯೋ ಅವು ಬಹಳ ವಿಚಾರಣೀಯ ಮತ್ತು ಮನನೀಯವಾದ ವಿಷಯಗಳು. ಅವುಗಳ ಅಧ್ಯಯನದಿಂದ ಜೈನ ದರ್ಶನದ ವಿಶೇಷತೆಯು ಸ್ವತಃ ಅನುಭವದಲ್ಲಿ ಬರದೇ ಇರಲಾರದು.

"ಯುಕ್ತಿಭಾವಂಭವೇತ್ತತ್ತ್ವಂ ನ ತತ್ವಂಯುಕ್ತಿವರ್ಜಿತಂ" ಎಂದು ಜೈನ ಸಿದ್ಧಾಂತವು ಯಾವ ವಿಷಯವನ್ನೂ ಯುಕ್ತಿಯಿಂದ ಭೋಧಿಸುವ ಶೈಲಿಯು ಬಹಳ ಸುಂದರವಾಗಿರುವುದು. ಆದ್ದರಿಂದ ಯಾವ ಕಾರ್ಯ ದಲ್ಲೂ ಅದರ ಸಾಧಕ ಭಾಧಕ ದ್ಯೋತಕ ವಿಘಾತಕ, ಪೋಷಕ, ಶೋಷಕ ಆದಿ ಸರ್ವ ವಿಷಯಗಳ ಮೇಲೆ ಅತಿ ಗಂಭೀರವಾದ ವಿವೇಚನೆಯು ಜೈನ ದರ್ಶನದಲ್ಲಿಯೇ ಕಾಣಲ್ಪಡುವುದು. ಇದಕ್ಕೆ ಮುಖ್ಯವಾದ ಕಾರಣವು ಜೈನ ದರ್ಶನದ ಸರ್ವಾಂಗ ಸುಂದರವಾದ ಸ್ಯಾದ್ವಾದವೆಂಬ ನ್ಯಾಯವೇ. ಇದು (Central Dotcrine) ಕೇಂದ್ರಿತ ಸಿದ್ಧಾಂತವೆಂಬುದಾಗಿ ತಿಳಿಯ ಲ್ಪಡುತ್ತೆ.

ಸ್ಯಾದ್ವಾದವು ಜೈನ ಧರ್ಮದ ಮುಖ್ಯ ಅಂಶವಾಗಿದೆ. ಇದನ್ನು 'ಅನೇಕಾಂತವಾದ' ಆಥವ 'ಅಪೇಕ್ಷವಾದ' ಎಂದು ಕರೆಯುವುದೂ ಉಂಟು. ಪಾಶ್ಚಾತ್ಯ ಪಂಡಿತೋತ್ತಮರು ಇದನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಇದು ಸಂಸಾರದಲ್ಲಿ ಸರ್ವದರ್ಶನ ಸಂಘಟನೆಯನ್ನುಂಟು ಮಾಡುವ (Unifiying force) ಮಹಾಶಕ್ತಿಯನ್ನು ಹೊಂದಿದೆಯೆಂದು ಸಹ ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಸ್ಯಾದ್ವಾದ ಪ್ರಯೋಗದಿಂದ ಜಗತ್ತಿನ ನಿಖಿಲ ಪರಸ್ಪರ ವಿಚಾರಗಳ ವಿರೋಧ ಮತ್ತು ವೈಮನಸ್ಯಗಳು ಸಂತೋಷಕರವಾಗಿ ಸಮಾಧಾನವಾಗುವುವು. ಆದ್ದರಿಂದ ಈ ಸ್ಯಾದ್ವಾದ ವನ್ನು (Compromising System of Philosophy) ಸಮಾಧಾನ ಮತ್ತು ಶಾಂತಿಕಾರಕವಾದ ದರ್ಶನವೆಂದು ಹೇಳಬಹುದು.

ವಿಶ್ವವಿಖ್ಯಾತ ವಿಜ್ಞಾನಿ ಡಾ|| ಈನ್‌ಸ್ಟೀನರವರ ಸಂಕ್ಷೇಪ ವಾದವು (Theory of Relativity) ಜೈನ ಧರ್ಮದ ಸ್ಯಾದ್ವಾದದಲ್ಲಿ ಅಡಕವಾ ಗಿರುವ ಮಹಮಂಶಗಳಲ್ಲಿ ಒಂದಾಗಿದೆ. ತತ್ವನಿರ್ಣಯಕ್ಕೆ ಅತ್ಯುತ್ತಮ ಸಾಧನ ಸ್ಯಾದ್ವಾದವಾಗಿರುವುದರಿಂದ ಜೈನದರ್ಶನಕ್ಕೆ ಇತರ ದರ್ಶನಗಳಿಗಿಂತ ಹೆಚ್ಚಿನ ಪ್ರಾಧಾನ್ಯ ದೊರೆತಿದೆ. ಜೈನ ದರ್ಶನದಲ್ಲಿ ಕಪೋಲಕಲ್ಪಿತ ಕಲ್ಪನೆ (Imaginary Conceptions) ಗಳಿಗಾಗಲಿ ಅಥವ ಭ್ರಮೆಗಾಗಲಿ (Superstitions) ಸ್ವಲ್ಪವೂ ಎಡೆಯಿಲ್ಲ. ಪ್ರಕೃತಿ ನಿಯಮಗಳಿಗೆ ಅನುಗುಣವಾಗಿಯೂ ಸುವ್ಯವಸ್ಥಿತ ಮತ್ತು ವೈಜ್ಞಾನಿಕ ರೀತಿಗಳಿಗನುಗುಣವಾಗಿಯೂ ನಡೆಯುತ್ತಿ

ರುವ ವಿಶ್ವವ್ಯವಹಾರದ ಮೂಲತತ್ವಗಳ ಯಥಾರ್ಥ ವಿವರಣೆಯು ಜೈನ ಧರ್ಮದಲ್ಲಿ ಅಡಕವಾಗಿದೆ, ಆಧುನಿಕ ವೈಜ್ಞಾನಿಕರು ಅದನ್ನು (Rationalistic School Philosophy) ಪ್ರಮಾಣಸಿದ್ಧ ಮತ್ತು "ಹೇತುವಾದಿ ದರ್ಶನ ಶಾಸ್ತ್ರ" ಎಂದು ಕರೆಯುತ್ತಾರೆ. ವೈಜ್ಞಾನಿಕರು ತಮ್ಮ ಮೇಧಾಶಕ್ತಿಯ ಮೂಲಕ ನಡೆಸಿದ ಪರಿಶೋಧನೆಗಳಿಂದ ಗಳಿಸಿದ ಸಿದ್ಧಿಯ ಅಂಶಗಳು ಬಹು ಪೂರ್ವದಲ್ಲಿಯೇ ಜೈನ ಸಿದ್ಧಾಂತಗಳಲ್ಲಿ ವಿವರಿಸಲ್ಪಟ್ಟಿವೆ. ಉದಾಹರಣೆಗಾಗಿ ಧ್ವನಿಯ ಗತಿ ಶಕ್ತಿ ಮತ್ತು ಅದರ ಆಕೃತಿ (Sound and its velocity etc.) ಈಥರ್ (Ether) ಇವುಗಳ ಸದ್ಭಾವ ಮತ್ತು ಉದ್ಯೋತ (Light) ಪ್ರಭೆ ಕತ್ತಲು, ಛಾಯೆ, ಆತಪ್ಯ ಇತ್ಯಾದಿಗಳ ಪರಮಾಣಗಳು, ಮತ್ತು ಪದಾರ್ಥದ ಅಂತರ ಪರಿಣಮನ (Inter Penetration) ವನಸ್ಪತಿಗಳ ಸಂಜ್ಞೆ (Instincts and feelings) ಜಲಕ್ಕೆ ಸಂಬಂಧಿಸಿದ ಆಮ್ಲಜನಕ ಮತ್ತು ಜಲಜನಕ (Oxygen and Hydrogen) ಜಲಬಿಂದುವಿನ ಸೂಕ್ಷ್ಮ ಜಂತು ಮತ್ತು ಪರಮಾಣು (Molecules and atoms) ಇತ್ಯಾದಿ ಅನೇಕ ವೈಜ್ಞಾನಿಕ ವಿಷಯಗಳ ವರ್ಣನೆಯು ಸಾವಿರಾರು ವರ್ಷಗಳ ಹಿಂದಿನ ಜೈನ ಶಾಸ್ತ್ರದಲ್ಲಿ ಅಡಗಿದೆ. ಎಲೆಕ್ಟ್ರೋನ್ ಮತ್ತು ಪ್ರೋಟೋನ್ (Electrons and protones) ಎಂಬ ವಸ್ತುಗಳೇ ವಿಜ್ಞಾನದಲ್ಲಿ ಅತಿ ಸೂಕ್ಷ್ಮವಾದ ವಸ್ತುವೆಂಬುದಾಗಿ ಖ್ಯಾತಿ ಹೊಂದಿವೆ. ಆದರೆ ಜೈನಧರ್ಮದ ಕಾರ್ಮಿಕವರ್ಗದ ಪರಮಾಣುಗಳು (Karmic molecules) ಅತಿ ಸೂಕ್ಷ್ಮವಾದುವು. ಯಾವ ಸೂಕ್ಷ್ಮದರ್ಶಕ ಯಂತ್ರಗಳಿಗೂ ಗೋಚರವಾಗುವುದಿಲ್ಲ. ಅವು ಮತೀಂದ್ರಿಯ ಜ್ಞಾನದರ್ಶನ ಗ್ರಾಹ್ಯ (Ultramicro molecules) ವೆಂದು ಖ್ಯಾತಿಹೊಂದಿದೆ. ಎಲೆಕ್ಟ್ರೋನ್ ಮತ್ತು ಪ್ರೋಟೋನ್ (Electrone and Protone) ಗಳು ಸೂಕ್ಷ್ಮದರ್ಶಕ ಯಂತ್ರ (microscope) ಪ್ರಯೋಗದಲ್ಲಿ ಗೋಚರವಾಗುವುದು. ಆದರೆ ಜೈನಧರ್ಮದ ಕಾರ್ಮಿಕ ವರ್ಗದ ಪರಮಾಣು (Karmic molecules) ಗಳು ಯಾವ ಸೂಕ್ಷ್ಮದರ್ಶಕಯಂತ್ರಪ್ರಯೋಗಕ್ಕೂ ಗೋಚರವಾಗುವುದಿಲ್ಲ ಅದೇರೀತಿ ಜೈನಧರ್ಮದ ಆತ್ಮವಾದ, ತತ್ವವಾದ, ಕ್ರಿಯಾವಾದ, ತರ್ಕವಾದ, ನ್ಯಾಯವಾದ, ಇತ್ಯಾದಿ ಅಂಶಗಳು ಬಹಳ ಗಹನವಾದುವು

ಮತ್ತು ಸೂಕ್ಷ್ಮವಾದುವು. ವಿಚಾರಶೀಲರಾದ ವಿದ್ಯಾರ್ಥಿಗಳು ಇವುಗರ ಅಧ್ಯಯನದಿಂದ ಸಹಜವಾದ ವಿಶ್ವಾಸವನ್ನು ಹೊಂದುವುದೇನೆಂದರೆ ಇದರ ನಿರ್ಮಾಪಕರು ನಿಶ್ಚಯವಾಗಿ ಕೇವಲ ಮಹಾ ಮೇಧಾವಿ ಮತ್ತು ಪ್ರಾಜ್ಞರು ಮಾತ್ರವಲ್ಲದೆ ಸರ್ವಜ್ಞ ಮತ್ತು ಸರ್ವದರ್ಶಿಗಳಾಗಿರುವರು, ಇಲ್ಲದಿದ್ದರೆ ಇಂಥಾ ಅಪೂರ್ವ ವಿಷಯುಗಳ ಪ್ರರೂಪಣೆಗಳು ಅಸಂಭವೇ. ಸಾಮಾನ್ಯ ಜನರು ಜೈನಧರ್ಮದ ಮಹತ್ವವನ್ನು ಅರಿಯದಿರಬಹುದು. ಆದರೆ, ಮೇಧಾವಿಗಳು (Intellectual class) ಜೈನ ಧರ್ಮದ ಮಹತ್ವದ ಕಡೆಯೇ ಅಕರ್ಷಿತರಾಗಿರುತ್ತಾರೆ ಮತ್ತು ಅದರ ರೂಪರೇಖೆ (Outlines) ಗಳನ್ನು ಅರಿಯಲು ಕಾತುರರಾಗಿದ್ದಾರೆ. ಜೈನ ಸಾಹಿತ್ಯವನ್ನು ಕುರಿತು ದೇಶದೇಶಾಂತರಗಳಿಂದ ಪ್ರಾರ್ಥನಾಪತ್ರಗಳು ನಮ್ಮ ಜೈನ ಮಿಷನ ಸೊಸೈಟಿ (Jain mission Society) ಗೆ ಬಂದಿವೆ ಮತ್ತು ಬರುತ್ತಿವೆ. ಜೈನ ಧರ್ಮದ ಭಿನ್ನ ಭಿನ್ನ ವಿಷಯುಗಳನ್ನು ಒಳಗೊಂಡ ನಿಷ್ಕರ್ಷರೂಪದ (Nut shell form) ಒಂದು ಪುಟ್ಟ ಪುಸ್ತಕವು ನಮ್ಮಲ್ಲಿ ಇರದ ಪ್ರಯುಕ್ತ ಈ ಪ್ರಾರ್ಥನೆಯನ್ನು ಈಡೇರಿಸುವುದು ಹೇಗೆ ಎಂಬ ಪ್ರಶ್ನೆ ಇತ್ತು. ದೈವಯೋಗದಿಂದ, ಈ ವರ್ಷ ನಮ್ಮ ನಗರದ ಪುಣ್ಯೋದಯದಿಂದ ಮಹಾಪ್ರಭಾವಶಾಲಿ ಪ್ರಖ್ಯಾತವಕ್ತಾ ಪೂಜ್ಯ ಆಚಾರ್ಯ ಮಹಾರಾಜ್‌ರಾದ ಶ್ರೀ ಶ್ರೀ ಶ್ರೀ ೧೦೦೮ ಶ್ರೀಮದ್ ವಿಜಯ ಲಕ್ಷ್ಮಣ ಸೂರೀಶ್ವರೀ ಮಹಾರಾಜರವರ ಚಾತುರ್ಮಾಸವು ಇಲ್ಲಿ ಸಂಭವಿಸಿತು. ಅವರ ವಿದ್ವತ್ಪೂರ್ಣ ವ್ಯಾಖ್ಯಾನವನ್ನು ಕೇಳಿದ ಮೇಲೆ, ಜೈನ ಧರ್ಮದ ಸಾರವನ್ನು ಒಳಗೊಂಡ ಒಂದು ಪುಸ್ತಕವನ್ನು ಪ್ರಕಟಿಸಲು ಅವರನ್ನು ಪ್ರಾರ್ಥಿಸಿದೆ. ಸಂತೋಷದ ಉತ್ತರ ದೊರೆಯಿತು. ಅವರು ತಮ್ಮ ಮುಖ್ಯ ವಿದ್ವತ್ ಶಿಷ್ಯ ಮುನಿಶ್ರೀ ಕೀರ್ತಿ ವಿಜಯಜೀ ಮಹರಾಜ್‌ರವರಿಗೆ ಈ ಕರ್ತವ್ಯದ ಜವಾಬ್ದಾರಿಯನ್ನು ವಹಿಸಿದರು. ಪೂಜ್ಯ ಮುನಿಶ್ರೀಯವರು ಗುರುಗಳ ಆಜ್ಞಾನುಸಾರ ಸರಳವಾಗಿಯೂ ಮತ್ತು ಸುಂದರವಾದ ಶೈಲಿಯಲ್ಲಿಯೂ ಸಕಲ ಮುಖ್ಯಾಂಶಗಳ ಸಾರವಾದ ಈ ಪುಸ್ತಕವನ್ನು ಸಿದ್ಧಗೊಳಿಸಿದರು. ಬಹಳ ಯುಕ್ತಿಗಳಿಂದಲೂ ಮತ್ತು ಬುದ್ಧಿಗಮ್ಯವಾದ ಅಂಶಗಳಿಂದಲೂ ಕೂಡಿರುವ ಈ ಪುಸ್ತಕದಿಂದ ಸಾಮಾನ್ಯ ಜನರು ಬಹುಮಟ್ಟಿನ ಲಾಭವನ್ನು ಹೊಂದಬಹುದು. ಈ ಪೂಜ್ಯರಾದ ಮುನಿವರ್ಯರ ವಿಷಯದಲ್ಲಿ

ಪ್ರಶಂಸನೀಯವಾದ ಎರಡು ಮಾತುಗಳನ್ನು ಹೇಳದಿರಲು ಸಾಧ್ಯವಿಲ್ಲ. ಏಕೆಂದರೆ ಕೆಲವು ದಿನಗಳವರಿವಿಗೂ ಶ್ರೀಗಳವರ ಸತ್ಸಂಗದ ಲಾಭ ಮತ್ತು ಅವರ ಪ್ರಶಸ್ತ ಪುರುಷಾರ್ಥದ ಅನುಭವ ನನಗೆ ಚೆನ್ನಾಗಿ ಲಭಿಸಿತು. ಅವರು ಅಪ್ರತಿಮ ಕಾರ್ಯಕುಶಲರು ಮತ್ತು ಕುಶಾಗ್ರ ಬುದ್ಧಿಶಾಲಿಗಳು. ಕವಿತ್ವ ಶಕ್ತಿಯ ಜೊತೆಗೆ ಲೇಖನಶಕ್ತಿ ಸಹ ಪ್ರಬಲವಾಗಿದೆ. ಮತ್ತು ಜೈನ-ಮಾರ್ಗ ಪ್ರಭಾವನೆ ಮತ್ತು ಧರ್ಮ ಪ್ರಚಾರದಲ್ಲಿ ಬಹುಮಟ್ಟಿಗೆ ಉತ್ಕಂಠಿತರಾಗಿಯೂ ಉತ್ಸಾಹವಂತರಾಗಿಯೂ ಮತ್ತು ಪ್ರಯತ್ನಶೀಲರಾಗಿಯೂ ಇದ್ದಾರೆ. ಈ ಪುಟ್ಟ ಪುಸ್ತಕವನ್ನು ಸಿದ್ಧಗೊಳಿಸಲು ಅವರು ಪಟ್ಟ ಶ್ರಮಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುವುದು ಅತ್ಯಾವಶ್ಯಕವು. ಪಾಠಕವರ್ಗದ ಮಹಾಜನರು ಈ ಪುಟ್ಟ ಪುಸ್ತಕವನ್ನು ಪೂರ್ಣವಾಗಿ ಓದಿ ಜೈನಧರ್ಮದ ರಹಸ್ಯವನ್ನು ಅರಿಯುವುದರ ಜೊತೆಗೆ ಆತ್ಮವಿಕಾಸದ ಯತಾರ್ಥ ಲಾಭವನ್ನೂ ಹೊಂದುವರೆಂದು ನನಗೆ ಭಾವನೆಯಿದೆ.

ಧರ್ಮಾನುಗಾಮಿ,

"ಋಷಭ"

ಮದರಾಸ್, ಮಾಜಿ ಕಾರ್ಯದರ್ಶಿ

೧-೧-೧೯೫೪. ಜೈನ್ ಮಿಷನ್ ಸೊಸೈಟಿ.



ಮಹಾ ಪ್ರಭಾವಿಕ ನವಕಾರ ಮಂತ್ರ

ನಮೋ ಅರಿಹಂತಾಣಂ
ನಮೋ ಸಿದ್ಧಾಣಂ
ನಮೋ ಆಯುರಿಯಾಣಂ
ನಮೋ ಉವಜ್ಝಾಯಾಣಂ
ನಮೋ ಲೋಏ ಸವ್ವಸಾಹೂಣಂ
ಏಸೋ ಪಂಚ ನಮುಕ್ಕಾರೋ
ಸವ್ವ ಪಾವಪ್ಪಣಾ ಸಣೋ
ಮಂಗಳಾನಂಚ ಸವ್ವೇಸಿಂ
ಪಢಮಂ ಹವಇ ಮಂಗಳಂ.

ಮೇಲೆ ಬರೆದಿರುವ ನವಕಾರ ಮಂತ್ರದಲ್ಲಿ 9 ಪದಗಳಿವೆ. ಈ ನವಕಾರಮಂತ್ರವು 14 ಪೂರ್ವಗಳ ಸಾರರೂಪವಾಗಿದೆ ಈ ಮಂತ್ರವು ಅತ್ಯಾಂತ ಪ್ರಭಾವಶಾಲಿ. ಇದರ ಪ್ರಭಾವವು ದೇವ ಮತ್ತು ದಾನವ ರನ್ನು ಆಕರ್ಷಿಸಿದೆ ಸರ್ವ ಮನೋಭಿಷ್ಟಗಳೂ ಇದರಿಂದ ಸಿದ್ಧಿಸುವುವು. ಅಡ್ಡಿ ಆತಂಕಗಳು ದೂರ ಸರಿಯುವುವು ತೊಂದರೆಗಳು ನಿವಾರಣೆಯಾಗುವುವು. ಇದು ಚಿಂತಾಮಣಿ ರತ್ನದಂತಿದೆ. ಕಾಮಧೇನು ಮತ್ತು ಕಲ್ಪವೃಕ್ಷಗಳಂತೆ ಇಚ್ಛೆಯನ್ನು ಈಡೇರಿಸುತ್ತದೆ. ಈ ಮಹಾಮಂತ್ರದ ಜಪದಿಂದ ಕ್ಲಿಷ್ಟ ಸಮಸ್ಯೆಗಳು ಬಗೆ ಹರಿಯುವುವು. ಪಾಪಗಳೆಲ್ಲ ನಿರ್ನಾಮವಾಗುವುವು ಇಹ ಮತ್ತು ಪರಲೋಕಗಳಲ್ಲಿ ಸುಖಶಾಂತಿಗಳು, ಲಭಿಸುವುವು ಋದ್ಧಿ ಮತ್ತು ಸಿದ್ಧಿ ಒದಗುವುದು. ವಿವಿಧ ಕರ್ಮಗಳಿಂದೊದಗುವ ತೊಂದರೆಗಳು ತೊಲಗುವುವು. ಜನ್ಮ ಜನ್ಮಾಂತರಗಳಲ್ಲಿ ಎಸಗಿದ ಪಾಪಗಳು ಮಂಜಿನಂತೆ ಮಾಯವಾಗುವುವು. ಜನ್ಮ-ಮರಣ

ಬಾಧೆ ತಪ್ಪುವುದು, ದುರ್ಗತಿಯ ಘೋರ ದುಃಖದಿಂದ ಆತ್ಮವು ಉದ್ಧಾರವಾಗುವುದು. ಆತ್ಮವು ಕರ್ಮದಿಂದ ದೂರವಾಗಿ ಶುದ್ಧವೂ ಮತ್ತು ನಿರ್ಮಲವೂ ಆಗುವುದು. ಪ್ರಾತಃಕಾಲ ಈ ಮಹಾಮಂತ್ರವನ್ನು ಸ್ಮರಿಸುವುದರಿಂದ ದಿನವೆಲ್ಲಾ ಶುಭಮಯವಾಗಿರುವುದು. ಇಡೀ ಜೀವನವು ಸುಖಕರ. ಮರಣಕಾಲದಲ್ಲಿ ಸ್ಮರಿಸಿದರೆ ಸದ್ಗತಿಪ್ರಾಪ್ತಿ. ನವಕಾರಮಂತ್ರದ ಒಂದೊಂದು ಅಕ್ಷರವನ್ನು ಜಪಿಸಿದರೂ ಅಸಂಖ್ಯ ವರ್ಷಗಳ ಘೋರ ಕರ್ಮಗಳು ವಿನಾಶಹೊಂದುವುವು. ಕಾಯಾವಾಚಾ ಮತ್ತು ಮನಸಾ ಈ ಮಂತ್ರವನ್ನು ಸದಾ ಇದನ್ನು ಜಪಿಸಿ, ನಡೆಯುವಾಗ. ನಿಂತಾಗ, ಕುಳಿತಾಗ ಪ್ರತಿಫಲಾಪೇಕ್ಷೆ ಇಲ್ಲದೆ ಈ ಮಹಾಮಂತ್ರವನ್ನು ಜಪಿಸುತ್ತಿರಿ.

ಆತ್ಮಸಂಭಂಧ ಗುಣಗಳ ಪರಾಕಾಷ್ಠೆಯನ್ನು ಹೊಂದಿದ ಸರ್ವೋತ್ಕೃಷ್ಟವಾದ ಸಿದ್ಧರು ಮತ್ತು ಸಾಧಕರಾದ ಗುಣೀ ಪುರುಷರ ಸ್ತುತಿಯು ಇದರಲ್ಲಿ ಇದೆ. ಗುಣಮಾತ್ರದಪೂಜೆಯೇ ಇದರಲ್ಲಿ ಅಡಗಿರುವುದು. ವ್ಯಕ್ತಿ ಪೂಜೆನೆಯು ಸಂಕೀರ್ಣತೆಯು ಇದರಲ್ಲಿ ಇಲ್ಲ. ಇದು ಮಹಾಸಾಗರಕ್ಕೆ ಸಮಾನವಾಗಿ ವಿಶಾಲವಾಗಿರುವುದು. ಆತ್ಮನ ಉತ್ತರೋತ್ತರ ವಿಕಾಸಕ್ಕೆ ಅನುಕೂಲವಾದ ಸಾಂಸಾರಿಕ ಉತ್ಕೃಷ್ಟ ಪದಗಳು ಇದರಲ್ಲಿ ಹೇಳಲ್ಪಟ್ಟವೆ. ಆದುದರಿಂದ ಈ ಮಂತ್ರವು ಸರ್ವರಿಗೆ ಸಮಾನರೂಪವಾಗಿ ಶ್ರೇಯಸ್ಸು ಮತ್ತು ಕಲ್ಯಾಣವನ್ನುಂಟು ಮಾಡುವುದು.

ನಮೋ ಜಿಣಾಣಂ

ಆರ್ಹದ್ಧರ್ಮ ವೈಶಿಷ್ಟ್ಯ

ಜೈನಧರ್ಮ

ಈ ವಿಶಾಲ ವಿಶ್ವದಲ್ಲಿ ಜೈನ ಧರ್ಮದ ಸ್ಥಾನವು ಇತರ ಧರ್ಮಗಳಿಗಿಂತ ಉನ್ನತವಾದುದು. ಜೈನಧರ್ಮವು ಅನಾದಿಕಾಲದ್ದು. ಜೈನ ಶಬ್ದದಿಂದಲೇ ಇದನ್ನು ತಿಳಿಯಬಹುದು. ರಾಗದ್ವೇಷಾದಿ ಶತ್ರೂನ್ ಜಯತೀತ ಜಿನಃ' ಅರ್ಥಾತ್ ರಾಗದ್ವೇಶಗಳನ್ನು ಯಾರು ನಿರ್ಮಲವಾಗಿ ನಾಶಮಾಡಿರುವರೋ ಅಂತರಂಗ ಶತ್ರುಗಳಾದ ರಾಗದ್ವೇಷಾದಿಗಳನ್ನು ಯಾರು ಜಯಿಸಿರುವರೋ ಅಂತಹವರನ್ನು 'ಜಿನ' ಎಂದು ಕರೆಯಲಾಗುವುದು. ವೀತರಾಗು ಸರ್ವಜ್ಞ, ಸರ್ವಶಕ್ತಿಮಾನ್, ಪರಮಾತ್ಮ ಎಂದು 'ಜಿನ' ನನ್ನು ಕರೆಯುವುದುಂಟು.

ಇವರ ಮೂಲಕ ನಿರೂಪಿಸಲ್ಪಟ್ಟ ಮತ್ತು ಇದರಿಂದ ಉಪದೇಶಿಸಲ್ಪಟ್ಟ ಧರ್ಮವು ಜೈನಧರ್ಮ ಎಂದು ಕರೆಯಲ್ಪಟ್ಟಿತು. ಆದುದರಿಂದ ಇವರ ಅನುಯಾಯಿಗಳನ್ನು ಜೈನರೆಂದು ಕರೆಯುವರು.

ಜಿನ ಎಂಬ ಶಬ್ದವು ದೇವದತ್ತ, ವಿಷ್ಣುಮಿತ್ರ ಎಂಬ ಸಾಂಕೇತಿಕ ಶಬ್ದಗಳ ಹಾಗೆ ಒಂದು ವ್ಯಕ್ತಿಯನ್ನು ಬೋಧಿಸುವುದಿಲ್ಲ. ಆದರೆ ನಿಂಬ, ಆಮ್ರ, ಕದಂಬ, ಘಟ, ಪಟ ಎಂಬ ಶಬ್ದಗಳಂತೆ ಜಾತಿಯನ್ನು ಬೋಧಿಸುವುದು. ಜಾತಿವಾಚಕ ಶಬ್ದಗಳು ಅನಾದಿಕಾಲದಿಂದ ಬಂದಿರುವುವು ಹೀಗೆ ಜಿನ ಶಬ್ದವು ಅನಾದಿಕಾಲೀನವಾದುದರಿಂದ ಆ ಜಿನರಿಂದ ನಿರೂಪಿಸಲ್ಪಟ್ಟ ಧರ್ಮವೂ ಅನಾದಿಕಾಲೀನವೆಂಬುದರಲ್ಲಿ ಸಂದೇಹವಿಲ್ಲವು. ಕ್ರಿಸ್ತಮತಕ್ಕೆ ಏಸುಕ್ರಿಸ್ತನು ಯಾವ ರೀತಿ ಕಾರಣನೋ, ಬೌದ್ಧಮತ ಸ್ಥಾಪನೆಗೆ ಗೌತಮಬುದ್ಧನೆಂತು ಕಾರಣನೋ, ಅದೇ ರೀತಿ ಅನೇಕ ಮಹಾಮಹಿಮರು ಇತರ ಮತಗಳನ್ನು ಪ್ರಪಡಿಸಿದರು. ಆದರೆ ಆ ರೀತಿ ಜೈನಮತವನ್ನು ಯಾವ ಓರ್ವ ವ್ಯಕ್ತಿಯೂ

ಏರ್ಪಡಿಸಲಿಲ್ಲ. ಮಹಾವೀರ ಅಥವ ಋಷಭರಲ್ಲಿ ಯಾರೊಬ್ಬರು ಮತ ಸ್ಥಾಪನೆ ಮಾಡಿದ್ದರೂ, ಬೌದ್ಧಮತದಂತೆ ಇದೂ ಸಹ ಮಹಾವೀರ ಧರ್ಮ ಋಷಭ ಧರ್ಮ ಎಂದು ಕರೆಯಲ್ಪಡುವುದಕ್ಕೆ ಬದಲು ಜೈನ ಧರ್ಮವೆಂದು ಖ್ಯಾತಿಗೊಂಡಿದೆ. ಇದರಿಂದ ಜೈನಧರ್ಮವು ಅನಾದಿಯೆಂದು ನಾವು ಅರಿಯಬಹುದು.

ಜೈನಧರ್ಮಾನುಸಾರದಂತೆ ಕಾಲವೆರಡು. ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂಬುದು ಆ ಎರಡು. ಉತ್ಸರ್ಪಿಣಿ ಮತ್ತು ಅವಸರ್ಪಿಣಿಯಲ್ಲಿ ೨೪-೨೪ ತೀರ್ಥಂಕರರು ಇರುವರು. ತೀರ್ಥಂಕರರನ್ನು ಜಿನ, ಅರಹಂತ ಮತ್ತು ಜಿನೇಶ್ವರ ಎಂದೂ ಕರೆಯುವರು. ಭೂತಕಾಲದಲ್ಲಿ ೨೪ ತೀರ್ಥಂಕರರಿದ್ದರು. ಮುಂದೆ ಸಹ ಭವಿಷ್ಯತ್ಕಾಲದಲ್ಲಿ ೨೪ ತೀರ್ಥಂಕರರು ಆವಿರ್ಭವಿಸುವರು, ಹೀಗೆಯೇ ಅನಂತವಾಗಿ ೨೪ ತೀರ್ಥಂಕರರಾಗುತ್ತಿರುವರು. ತೀರ್ಥಂಕರದೇವರ ಆತ್ಮ ಜನ್ಮಕಾಲದಿಂದಲೇ ವಿಶಿಷ್ಠ ಜ್ಞಾನ ಮತ್ತು ಮಹಾ ಸೌಭಾಗ್ಯಶಾಲಿಯಾಗಿ ಇರುವುದು.

ಈ ತೀರ್ಥಂಕರ ದೇವರ ಆತ್ಮಗಳು ರಾಜ್ಯಸ್ಥಾನದ ಅಧಿಕಾರಗಳನ್ನು ದೂರೀಕರಿಸಿ, ವೈಭವ ವಿಲಾಸಗಳನ್ನು ತ್ಯಜಿಸಿ, ಸನ್ಯಾಸವನ್ನಂಗೀಕರಿಸುವರು: ಸನ್ಯಾಸ ದೀಕ್ಷೆಯನ್ನು ಅಂಗೀಕರಿಸಿದ ಮೇಲೆ ಅನೇಕ ವರ್ಷಗಳ ಕಾಲ, ಪೂರ್ವಜನ್ಮಗಳಲ್ಲಿ ಮಾಡಿದ ಕಠಿಣ ಕರ್ಮಗಳ ನಿವಾರಣೆಗಾಗಿ ತಪಸ್ಸು ಮಾಡುವರು. ಅನೇಕ ಕಠಿಣವಾದ ಮತ್ತು ಕಷ್ಟತರವಾದ ಪ್ರತಿಜ್ಞೆಗಳನ್ನು ಕೈಕೊಂಡು ಅವನ್ನು ಆಚರಣೆಗೆ ತರಲಾಗುವುದು. ಭಯಂಕರವಾದ ಉಪಸರ್ಗಗಳನ್ನು ಅಪೂರ್ವವಾದ ಕ್ಷಮೆಯಿಂದ ಸಹಿಸುವರು. ಸದಾ ಆತ್ಮಧ್ಯಾನದಲ್ಲೇ ಲೀನವಾಗಿರುವರು ಈ ವಿಧವಾದ ಉತ್ಕೃಷ್ಟ ತಪಸ್ಸಿನ ಮೂಲಕ ಜನ್ಮ ಜನ್ಮಾಂತರದ ಪಾಪಗಳನ್ನು ನಾಶಮಾಡಲಾಗುವುದು. ಕರ್ಮಗಳನ್ನು ಭಸ್ಮಮಾಡಿ ಶತ್ರು ಮತ್ತು ಮಿತ್ರರನ್ನು ಏಕರೀತಿ ಕಾಣುವ ವೀತರಾಗ ದೆಶೆಯನ್ನು ಹೊಂದಿ ಕೇವಲ ಜ್ಞಾನ ಅಂದರೇ ಪರಿಪೂರ್ಣ ಜ್ಞಾನ ಮತ್ತು ದರ್ಶನವನ್ನು ಹೊಂದುವರು. ಈ ಜ್ಞಾನ ಮತ್ತು ದರ್ಶನದ ಮೂಲಕ ಮೂರು ಲೋಕಗಳ ಸ್ವರ್ಗ, ಮರ್ತ್ಯ ಮತ್ತು ಪಾತಾಳ-೩ ಕಾಲಗಳ-ಭೂತ, ಭವಿಷ್ಯ ಮತ್ತು ವರ್ತಮಾನ ಕಾಲಗಳ-ಸಮಸ್ತ ಭಾವಗಳ,

ಅಖಿಲ ವಿಶ್ವದ ಮತ್ತು ಕ್ಷಣಕ್ಷಣವೂ ಪರಿವರ್ತನ ಹೊಂದುವ ಪದಾರ್ಥವನ್ನು ಅರಿಯಲಾಗುವುದು ಮತ್ತು ನೋಡಲಾಗುವುದು.

ಈ ವಿಧವಾದ ಪೂರ್ಣಜ್ಞಾನಿ ಪರಮಾತ್ಮನ ಜ್ಞಾನದಿಂದ ಯಾವ ವಸ್ತುವೂ ಅಗೋಚರದಲ್ಲಿರುವುದಿಲ್ಲ. ಯಾರು ಎಲ್ಲಿಂದ ಬಂದರು? ಎಲ್ಲಿಗೆ ಹೋಗುತ್ತಾರೆ? ಅನಂತ ಕಾಲದ ಹಿಂದೆ, ಯಾವಯಾವ ಶರೀರದಲ್ಲಿ ಯಾವ ಯಾವ ಅನುಭವಗಳನ್ನು ಹೊಂದಿದರು? ಯಾವಾಗ ಅವರ ಉದ್ಧಾರವಾಗುವುದು? ಎಂಬ ಅಂಶಗಳನ್ನು ಅಂಗೈಯಲ್ಲಿರುವ ಹಣ್ಣನ್ನು ನೋಡುವಂತೆ ಈ ಜ್ಞಾನಿಗಳು ಕಾಣುವರು. ಪರಮಾತ್ಮನು ವಿಶಿಷ್ಟವನ್ನೂ ನೋಡುವನು ಮತ್ತು ತಿಳಿಯುವನು.

ಪರಮಾತ್ಮನು ವಿದೇಹಮುಕ್ತ ಮತ್ತು ಜೀವನ್ಮುಕ್ತ ಎಂದೆರಡು ರೀತಿ ಕರೆಯಲ್ಪಡುವನು. ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಮತ್ತು ಅಂತರಾಯ ಎಂಬ ನಾಲ್ಕು ಘಾತಿ ಕರ್ಮಗಳನ್ನು ಯಾರು ನಾಶಪಡಿಸುವರೋ ಅಂತಹ ವ್ಯಕ್ತಿಯನ್ನು ಜೀವನ್ಮುಕ್ತನೆಂದು ಕರೆಯಲಾಗುವುದು. ಅದೇ ಆ ವ್ಯಕ್ತಿಯ ಕಡೆಯಜನ್ಮ. ಆ ವ್ಯಕ್ತಿಗೆ ಪುನಹ ಜನ್ಮವಿಲ್ಲ. ಯಾರು ನಾಲ್ಕು ಘಾತಿ ಮತ್ತು ನಾಲ್ಕು ಅಘಾತಿ ಕರ್ಮಗಳನ್ನು (ನಾಮಕರ್ಮ, ಗೋತ್ರಕರ್ಮ, ಆಯುಷ್ಯಕರ್ಮ ಮತ್ತು ವೇದನೀಯ ಕರ್ಮ) ಪೂರ್ಣವಾಗಿ ನಾಶಪಡಿಸುವರೋ ಅಂತಹವರನ್ನು ವಿದೇಹಮುಕ್ತ ಅಥವ ಸಿದ್ಧಪರಮಾತ್ಮರೆಂದು ಕರೆಯಲಾಗುವುದು. ಜೀವನ್ಮುಕ್ತ-ದೇಹದಾರಿ (ಜಿನೇಶ್ವರ ದೇವ) ಪರಮಾತ್ಮನು ಅಖಿಲ ವಿಶ್ವದ ಸಂಪೂರ್ಣಸ್ವರೂಪವನ್ನರಿತು ಜಗತ್ಕಲ್ಯಾಣಕ್ಕಾಗಿ ಮತ್ತು ಸಮಸ್ತ ಸಂಸಾರದ ಸುಖಕ್ಕಾಗಿ ಸರಿಯಾದ ಮಾರ್ಗವನ್ನು ತೋರುತ್ತಾನೆ. ಅಹಿಂಸಾ, ಸತ್ಯ, ಅಸ್ತೇಯ ಬ್ರಹ್ಮಚರ್ಯ ಮತ್ತು ಅಪರಿಗ್ರಹದ ಪಾಠಗಳನ್ನು ಕಲಿಸುವನು. ಆಧಿ, ವ್ಯಾಧಿ ಮತ್ತು ಉಪಾಧಿ ಎಂಬ ೩ ವಿಧವಾದ ಸಂತಪ್ತ ಜೀವರಾಶಿಗಳಿಗೆ ಅಮೃತವಾಣಿಯ ಪ್ರವಾಹದ ಮೂಲಕ ಅಪೂರ್ವ ಉಪದೇಶವೀಯುವನು. ವಿಶ್ವಶಾಂತಿಗೆ ಸೂಕ್ತವಾದ ಸಂದೇಶವೀಯುವನು ಸುಖಕ್ಕೆ ವ್ಯವಸ್ಥೆ ಮಾಡುವನು. ಅಜ್ಞಾನರೂಪವಾದ ಅಂಧಕಾರವನ್ನು ಬಹುದೂರ ಓಡಿಸುವನು ಕಡೆಯಲ್ಲಿ ಮುಕ್ತಿಪುರದ ಶಾಶ್ವತ ಸುಖವನ್ನು ಕೊಡಿಸುವನು

ಆಶ್ಚರ್ಯಕರವಾದ ವಿಶಾಲತ್ವ

ಜೈನಧರ್ಮದ ಸಿದ್ಧಾಂತ ಪ್ರಚುರವಾದದ್ದು ವೀತರಾಗ ಮತ್ತು ಸರ್ವಜ್ಞ:ಮೂಲಕ. ಇದರಿಂದ ಅವು ಬಹಳ ವೈಶಾಲ್ಯದಿಂದ ಕೂಡಿರುವುದಲ್ಲದೆ ಸತ್ಯವಾದುದೆಂದು ವ್ಯಕ್ತಪಡುವುದು. ಆದರಿಂದ ಅವು ವಿಶ್ವೋಪಕಾರಿ ಎಂಬುದು ಸಿದ್ಧವಾಯಿತು. ಈ ಧರ್ಮವು ಸೂಕ್ಷ್ಮಾತಿಸೂಕ್ಷ್ಮ ಪ್ರಾಣಿಗಳನ್ನೂ ಕೂಡ ರಕ್ಷಿಸಲು ಉಪದೇಶಿಸುವುದು.

ಜಗತ್ತಿನ ಪ್ರಾಣಿವರ್ಗವೆಲ್ಲವೂ ಜೀವಿಸಲು ಇಚ್ಛಿಸುತ್ತದೆ. ಮರಣವನ್ನಾರೂ ಅಪೇಕ್ಷಿಸರು. ಎಲ್ಲರೂ ಸುಖವನ್ನೇ ಬಯಸುವರು. ದುಃಖವನ್ನು ಬಯಸರು. ಋಷಿ-ಸಿದ್ಧಿಯಲ್ಲಿ ಮಗ್ನರಾಗಿರುವ ಇಂದ್ರನೇ ಜೀವಿಸಲು ಇಚ್ಛಿಸುವಂತೆ ವಿಷ್ಠೆಯಲ್ಲಿರುವ ಕ್ರಿಮಿಕೀಟಾದಿಗಳು ಸಹ ಜೀವಿಸಿರಲು ಹಂಬಲಿಸುವುವು. ಇಂದ್ರನೂ ಮತ್ತು ಕ್ರಿಮಿಕೀಟಾದಿಗಳೂ ಏಕರೀತಿ ಮರಣಕ್ಕೆ ಅಂಜುವರು ಆದುದರಿಂದ ಪ್ರತಿಯೊಂದು ಪ್ರಾಣಿಯೂ ಮತ್ತೊಂದು ಪ್ರಾಣಿಯನ್ನು ರಕ್ಷಿಸಬೇಕು. ಅವು ಏಕೇಂದ್ರಿಯ ಅಥವ ಪಂಚೇಂದ್ರಿಯಗಳಿಂದ ಕೂಡಿರಲಿ ಪಶುವಾಗಿರಲಿ ಮನುಷ್ಯನಾಗಿರಲಿ ಎಲ್ಲಾ ಪ್ರಾಣಿಗಳನ್ನೂ ರಕ್ಷಿಸಬೇಕು. ಪೃಥ್ವಿ, ಜಲ, ಅಗ್ನಿ ವಾಯು ಮತ್ತು ವನಸ್ಪತಿಗಳಲ್ಲಿ ಸಹ ಜೀವಗಳಿವೆ. ನಮ್ಮ ಶರೀರದಲ್ಲಿ ಆತ್ಮವು ಯಾವ ರೀತಿ ಇದೆಯೋ ಇತರರ ಆತ್ಮಗಳೂ ಸಹ ಅದೇರೀತಿ ಇವೆ. ಜೀವನ ಧರ್ಮ ಸಂಕೋಚ ಮತ್ತು ವಿಕಾಸ ಶೀಲವಾದುದು. ಇರುವೆ ಮತ್ತು ಆನೆಗಳ ಆತ್ಮಗಳಿಗೆ ವ್ಯತ್ಯಾಸವಿಲ್ಲ, ಆನೆಯ ಆತ್ಮವು ಕರ್ಮಫಲದಿಂದ ಇರುವೆಯ ರೂಪದಲ್ಲಿ ಇರಬಹುದು. ಪೃಥಿವೀಕಾಯಿಕ ಜೀವ ಆಪ್ ಕಾಯಿಕ ಆಗಬಹುದು. ನರಕ-ಮನುಷ್ಯಗತಿಯ ಅನುಭವವನ್ನೂ ಹೊಂದಬಹುದು ಕರ್ಮಬಂಧನ ಕಾರಣದಿಂದ ಅದೇ ಆತ್ಮ ಏಕೇಂದ್ರಿಯದಿಂದ ಪಂಚೇಂದ್ರಿಯದವರಿಗೆ ಜೀವಯೋನಿಯನ್ನು ಅಂಗೀಕರಿಸುತ್ತದೆ.

ಸರ್ವರ ಆತ್ಮಗಳೂ ಸಮಾನವಾದವು. ನಮಗೆ ಹೇಗೆ ದುಃಖವಾಗುತ್ತದೋ ಅದೇರೀತಿ ಇತರರಿಗೂ ದುಃಖವಾಗುತ್ತದೆ. ನಾವು ಯಾವ ರೀತಿ ಸುಖವನ್ನು ಅಪೇಕ್ಷಿಸುವೆವೋ ಅದೇ ರೀತಿ ಇತರ ಪ್ರಾಣಿಗಳೂ ಸಹ ಸುಖವನ್ನು ಬಯಸುವುವು. ಆದುದರಿಂದಲೇ ಎಲ್ಲರನ್ನೂ ಏಕರೀತಿಯಲ್ಲಿ ರಕ್ಷಿಸು

ವುದು ಅಗತ್ಯ. ಯಾರು ನಮಗೆ ಬಾಧೆಯುನ್ನುಂಟುಮಾಡುವರೋ ಅಂತಹವರನ್ನು ಕೊಲ್ಲುವುದರಲ್ಲಿ ಯಾವ ಪಾಪವೂ ಇಲ್ಲವೆಂಬುವರಲ್ಲಿ ಭಿನ್ನಾಭಿಪ್ರಾಯುವೇ ಇಲ್ಲ ಎಂದು ಆಲೋಚಿಸುವುದೂ ಸಹ ಹಿಂಸೆಗೆ ಸಂಬಂಧಿಸಿದ್ದಾಗಿದೆ. ಇದು ಸರ್ವಜ್ಞ ಪರಮಾತ್ಮನ ಶಾಸನ. ಯಾವ ಜೀವವೇ ಆಗಲಿ, ನಮಗೆ ತೊಂದರೆ ಅಥವ ನೋವು ಉಂಟುಮಾಡಿದ್ದರೂ ಸಹ ಆ ಜೀವ, ಪ್ರಾಣಿಯಾಗಲಿ ಅಥವ ಮನುಷ್ಯನಾಗಲಿ ಅದನ್ನು ರಕ್ಷಿಸುವುದು ಅಗತ್ಯ.

ಜೈನ ಧರ್ಮವು ಎಷ್ಟು ವಿಶಾಲವಾದುದು? ಎಷ್ಟು ಉಚ್ಚ ಗುಣ ಹೊಂದಿದೆ? ಜಿನೇಶ್ವರ ದೇವರ ಭಾವನೆ ಎಷ್ಟರ ಮಟ್ಟಿಗೆ ಲೋಕ ಕಲ್ಯಾಣಕ್ಕೆ ಅನ್ವಯಿಸದ್ದಾಗಿದೆ. ಸೂಕ್ಷ್ಮ ಅತಿ ಸೂಕ್ಷ್ಮಪ್ರಾಣಿಗಳಿಗೆ ಸಹ ರಕ್ಷಣೆ ಕೊಡುವ ಧರ್ಮ. ಅಲ್ಲದೆ, ಕೆಟ್ಟದ್ದನ್ನೆಣಿಸುವವರಿಗೆ ಮತ್ತು ಕೆಟ್ಟದ್ದನ್ನು ಮಾಡಿದವರಿಗೆ ಸಹ ರಕ್ಷಣೆ ಕೊಡಬೇಕು ಎಂಬುದಲ್ಲದೆ ನಮ್ಮಂತೆ ಅವರೂ ಸಹ ಕ್ಷೇಮದಿಂದ ಇರಬೇಕು ಎಂದು ಬಯಸುವುದಾಗಿದೆ. ಯಾವ ದೇಶದವರಾಗಲಿ, ಯಾವ ಯೋನಿಗೆ ಸೇರಿರಲಿ, ಎಲ್ಲಿ ವಾಸಿಸಿರಲಿ ಮೂರ್ಖ ಅತಿ ಮೂರ್ಖ ಅಪರಾಧಿಗಳಲ್ಲಿ ನಿಕೃಷ್ಟ ಅಪರಾಧಿಯಾಗಿರುವ ವ್ಯಕ್ತಿಗೂ ಸಹ ರಕ್ಷಣೆ ನೀಡಬೇಕು. ಇದೇ ಸರ್ವಜ್ಞ ಪರಮಾತ್ಮ ಜಿನೇಶ್ವರ ದೇವರ ಮುಖ್ಯ ಉಪದೇಶವು.

ನಮ್ಮ ಕಾಲಿಗೆ ಮುಳ್ಳು ಚುಚ್ಚಿಕೊಳ್ಳುತ್ತದೆ. ಕೂಡಲೆ ನಾವು ಕೂಗಿಕೊಳ್ಳುತ್ತೇವೆ ಮತ್ತು ಇತರರ ಸಹಾಯವನ್ನು ಬಯಸುತ್ತೇವೆ. ಇಂತಿರುವಲ್ಲಿ ಇತರರಿಗೆ ಹೇಗೆ ತೊಂದರೆ ಕೊಡುವುದು? ಅವರಿಗೆ ದುಃಖವಾಗುವುದಿಲ್ಲವೆ? ನಮಗೆ ಯಾವ ರೀತಿ ದುಃಖವಾಗುತ್ತದೋ ಇತರರಿಗೂ ಅದೇ ರೀತಿ ದುಃಖವಾಗುವುದಲ್ಲವೇ? ಎಲ್ಲಕ್ಕಿಂತಲೂ ಅಮೂಲ್ಯವಾದುದು ಪ್ರಾಣ. ಕೋಟ್ಯಾಂತರ ರೂಪಾಯಿ ವೆಚ್ಚಮಾಡಿದರೂ ಸಹ ಹೋದ ಪ್ರಾಣವನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ.

ಮನುಷ್ಯನು ಇತರ ಪ್ರಾಣಿಗಳಿಗಿಂತ ಉತ್ತಮನು. ಅತಿ ಬುದ್ಧಿಶಾಲಿ ಮತ್ತು ವಿವೇಕಿಯು. ಆತನ ಪ್ರಥಮ ಕರ್ತವ್ಯ ನಿರ್ಬಲರನ್ನು ರಕ್ಷಿಸುವುದು ತನ್ನ ಭೌತಿಕ ಸುಖಕ್ಕಾಗಿ ಇತರ ಪ್ರಾಣಿಗಳನ್ನು ಅವುಗಳ ಸುಖದಿಂದ ವಂಚಿಸುವುದು ಪಾಶವೀ ವೃತ್ತಿಯಾಗುವುದು.

ತಮ್ಮ ಸಂತೋಷ ಅಥವ ದುಃಖವನ್ನು ಹೊರಗೆಡಹಲು ಅಸಮರ್ಥ ವಾಗಿರುವ ಪ್ರಾಣಿಗಳನ್ನು ಮತ್ತು ದುರ್ಬಲವಾದ ಪ್ರಾಣಿಗಳನ್ನು ನಮ್ಮ ಮನಸ್ಸಿನ ಆನಂದಕ್ಕಾಗಿ ಅಥವ ಜಿಹ್ವಾಚಾಪಲ್ಯಕ್ಕಾಗಿ ಕೊಲ್ಲುವುದು ಭಯಂ ಕರ ಅನ್ಯಾಯ ಈ ಕಾರ್ಯದಲ್ಲಿ ಮಾನವತ್ವವಿರುವುದಿಲ್ಲ. ದಾನವ ಭಾವ ನೆಯೇ ಸ್ಪಷ್ಟಪಡುವುದು.

ಜಿನೇಶ್ವರ ದೇವರು ಈ ಪ್ರಕಾರ ದಯೆಯ ಶ್ರೇಷ್ಠತಮ ಸ್ವರೂಪವನ್ನು ತೋರಿದ್ದಾರೆ. ಅವರ ವಚನಗಳು ಬೆಲೆಯುಳ್ಳದಾಗುವುವು. "ಅಸತ್ಯವನ್ನು ತ್ಯಾಗಮಾಡು, ಮಿತಭಾಷಿಯಾಗಿರು. ಪ್ರಿಯ ಮತ್ತು ಸತ್ಯಮಯವಾದು ದನ್ನೇ ನುಡಿ. ಅಸತ್ಯವನ್ನಾಡುವುದರಿಂದ ಮುಖವು ಅಪವಿತ್ರವಾಗುವುದು. ಮನುಷ್ಯರು ವಿಶ್ವಾಸವನ್ನು ಕಳೆದುಕೊಳ್ಳುವರು. ಅಸತ್ಯವೂ ಹಿಂಸೆಯಂ ತೆಯೇ ಮಹಾ ಪಾಪವು. ಕದಿಯಬೇಡ, ಯಾರಿಗೂ ಮೋಸ ಮಾಡಬೇಡ. ಜೇಬು ಕತ್ತರಿಸುವುದು, ಬೀಗ ಒಡೆಯುವುದು ಮತ್ತು ಇತರರಿಗೆ ಸೇರಿದ ವಸ್ತುಗಳನ್ನು ಲೂಟಿ ಮಾಡುವುದು ಮಹಾ ಪಾಪವು.

ಸುಳ್ಳು ಪತ್ರ ತಯಾರಿಕೆ ಬೇಡ. ಅಸತ್ಯ ನುಡಿಯುವ ಸಾಕ್ಷಿಗಳನ್ನು ಸೇರಿಸಬೇಡ ಮತ್ತು ಪಾಪದ ಕಾರ್ಯವೆಸಗಬೇಡ. ಬ್ರಹ್ಮಚರ್ಯವನ್ನು ಪಾಲಿಸು. ಆತ್ಮಜ್ಞಾನ ಹೊಂದಲು ಬ್ರಹ್ಮಚರ್ಯ ಬಹುಮಟ್ಟಿಗೆ ನೆರವು ನೀಡುತ್ತದೆ. ದೇವದಾನವರು ಸಹ ಪರಿಶುದ್ಧ ಬ್ರಹ್ಮಚಾರಿಗೆ ಸೇವಕರಾಗು ವರು. ಅಂತಹ ಬ್ರಹ್ಮಚಾರಿಯನ್ನು ಈ ವಿಶ್ವದ ಮಹದ್ವ್ಯಕ್ತಿಯೆಂದು ಪರಿಗಣಿಸಲಾಗುವುದು.

ಅತ್ಯಧಿಕ ಸಂಪತ್ತನ್ನು ಶೇಖರಿಸದಿರು. ಅತ್ಯವಶ್ಯಕ ವಸ್ತುಗಳ ಸಂಖ್ಯೆ ಯನ್ನು ಕಡಿಮೆಮಾಡು. ಎಲ್ಲವೂ ನನ್ನದೆಂಬ ಹಂಬಲವನ್ನು ಬಿಡು. ಅತ್ಯ ವಶ್ಯಕ ವಸ್ತುಗಳನ್ನು ಎಷ್ಟರಮಟ್ಟಿಗೆ ಕಡಿಮೆಮಾಡಿಕೊಂಡರೆ ಅಷ್ಟರಮಟ್ಟಿನ ಸುಖ ಹೆಚ್ಚುವುದು ಮತ್ತು ಶಾಂತಿ ಲಭಿಸುವುದು. ಆಧುನಿಕ ಪ್ರಪಂಚದಲ್ಲಿ ಅತ್ಯಧಿಕ ಸಂಪತ್ತಿನ ವೆಚ್ಚದ ಮೂಲಕ ಎಂತೆಂತಹ ಅನ್ಯಾಯಗಳು ನಡೆಯು ತ್ತವೆ ಎಂಬುದರ ಅರಿವು ನಮಗೆ ಇರುವುದಷ್ಟೆ! ಆದುದರಿಂದ ಜೈನ ಧರ್ಮ ದಲ್ಲಿ ವ್ಯಕ್ತಪಡಿಸಿರುವ ಅವಶ್ಯಕತೆಯ ವಸ್ತುಗಳನ್ನು ಮಿತಿಯಲ್ಲಿರಿಸಿಕೊಳ್ಳುವು

ದರಿಂದ ನಮ್ಮ ರಾಷ್ಟ್ರಕ್ಕೆ ಮಾತ್ರವಲ್ಲದೆ ಎಲ್ಲಾ ರಾಷ್ಟ್ರಗಳಿಗೂ ಸಹಾಯ ವಾಗುತ್ತದೆ.

ರಾತ್ರಿಯವೇಳೆ ಊಟಮಾಡುವುದನ್ನು ನಿಲ್ಲಿಸಿ. ರಾತ್ರಿಯವೇಳೆ ಊಟ ಮಾಡುವುದರಿಂದ ಅನೇಕ ಜೀವರಾಶಿಗಳಿಗೆ ನೋವುಂಟಾಗುವುದು. ಮೆದುಳು ಕೆಡುವುದು ಮತ್ತು ಮುಂದಿನಜನ್ಮದಲ್ಲಿ ದುರ್ಗತಿ ಪ್ರಾಪ್ತವಾಗುವುದು. ನಡೆಯುವಾಗ ನೆಲವನ್ನು ಎಚ್ಚರಿಕೆಯಿಂದ ನೋಡಿಕೊಂಡು ನಿಧಾನವಾಗಿ ನಡೆಯಿರಿ. ಆರೀತಿ ನಡೆಯುವಾಗ ಯಾವ ಒಂದು ಜೀವಕ್ಕೂ ಹಿಂಸೆ ಉಂಟಾಗದು ಜಲ ಮತ್ತು ಇತರ ಪಾನೀಯಗಳನ್ನು ಶೋಧಿಸಿ ಕುಡಿಯಿರಿ. ಕ್ರೋಧ, ಅಹಂಕಾರ, ಮಾಯಾ, ಲೋಭ, ರಾಗ, ದ್ವೇಷ ಆದಿಗಳು ಭಯಂಕರ ಶತ್ರುಗಳು ಅವುಗಳನ್ನು ನಿಗ್ರಹಿಸಿ.

ಯಾರನ್ನೂ ನಿಂದಿಸಬೇಡಿ ಮತ್ತು ಯಾರಲ್ಲೂ ಅಸೂಯೆ ಪಡಬೇಡಿ. ಆತ್ಮವನ್ನು ಅರಿಯಿರಿ. ವ್ಯರ್ಥವಾದ ಜಗಳ, ವಾಗ್ಯುದ್ಧಗಳಲ್ಲಿ ಸೇರದಿರಿ. ಪರಸ್ಪರ ಪ್ರೇಮ ಬೆಳಸಿ ಯಾರಿಗೂ ಕೆಟ್ಟದ್ದನ್ನು ಮಾಡಬೇಡಿ ಒಳ್ಳೆಯ ಗುಣವಂತರಾದ ಆತ್ಮೀಯರನ್ನು ಕಂಡು ಹರ್ಷಿಸಿ. ದುಃಖಕ್ಕೀಡಾಗಿರುವವರ ದುಃಖವನ್ನು ನಿವಾರಿಸಲು ಯತ್ನಿಸಿ. ನೀಚ, ಅಧರ್ಮಿ ಅಥವ ಪಾಪಿಗಳನ್ನು ಕಂಡರೆ ತಿರಸ್ಕಾರಭಾವನೆ ಇಲ್ಲದಿರಲಿ. ಅವರನ್ನು ತಿದ್ದಲೆತ್ನಿಸಿ ಅವರು ಅರ್ಥಮಾಡಿಕೊಳ್ಳುವುದಾದರೆ ಸರಿಯಾದ ಮಾರ್ಗ ತೋರಿ. ಇಲ್ಲವಿದ್ದಲ್ಲಿ ಮಧ್ಯಸ್ಥಭಾವವನ್ನು ವಹಿಸಿ. ಸರ್ವಪ್ರಾಣಿಗಳಲ್ಲಿಯೂ ಮಿತ್ರಭಾವ ಬೆಳೆಸಿ. ವಿಶ್ವದ ಸಮಸ್ತ ಪ್ರಾಣಿಗಳೂ ನಮ್ಮ ಮಿತ್ರರಂತೆ ಇರುವರು ಆದುದರಿಂದ ಯಾರನ್ನೂ ಹೊಡೆಯದಿರಿ. ಕೊಲ್ಲದಿರಿ. ಯಾರಿಗೂ ನೋವನ್ನುಂಟುಮಾಡಬೇಡಿ. ಯಾರನ್ನೂ ಕೊರಗಿಸಬೇಡಿ ಮತ್ತು ಯಾರಿಗೂ ತೊಂದರೆ ಕೊಡಬೇಡಿ. ನಾವು ಯಾರಿಗಾದರೂ ನೋವನ್ನುಂಟುಮಾಡಿದರೆ, ಅದರ ಫಲವನ್ನು ಮುಂದಿನ ಜನ್ಮಗಳಲ್ಲಿ ನಾವು ಅನುಭವಿಸಬೇಕಾಗುತ್ತದೆ. ಜನನ ಮರಣಗಳಿಗೆ ಅನೇಕ ಸಲ ಒಳಗಾಗಬೇಕಾಗುತ್ತದೆ ಆದುದರಿಂದ ಸುಖವನ್ನು ಬಯಸುವವರು ಇತರರನ್ನೂ ಸುಖಿಗಳನ್ನಾಗಿರಿಸಲು ಯತ್ನಿಸಬೇಕು. ಸರ್ವರಿಗೂ ಒಳ್ಳೆಯದಾಗಲಿ ಮತ್ತು ಸರ್ವರೂ ಸುಖ

ದಿಂದ ಇರಲಿ ಎಂಬ ಭಾವನೆಯಿಂದ ನಾವು ಕೆಲಸ ಮಾಡಿದರೆ ನಮ್ಮ ಆತ್ಮಕ್ಕೂ ಸುಖ ಉಂಟಾಗುವುದು.

ನಿಮ್ಮಲ್ಲಿರುವ ವಸ್ತು ಅತ್ಯಲ್ಪವಾದರೂ ಅದರಲ್ಲಿ ತಿಲಾಂಶವನ್ನಾದರೂ ಇತರರಿಗೆ ಕೊಡಿ. ದಾನ ಧರ್ಮ ಮರೆಯದಿರಿ. ದೀನ ದುಃಖಿಗಳನ್ನು ಉದ್ಧಾರಮಾಡಿ. ಈ ಮಹದ್ಗುಣಗಳನ್ನು ಜೀವನದಲ್ಲಿ ಆಚರಣೆಗೆ ತರುವುದಾದರೆ ಈ ಅಮೂಲ್ಯ ಮಾನವ ದೇಹವನ್ನು ಹೊಂದಿದ್ದು ಸಾರ್ಥಕವಾಗುವುದು. ಮಾನವಜನ್ಮ ದೊರೆಯುವುದು ದುರ್ಲಭ. ಇಂತಹ ಅವಕಾಶ ಸಿಕ್ಕಿರುವಾಗ, ಆತ್ಮವನ್ನು ಅರಿತು ಜೀವನವನ್ನು ಸಾರ್ಥಕಪಡಿಸಿಕೊಳ್ಳಿ.

★

ಜೈನ ಸಾಧು

ಜೈನ ಸಾಧು ಆಗಲಿಚ್ಛಿಸುವವರು ಲಕ್ಷಾಂತರ ರೂಪಾಯಿಗಳ ಮೇಲಿನ ಅಧಿಕಾರ, ಮನೆ, ತೋಟ, ಬಂಗಲೆ ಇವುಗಳ ಮೇಲಿನ ಯಾಜಮಾನ್ಯ, ಮಾತಾ-ಪಿತ, ಸೋದರ-ಸೋದರಿಯರು, ಪುತ್ರ ಪರಿವಾರ ಮುಂತಾದ ಸ್ವಜನ ಸಂಬಂಧಿಗಳ ಮೇಲಿನ ಮೋಹವನ್ನು ತ್ಯಜಿಸಿ, ಕ್ಷಣಿಕವಾದ ಭೋಗ ವಿಲಾಸ ಜೀವನವನ್ನು ತುಚ್ಛೀಕರಿಸಿ, ಮುಕ್ತಿಮಾರ್ಗದ ಸಾಧನೆಗಾಗಿ ಜಿನೇಶ್ವರ ದೇವರು ತೋರಿರುವ ಪವಿತ್ರ ಮಾರ್ಗದಲ್ಲಿ ಪ್ರಯಾಣ ಮಾಡಲು ಸಿದ್ಧರಾಗುವರು. ತ್ಯಾಗೀ ಗುರುದೇವರ ಬಳಿ ದೀಕ್ಷೆ (ಸನ್ಯಾಸ) ಹೊಂದುವರು. ದೀಕ್ಷೆಯನ್ನು ಕೈಗೊಳ್ಳುವ ಸಮಯದಲ್ಲಿ ಅವರು ಐದು ಮಹತ್ ಪ್ರತಿಜ್ಞೆ (ಮಹಾವ್ರತ) ಗಳನ್ನು ಸ್ವೀಕರಿಸಬೇಕು.

ವ್ರತ ೧—ಜೀವಿತ ಕಾಲದಲ್ಲಿ ಸಣ್ಣದು, ದೊಡ್ಡದು, ಚಿಕ್ಕವರು ದೊಡ್ಡವರು ಎಂಬ ತಾರತಮ್ಯವಿಲ್ಲದೆ ಯಾರಿಗೂ ಹಿಂಸೆ ಕೊಡದೆ, ಸರ್ವ ಜೀವ ರಾಶಿಗಳನ್ನೂ ರಕ್ಷಿಸತಕ್ಕದ್ದು ಸರ್ವ ಜೀವರಾಶಿಗಳನ್ನೂ ರಕ್ಷಿಸುವ ಉದ್ದಿಶ್ಯದಿಂದಲೇ ಸಂಸಾರವನ್ನು ತ್ಯಜಿಸಿ ಸಾಧು ಸನ್ಯಾಸಿಯಾದುದು. ಏಕೆಂದರೆ ಗೃಹಸ್ಥಾಶ್ರಮದಲ್ಲಿ ಈ ವಿಧವಾದ ಸೂಕ್ಷ್ಮದಯೆಯನ್ನು ತೋರಲು ಸಾಧ್ಯವಿಲ್ಲ. ಜೈನ ಸಾಧು ಯಾವ ಸಂದರ್ಭದಲ್ಲಿಯೂ ಅಗ್ನಿಯನ್ನು ಸ್ಪರ್ಶಿಸುವು

ದಿಲ್ಲ. ಎಂತಹ ಛಳಿ ಇದ್ದರೂ ಅವರು ಅಗ್ನಿಯನ್ನಾಶಿಸರು. ರಾತ್ರಿ ಯಾವ ವಿಧವಾದ ದೀಪವನ್ನೂ ಉಪಯೋಗಿಸರು.

ವ್ರತ ೨—ಯಾವಜ್ಜೀವವೂ ಅಸತ್ಯೆಯನ್ನು ತ್ಯಜಿಸುವುದು.

ವ್ರತ ೩—ಕದಿಯುವಿಕೆ ಸರ್ವ ವಿಧದಲ್ಲೂ ತ್ಯಾಜ್ಯ. ಜೈನ ಸಾಧು ಯಾವ ವಸ್ತುವನ್ನು ಉಪಯೋಗಿಸಬೇಕಾದರೂ ಅದರ ಒಡೆಯನ ಅನುಮತಿ ಪಡೆಯದೆ ಉಪಯೋಗಿಸುವುದಿಲ್ಲ.

ವ್ರತ ೪—ಬ್ರಹ್ಮಚರ್ಯ. ಜೈನಸಾಧುವು ದೀಕ್ಷೆ ಸ್ವೀಕರಿಸುವ ಕಾಲ ದಿಂದ ಜೀವಿತದ ಅಂತ್ಯದವರೆಗೆ ಬ್ರಹ್ಮಚಾರ್ಯ ಪಾಲಿಸುವರು. ಸ್ತ್ರೀಯನ್ನು ಮುಟ್ಟುವುದು ಸಹ ಇಲ್ಲ. ಆಕಸ್ಮಿಕವಾಗಿ ಸ್ತ್ರೀಯ ವಸ್ತ್ರವು ತಗಲಿದರೂ ಸಹ ಸಾಧುವು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಸ್ತ್ರೀಯರು ವಾಸಿಸುವ ಎಡೆಗಳಲ್ಲಿ ಜೈನಸಾಧು ಇರುವುದಿಲ್ಲ. ರಾತ್ರಿಯ ಕಾಲದಲ್ಲಿ ಜೈನಸಾಧು ಗಳಿರುವ ಕಡೆಗಳಲ್ಲಿ ಸ್ತ್ರೀಯರು ಬಂದು ಹೋಗಲು ಅವಕಾಶವಿಲ್ಲ. ಜೈನ ಸಾಧುಗಳು ಜೀವನದ ಅಂತ್ಯದವರೆಗೆ ನಿಷ್ಠಾಪೂರ್ವಕವಾಗಿ ಬ್ರಹ್ಮಚರ್ಯ ವನ್ನು ಪಾಲಿಸುವರು.

ವ್ರತ ೫—ಜೈನ ಸಾಧುಗಳು ಗಾಡಿ, ಕುದರೆ, ಸೈಕಲ್, ಮೋಟಾರು, ವಿಮಾನ ಅಥವ ಇತರ ಯಾವ ವಾಹನಗಳನ್ನೂ ಉಪಯೋಗಿಸರು. ಕಾಲ್ನ ಡಿಗೆಯಲ್ಲಿಯೇ ಸ್ಥಳದಿಂದ ಸ್ಥಳಕ್ಕೆ ತೆರಳುವರು. ಇಡೀ ದೇಶದ ಪ್ರವಾಸ ವನ್ನು ಅವರು ಕಾಲ್ನಡಿಗೆಯ ಮೂಲಕವೇ ಕೈಗೊಳ್ಳುವರು, ಒದಗುವ ಕಷ್ಟಗಳನ್ನೆಲ್ಲಾ ಸಹಿಸಿಕೊಂಡು ಗ್ರಾಮದಿಂದ ಗ್ರಾಮಕ್ಕೂ, ನಗರದಿಂದ ನಗರಕ್ಕೂ ತೆರಳಿ ಜನರ ಕಲ್ಯಾಣಕ್ಕಾಗಿ ಮತ್ತು ಆತ್ಮೋದ್ಧಾರಕ್ಕಾಗಿ ಆಧ್ಯಾತ್ಮಿಕ ವಿಷಯಗಳನ್ನು ಭೋಧಿಸುವರು.

ಛತ್ರಿ, ಚಪ್ಪಲಿ ಅಥವ ಬೂಟ್ ಇತ್ಯಾದಿಗಳನ್ನು ಉಪಯೋಗಿಸರು. ಯಾವ ಒಂದು ವಸ್ತುವನ್ನೂ ಅವರು ಆಶಿಸರು. ಸದಾ ಜ್ಞಾನ-ಧ್ಯಾನ, ಶಾಸ್ತ್ರ-ಚಿಂತನ, ಓದುವುದು ಮತ್ತು ಪಾಠ ಹೇಳಿಕೊಡುವುದು ಇದರಿಂದ ಕಾಲಯಾಪನೆ ಮಾಡುವರು.

ತಮ್ಮ ಭೋಜನವನ್ನು ತಾವೇ ತಯಾರಿಸಿಕೊಳ್ಳುವುದಿಲ್ಲ ವಿವಿಧ ಪುಷ್ಪಗಳಿಂದ ಜೇನುತುಪ್ಪವನ್ನು ಜೇನು ಸಂಗ್ರಹಿಸುವ ರೀತಿ ಸಾಧುಗಳು ಭಿಕ್ಷೆಗಾಗಿ ಹಲವರ ಮನೆಗಳಿಗೆ ತೆರಳುವರು. ದೋಷರಹಿತವಾದ ಆಹಾರ ಮತ್ತು ಪಾನೀಯವನ್ನು ಮಾತ್ರ ಸ್ವೀಕರಿಸುವರು. ಗೃಹಸ್ಥರು ತಮ್ಮ ಶ್ರೇಯಸ್ಸಿಗಾಗಿ ಸರ್ವಸ್ವವನ್ನೂ ಅವರಿಗೆ ಒಪ್ಪಿಸುವರು. ಆದರೆ ಈ ತ್ಯಾಗಿಗಳಾದ ಸಾಧುಗಳು ಎಷ್ಟು ಅಗತ್ಯವೊ ಅಷ್ಟನ್ನು ಮಾತ್ರ ಸ್ವೀಕರಿಸುವರು. ರಾತ್ರಿ ತಮ್ಮ ಬಳಿ ಭುಜಿಸುವ ಅಥವ ಪಾನಮಾಡುವ ಯಾವ ವಸ್ತುವನ್ನೂ ಇಟ್ಟುಕೊಂಡಿರುವುದಿಲ್ಲ. ಈ ಸಾಧುಗಳು ಪ್ರಸನ್ನರಾಗಿದ್ದು ತಮ್ಮ ತಲೆ ಕೂದಲನ್ನು ತಾವೇ ಸ್ವಹಸ್ತದಿಂದ ಕೀಳುವರು. ಶರೀರ ಪೋಷಣೆಗೆ ಅಧಿಕ ವಸ್ತುಗಳ ಆವಶ್ಯಕತೆ ಇಲ್ಲವೆಂದು ತೋರಲು ಈ ವಿಧವಾದ ದೇಹದಂಡನೆಯನ್ನು ಕೈಗೊಳ್ಳುವರು.

ಆಹಾರಾಪೇಕ್ಷೆಯುಂಟಾದರೆ ಸೂರ್ಯೋದಯ ಆದ ೪೮ ನಿಮಿಷಗಳ ನಂತರವೇ ಅವರು ಏನನ್ನಾದರೂ ತೆಗೆದುಕೊಳ್ಳುವರು. ಸೂರ್ಯಾಸ್ತಂಗತ ನಂತರ ಅವರು ಆಹಾರವನ್ನಾಗಲಿ ಅಥವ ನೀರನ್ನಾಗಲಿ ಸೇವಿಸುವುದಿಲ್ಲ. ಜೈನ ಸಾಧುಗಳು ಈ ಕಠಿಣ ಪ್ರತಿಜ್ಞೆಗಳನ್ನು ಹರ್ಷದಿಂದ ಪಾಲಿಸುತ್ತಿದ್ದಾರೆ.

ಜೈನ ಸಾಧುಗಳ ಜೀವಿತವು ಬಹಳ ಉಚ್ಛರೀತಿಯದು. ಜಗತ್ಕಲ್ಯಾಣಕ್ಕಾಗಿಯೇ ಅವರು ಇಡೀ ಜೀವಮಾನವನ್ನು ಮೀಸಲಾಗಿಟ್ಟಿದ್ದಾರೆ ಸರ್ವ ಪ್ರಾಣಿಗಳ ರಕ್ಷಣೆಗಾಗಿಯೇ ಜೈನ ಸಾಧುಗಳು ಇಷ್ಟು ಕಠಿಣವಾದ ಪ್ರತಿಜ್ಞೆಗಳನ್ನು ಪಾಲಿಸುವುದು. ಇಂತಹ ಮಹಾತ್ಯಾಗೀ ಸಾಧುಸಂತರು ಇಂದಿಗೂ ಸಹಸ್ರ ಸಂಖ್ಯೆಯಲ್ಲಿದ್ದು ವಿಶ್ವದ ಮೂಲೆ ಮೂಲೆಗಳಲ್ಲಿ ಪ್ರವಾಸಮಾಡಿಕೊಂಡು ಇಡೀ ಜನತೆಗೆ ಮಹೋಪಕಾರ ಮಾಡುತ್ತಿದ್ದಾರೆ. ಇಂದು ಈ ಜಗತ್ತಿನಲ್ಲಿ ಕಾಣುವ ಅತ್ಯಲ್ಪ ಶಾಂತಿ ಸುಖ ಮತ್ತು ಕ್ಷೇಮಕ್ಕೆ ಕಾರಣರು ಈ ಸಾಧು ಸಂತರು, ತ್ಯಾಗಿಗಳು ಮತ್ತು ಪುಣ್ಯಾತ್ಮರು.

— ★ —

ಆತ್ಮ

ಆಧುನಿಕ ಯುಗದಲ್ಲಿ ಅನೇಕ ವ್ಯಕ್ತಿಗಳು ಧರ್ಮದ ಆರಾಧನೆ ಮತ್ತು ಪರಮಾತ್ಮನ ಭಕ್ತಿ ಸೇವೆ ಮತ್ತು ಉಪಾಸನೆಯಲ್ಲಿ ಶಿಥಿಲರಾಗಿದ್ದಾರೆ. ಅದರ ಮುಖ್ಯಕಾರಣ, ಅವರು ಆತ್ಮವನ್ನು ಒಪ್ಪುವುದಿಲ್ಲ ಒಂದು ಸಲ ಆತ್ಮದ ವಿಚಾರದಲ್ಲಿ ಸಂದೇಹ ಅಂಕುರಿಸಿದರೆ, ಅವರು, ಪುಣ್ಯ, ಪಾಪ ಮತ್ತು ಪರಲೋಕದ ವಿಷಯಗಳನ್ನು ಹೇಗೆ ನಂಬುವರು? ಇತರ ವಸ್ತುಗಳು ಯಾವ ರೀತಿ ದೃಷ್ಟಿಗೋಚರವೋ ಅದೇ ರೀತಿ ಆತ್ಮವು ಕಣ್ಣಿಗೆ ಕಾಣದಿದ್ದಲ್ಲಿ ಅಂತಹುದನ್ನು ನಂಬಲು ಹೇಗೆ ಸಾಧ್ಯ ಎಂದು ಈ ಅನಾತ್ಮವಾದಿಗಳು ವಾದಿಸುವರು.

ಇದಕ್ಕೆ ಜ್ಞಾನಿಗಳ ಸಮಾಧಾನವೆಂದರೆ-ಆತ್ಮವು ಸರ್ವಜ್ಞರ ಮೂಲಕ ಪ್ರತ್ಯಕ್ಷಿಸಲ್ಪಟ್ಟಿರುವುದು. ಸ್ವಯಂಸಿದ್ಧ ವಸ್ತು, ಅದು ರೂಪರಹಿತವಾಗಿರುವುದರಿಂದ ನಮಗೆ ಹೇಗೆ ಕಾಣುವುದು?

ಗಾಳಿಯನ್ನು ನಾವೆಲ್ಲಿ ನೋಡುತ್ತೇವೆ? ಯಾರಾದರೂ "ಗಾಳಿ ಇದೆಯೇ ಅಥವ ಇಲ್ಲವೇ?" ಎಂದು ಪ್ರಶ್ನಿಸಿದರೆ, "ಗಾಳಿ ಇದೆ" ಎಂದು ಉತ್ತರ ಕೊಡುವೆವು. ಅದಕ್ಕೆ ಕಾರಣ ವೃಕ್ಷ ಸಮೂಹದ ಎಲೆಗಳು ಆಡುವುದನ್ನು ನಾವು ಕಾಣುವುದು. ಇದೇ ರೀತಿ ನಿಮಗೆ ಪಿತಾಮಹಾದಿಗಳುಂಟೆ ಎಂದು ಕೇಳಿದರೆ ಉಂಟೆಂದು ಉತ್ತರ ದೊರೆಯುವುದು.

ಆದರೆ ಮತ್ತೊಂದು ಪ್ರಶ್ನೆ ನಿಮ್ಮ ಪೂರ್ವೀಕರಾದ ಸಾವಿರಾರು ಬಂಧುಗಳು ಎಲ್ಲಿ ಕಾಣುವರು? ಅವರಿರುವಿಕೆಯ ವಿಚಾರದಲ್ಲಿ ಯಾವ ಚಿಹ್ನೆಯೂ ತೋರುವುದಿಲ್ಲವಲ್ಲಾ? ನಮಗೆ ಕಾಣದಿದ್ದರೂ ಸಹ ನಮ್ಮ ಪೂರ್ವಜರು ಇದ್ದರೆಂದು ನಾವು ನಂಬುತ್ತೇವೆ ನಾವು ಜೀವಂತರಾಗಿರುವುದರಿಂದ ನಮ್ಮ ಪೂರ್ವೀಕರೂ ಇದ್ದರೆಂದು ನಂಬಬೇಕು. ವೃಕ್ಷದ ಮೂಲವನ್ನು ನಾವೆಲ್ಲಿ ನೋಡುವೆವು? ಮೂಲವಿದೆಯೆ ಅಥವ ಇಲ್ಲವೆ ಎಂದು ಪ್ರಶ್ನಿಸಿದರೆ ಇದೆಯೆಂದು ಹೇಳುತ್ತೇವೆ.

ಈ ರೀತಿಯಾಗಿ, ಕಾರ್ಯದಿಂದ ಕಾರಣವನ್ನು ನಾವು ಅರಿಯುತ್ತೇವೆ. ಹೀಗೆಯೇ ಆತ್ಮದ ಕಾರ್ಯವು ಜೀವಿತ ಮನುಷ್ಯನಲ್ಲಿ ದೃಷ್ಟಿ ಗೋಚರವಾಗು

ವುದು. ಜೀವಿತ ಮಾನವರು ಹೇಗೆ ಚಲಿಸುವರೋ, ನಡೆಯುವರೋ, ಕ್ರೀಡಿಸುವರೋ, ಕೆಲಸ ಮಾಡುವರೋ ಭೂತ ಮತ್ತು ಭವಿಷ್ಯತ್ಕಾಲಗಳ ಘಟನೆಗಳನ್ನು ಆಲೋಚಿಸುವರೋ ಮತ್ತು ವಿವಿಧ ವಿಷಯಗಳನ್ನು ಯಾವ ರೀತಿ ಆಲೋಚಿಸುವರೋ ಇವೆಲ್ಲಾ ಮೃತನಾದ ಮಾನವನಿಂದ ಸಾಧ್ಯವಿಲ್ಲ. ಮೃತನಾಗುವುದಕ್ಕೆ ಒಂದು ನಿಮಿಷ ಪೂರ್ವ ಆ ವ್ಯಕ್ತಿಯು ಆಡುವುದು, ಚಲಿಸುವುದು ಇತ್ಯಾದಿ ಅಂಶಗಳು ಗೋಚರಿಸುವುವು. ನಂತರ ಮೃತನಾದ ಕೂಡಲೇ ಏನೂ ಆ ವ್ಯಕ್ತಿಯಲ್ಲಿ ಚೇಷ್ಟೆಯು ಕಂಡು ಬರುವುದಿಲ್ಲ. ಜೀವಿತ ಮನುಷ್ಯನಲ್ಲಿ ಆತ್ಮನ ಕಾರ್ಯವಿದೆ. ಮೃತಶರೀರದಿಂದ ಆತ್ಮ ಹೊರಬಿದ್ದಿದೆ ಎಂಬುದು ಈ ಪ್ರತ್ಯಕ್ಷ ಉದಾಹರಣೆಯಿಂದ ವ್ಯಕ್ತಪಡುವುದಿಲ್ಲವೇ? ಈ ರೀತಿ ಆತ್ಮಕಾರ್ಯ ಪ್ರತ್ಯಕ್ಷವಾಗಿ ನಮಗೆ ತೋರುತ್ತದೆ. ಈ ಉದಾಹರಣೆಯಿಂದ ನಾವು ಆತ್ಮವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

ಶರೀರವು ಆತ್ಮದ ಗೃಹ. ಮನೆಯಲ್ಲಿ ವಾಸಿಸುವರು ಮನೆಯಿಂದ ಪ್ರತ್ಯೇಕರಾಗಿರುವರು ಮನೆ ಬಿದ್ದು ಹೋದರೆ ಅಥವಾ ಬಾಡಿಗೆಯ ಕರಾರಿನ ಅವಧಿ ತೀರಿದರೆ, ಆ ಮನೆಯಲ್ಲಿದ್ದವರು, ಮನೆ ಖಾಲಿಮಾಡಿ ಮತ್ತೊಂದೆಡೆಗೆ ಹೋಗುವರು. ಅದೇ ರೀತಿ ಈ ಶರೀರದಲ್ಲಿ ಆತ್ಮವಿರುವ ಅವಧಿ ಮುಗಿದ ಕೂಡಲೇ ಅದರ ಕರ್ಮಾನುಸಾರ, ಮತ್ತೊಂದು ಸ್ಥಳಕ್ಕೆ ತೆರಳುತ್ತದೆ. ಎರಡನೇ ಜನ್ಮದಲ್ಲಿ ಹೊಸ ಶರೀರವನ್ನು ಧಾರಣಮಾಡುತ್ತದೆ. ಅಲ್ಲಿಯ ಅವಧಿ ಕೊನೆಗೊಂಡ ಒಡನೆ ಮೂರನೆ ಜನ್ಮಕ್ಕೆ ಆತ್ಮ ಪ್ರವೇಶಿಸುವುದು. ಅಲ್ಲಿ ಮೂವನೆ ಶರೀರವನ್ನು ಧರಿಸಿಕೊಳ್ಳುವುದು. ಈ ರೀತಿ, ಅನಾದಿ ಕಾಲದಿಂದ ಕರ್ಮಾನುಸಾರ ಜನನ ಮತ್ತು ಮರಣಗಳು ಪರಂಪರೆಯಾಗಿ ಸಾಗುತ್ತಿವೆ

ಕತ್ತಿಯು ಕವಚದಿಂದ ಯಾವ ರೀತಿ ಪ್ರತ್ಯೇಕವಾಗಿರುವುದೋ ಅದೇ ರೀತಿ ಶರೀರದಿಂದ ಪ್ರತ್ಯೇಕವಾದುದು ಆತ್ಮ. ತುಪ್ಪ ಹಾಲಿನಲ್ಲಿದ್ದರೂ ಸಹ ನಮಗೆ ಗೋಚರಿಸದು. ಆದರೆ ಪ್ರಯೋಗದಿಂದ ಉತ್ಪನ್ನವಾದ ತುಪ್ಪ ಮಾತ್ರ ನಮಗೆ ಗೋಚರವಾಗವುದು. ಅದೇರೀತಿ ಆತ್ಮವನ್ನು ಕೇವಲ ಜ್ಞಾನದಿಂದ ಮಾತ್ರ ಕಾಣಬಹುದು. ಜ್ಞಾನವೆಂಬ ಕಾರ್ಯ ಆತ್ಮದಿಂದ ಮಾತ್ರ ಸಾಧ್ಯ. ಜಡದಿಂದ ಸಾಧ್ಯವಿಲ್ಲ. ಜಡದಲ್ಲಿ ಜ್ಞಾನವು ಲವಲೇಶವೂ ಇಲ್ಲ.

ಶರೀರ ಭೋಗವಸ್ತು. ಅದನ್ನು ಅನುಭವಿಸಲು ಯಾರಾದರೊಬ್ಬರ ಅಗತ್ಯ, ಅದೇ ಆತ್ಮ. ಅನುಭವಿಯು ಭೋಗವಸ್ತುವಿನಿಂದ ಪ್ರತ್ಯೇಕನಾದವನು.

ನಾನು ಯಾರು? ಈ ಪ್ರಶ್ನೆ ಸಹ ಆತ್ಮ ಇರುವುದನ್ನು ಸ್ಥಿರಪಡಿಸುತ್ತದೆ. ಕಂಬ, ಬಟ್ಟೆ, ಪಾತ್ರೆ ಇತ್ಯಾದಿ ಜಡವಸ್ತುಗಳಿಗೆ ಈ ಪ್ರಶ್ನೆಯು ಹುಟ್ಟುವುದಿಲ್ಲ. ಶರೀರದಲ್ಲಿ ಆತ್ಮ ಇದ್ದರೆ ಮಾತ್ರ "ನಾನಿದ್ದೇನೆ" ಅಥವ "ನಾನು ಸುಖವಾಗಿದ್ದೇನೆ", ಅಥವ "ನಾನು ದುಃಖಿ'' ಎಂದು ಹೇಳಲು ಸಾಧ್ಯ. ಏಕೆಂದರೆ ಜ್ಞಾನ ಮತ್ತು ಸುಖಾದಿ ಗುಣಗಳು ಇರುವುದು ಆತ್ಮಕ್ಕೆ ಮಾತ್ರ, ಜಡವಸ್ತುವಿಗಿಲ್ಲ. ಶರೀರದಿಂದ ಆತ್ಮ ಹೊರಬಿದ್ದ ಮೇಲೆ ಮೃತಶರೀರಕ್ಕೆ "ನಾನಿದ್ದೇನೆ" ಎಂಬ ಜ್ಞಾನವು ಸಾಧ್ಯವಿಲ್ಲ. ಇದರಿಂದ ಶರೀರವೇ ಪ್ರತ್ಯೇಕ ಮತ್ತು ಆತ್ಮವೇ ಪ್ರತ್ಯೇಕ ಎಂಬುದು ಸ್ಥಿರವಾಗುತ್ತದೆ. ಕಿಟಕಿಯ ಬಳಿ ನಿಂತಿರುವವನು ಕಿಟಕಿಯಿಂದ ಹೇಗೆ ಪ್ರತ್ಯೇಕವಾಗಿರುವನೋ ಅದೇ ರೀತಿ ಶರೀರದೊಳಗೆ ಇದ್ದು ಸಕಲವನ್ನೂ ನೋಡುತ್ತಿರುವ ಆತ್ಮವೂ ಶರೀರದಿಂದ ಪ್ರತ್ಯೇಕವಾದುದು. ಕಣ್ಣು ನೋಡುವುದಿಲ್ಲ ಆದರೆ ಪ್ರತಿಯೊಂದನ್ನೂ ನೋಡುವುದು ಆತ್ಮ. ಮೃತಶರೀರದಲ್ಲಿಯೂ, ಜೀವಿತ ಮನುಷ್ಯನಿಗೆ ಇರುವಂತೆ ದೊಡ್ಡ ದೊಡ್ಡ ಕಣ್ಣುಗಳಿರುವುವು. ಅದರೂ ಸಹ ಏಕೆ ಮೃತನಾದ ವ್ಯಕ್ತಿ ನೋಡಲಾರನು? ಈ ಪ್ರತ್ಯಕ್ಷ ಉದಾಹರಣೆಯಿಂದಲೂ ಅನೇಕ ಸಲ ಆಲೋಚಿಸಿದ ಮೇಲೂ ನಮಗೆ ವ್ಯಕ್ತಪಡುವುದು, ನೇತ್ರ ನೋಡುವುದಿಲ್ಲ. ಜೀವಿತ ವ್ಯಕ್ತಿಯಲ್ಲಿ ಆತ್ಮವಿತ್ತು, ಅದು ನೋಡುತ್ತದೆ. ನೇತ್ರ ಕೇವಲ ಸಾಧನ ಮಾತ್ರ, ಮನುಷ್ಯನು ಕಿಟಕಿ ಅಥವ ಬಾಗಿಲಿನ ಮೂಲಕ ಹೊರಗಿರುವ ವಸ್ತುಗಳನ್ನು ಹೇಗೆ ಕಾಣುವನೋ, ಅದೇ ರೀತಿ, ಮನುಷ್ಯನು ಕಣ್ಣಿನ ಮೂಲಕ ನೋಡುವನು. ಇಂತಹ ಉದಾಹರಣೆಗಳಿಂದ ನಮಗೆ ತೋರುವುದು, ಕಣ್ಣು ಇತ್ಯಾದಿ ಇಂದ್ರಿಯಗಳು ಪ್ರತ್ಯೇಕವಾದುವು. ಅದರಲ್ಲಿಯೂ ಆತ್ಮವು ಇವುಗಳಂತೆ ಪ್ರತ್ಯೇಕವಾದುದೆಂದು ಅರಿಯಬಹುದು. ಸೌದೆಯಲ್ಲಿ ಅಗ್ನಿಯೂ, ಹಾಲಿನಲ್ಲಿ ತುಪ್ಪವೂ ಇದ್ದೂ ಹೇಗೆ ಅಗೋಚರವೋ ಹಾಗೆ ಆತ್ಮವೂ ಶರೀರದಲ್ಲಿ ಇದ್ದೇ ಇರುವುದು. ಯಾವಾಗ ಆತ್ಮವು ತನ್ನ ಸ್ವರೂಪವನ್ನು ಅರಿತುಕೊಳ್ಳುವುದೋ ಆಗ ಧರ್ಮಾಚರಣೆಯಲ್ಲಿ ತೊಡಗಲೆತ್ನಿಸುವುದು. ಕರ್ಮಗಳನ್ನು ಭೇದಿಸಿಕೊಂಡು, ಜನ್ಮ-ಮೃತ್ಯುಗಳಿಗೆ

ಒಳಗಾಗದಿರುತ್ತದೆ. ಆ ರೀತಿಯಾದ ಆತ್ಮವು ಅಮರತ್ವ ಪೊಂದಿ ಅಚಲ ವಾದ ಮತ್ತು ಅಖಂಡವಾದ ಸುಖವನ್ನು ಮೋಕ್ಷದಲ್ಲಿ ಅನುಭವಿಸುವುದು.

ಈ ರೀತಿ ಆತ್ಮವು ಅನೇಕ ಪ್ರಮಾಣಗಳಿಂದ ಸ್ಥಿರಪಟ್ಟಿದೆ. ಆತ್ಮವು ತನ್ನನ್ನು ಅರಿತೂ ಸಿದ್ಧವಸ್ತುವಾಗಿದೆ. ಈ ಲೋಕವನ್ನು ಬಿಟ್ಟು ಪರ ಲೋಕಕ್ಕೆ ಹೋಗುವುದಾಗಿದೆ. ಈ ಶರೀರಕ್ಕೆ ಅದು ಪರಲೋಕದಿಂದ ಬಂದಿದೆ. ಆಯುಷ್ಯದ ಕರ್ಮ ಮುಗಿದ ಮೇಲೆ ಶರೀರವನ್ನು ಬಿಟ್ಟು ಬೇರೊಂದು ಶರೀರವನ್ನು ಸೇರುವುದು ಎಂಬಂಶ ಸಹ ನಿಜ. ಆತ್ಮ ಅಮರ ಅಖಂಡ ಮತ್ತು ನಾಶ ರಹಿತವಾದುದು, ಆದರೂ ಸಹ ಕರ್ಮದ ಅಧೀನ ವಾಗಿ ಜನನ–ಮರಣದ ಚಕ್ರಕ್ಕೆ ಸಿಲುಕಲೇಬೇಕು. ಸಂಸಾರದ ಸುಖ ದುಃಖಗಳಿಗೆ ಈಡಾಗಲೇಬೇಕು. ಕಡೆಯಲ್ಲಿ ಕರ್ಮಗಳೆಲ್ಲಾ ಕೊನೆಗೊಂಡ ನಂತರ ತನ್ನ ಸ್ವರೂಪವನ್ನು ಹೊಂದಿ ಪೂರ್ಣವಾಗುವುದು ಮತ್ತು ಪರಮಾತ್ಮ ಸ್ವರೂಪವನ್ನು ಗಳಿಸುವುದು. ಈ ರೀತಿ ಪೂರ್ಣ ಸ್ವರೂಪ ವನ್ನು ಹೊಂದಿದ ಆತ್ಮವನ್ನು ಪರಮಾತ್ಮನೆಂದು ಕರೆಯಲಾಗುವುದು.

★

ಕರ್ಮ

ಈ ಜಗತ್ತು ಎಂತೆಂತಹ ವಿಚಿತ್ರಗಳಿಂದ ಪರಿಪೂರ್ಣವಾಗಿದೆ. ಈ ವಿಚಿತ್ರಗಳಿಗೆಲ್ಲಾ ಮೂಲ ಕಾರಣ ಕರ್ಮ. ಕರ್ಮದಂತಹ ವಸ್ತು ಇಲ್ಲದಿದ್ದಲ್ಲಿ ಪ್ರತ್ಯಕ್ಷವಾಗಿ ಕಾಣುತ್ತಿರುವ ಈ ವಿಚಿತ್ರಗಳಾವುವೂ ಇರುತ್ತಿರ ಲಿಲ್ಲ. ಓರ್ವ ದೊರೆ. ಮತ್ತೋರ್ವ ಬಡವ, ಮಗುದೊಬ್ಬ ಸುಖಿ, ಮತ್ತೊಬ್ಬ ದುಃಖಿ, ಒಬ್ಬ ರೋಗಿ, ಇನ್ನೊಬ್ಬ ನಿರೋಗಿ, ಒಬ್ಬ ಕಪ್ಪು ಮತ್ತೊಬ್ಬ ಬಿಳುಪು, ಮೂರನೆಯವನು ಸ್ಥೂಲ, ನಾಲ್ಕ ನೆಯವನು ನರಪೇತಲ, ಒಬ್ಬ ಶ್ರೀಮಂತ, ಮತ್ತೊಬ್ಬ ಸೇವಕ, ಓರ್ವ ಬುದ್ಧಿಶಾಲಿ, ಇನ್ನೊಬ್ಬ ಮೂರ್ಖ, ಉಚ್ಚ–ನೀಚ, ಅಂಗವಿಕಲ, ಅಂಧ, ಕಿವುಡ, ಸುಂದರ, ಕುರೂಪಿ ಇತ್ಯಾದಿ ನಾನಾ ವಿಚಿತ್ರಗಳಿಗೆ ಕಾರಣವೇನು? ಕರ್ಮವೆಂಬ ಮಹಾಶಕ್ತಿಯು ಇವುಗಳ ಹಿಂದೆ ಆವಿರ್ಭವಿಸಿವೆಯೆಂದು ಈ ವಿಚಿತ್ರಗಳನ್ನು ಕಂಡಮೇಲೆ ಅರಿವಾಗುವುದು.

ಕರ್ಮದ ಅಣುಗಳು ವಿಶ್ವವನ್ನೇ ವ್ಯಾಪಿಸಿವೆ. ಅವು ಕಣ್ಣಿಗೆ ಕಾಣದಿದ್ದರೂ ಅದರ ಕಾರ್ಯದಿಂದ ಅದನ್ನು ಅರಿಯಬಹುದು.

ಹಿಟ್ಲರನನ್ನು ಸೋಲಿಸಲು ಸಾಧ್ಯವೇ ಇಲ್ಲ ಎಂದು ಜನ ಹೇಳುತ್ತಿದ್ದರು. ಆತನ ವಿಜಯಧ್ವನಿ ನಾಲ್ಕು ದಿಕ್ಕುಗಳಲ್ಲಿಯೂ ಕೇಳಿಸುತ್ತಿತ್ತು. ಆದರೆ ಇಂದು ಆತನ ವಿಚಾರದಲ್ಲಿ ಒಂದು ಕುರುಹು ಸಹ ಕಾಣುವುದಿಲ್ಲ. ಆತನ ವಿಶ್ವವಿಸರಣ ಭಾಷಣ ಕೇಳಲು ಸಾವಿರಾರು ಜನರು ಕಾತುರದಿಂದ ಓಡುತ್ತಿದ್ದ ಕಾಲವೊಂದಿತ್ತು. ಆದರೆ ಇಂದಾತನ ವಾಣಿಯನ್ನು ಕೇಳಲು ಯಾರೂ ತಯಾರಿಲ್ಲ. ಪ್ರಭಾವಶಾಲಿಗಳೂ, ಧೀರರೂ ಆಗಿದ್ದ ಅನೇಕ ದೊರೆಗಳ ಸಿಂಹಾಸನಗಳು ಉರುಳಿವೆ. ದುರಹಂಕಾರದಲ್ಲಿ ಮೆರೆದು, ಅವಮಾನವನ್ನು ಸಹಿಸಲಾರದೆ, ತಲೆ ಮರೆಸಿಕೊಂಡು ಸಿಕ್ಕಿದ ಕಡೆ ಅಲೆದು ಕಡೆಗೆ ಮಣ್ಣಿನಲ್ಲಿ ಮಣ್ಣಾಗಿ ಹೋದರು. ಇದಕ್ಕೆಲ್ಲಾ ಮುಖ್ಯ ಕಾರಣರಾರು? ಕರ್ಮ.

ತಾಯಿಯ ಗರ್ಭದಲ್ಲಿ, ಏಕಕಾಲದಲ್ಲಿ ಜನಿಸಿದ ಅವಳಿ ಮಕ್ಕಳಲ್ಲಿ ಓರ್ವ ಬುದ್ಧಿಶಾಲಿ ಮತ್ತೊರ್ವ ಮೂರ್ಖ, ಓರ್ವ ಶ್ರೀಮಂತ, ಮತ್ತೊಬ್ಬ ಬಡವ, ಒಬ್ಬ ಕಪ್ಪು ಮತ್ತು ಇನ್ನೊಬ್ಬ ಬಿಳುಪು ಇದಕ್ಕೆ ಕಾರಣವೇನು? ಗರ್ಭದಲ್ಲಿರುವಾಗ ಯಾವ ವಿಧವಾದ ಕರ್ಮ ಮಾಡದಿದ್ದರೂ ಸಹ ಈ ರೀತಿಯಾದ ವಿಚಿತ್ರ ವ್ಯತ್ಯಾಸವೇಕೆ? ಏಕಕಾಲದಲ್ಲಿ ಜನಿಸಿದರೂ ಸಹ ಪೂರ್ವಜನ್ಮದ ಕರ್ಮಶೇಷದ ಫಲವಾಗಿ ಈ ವಿಧವಾದ ವಿಚಿತ್ರ ಸಂಭವಿಸಿದೆಯೆಂದು ಇದರಿಂದಲೂ ನಾವು ಅರಿಯಬಹುದು.

ಆತ್ಮವು ಬೇರೊಂದೆಡೆಯಿಂದ ಬಂದಿರುವಾಗ, ಅದರ ಕರ್ಮ ಮುಗಿದ ಮೇಲೆ ಮತ್ತೊಂದೆಡೆಗೆ ಅದು ತೆರಳಲಿದೆಯೆಂಬುದು ಸಹ ಖಚಿತ.

ಆತ್ಮ ಅಮರವಾದುದು, ಅಖಂಡವಾದುದು ಮತ್ತು ನಾಶರಹಿತವಾದುದು. ಒಬ್ಬ ಮನುಷ್ಯನು ನವವಸ್ತ್ರ ಧರಿಸಿ ಜೀರ್ಣವಸ್ತ್ರವನ್ನು ತ್ಯಜಿಸುವಂತೆ, ಆತ್ಮವು ಒಂದು ಶರೀರವನ್ನು ಬಿಟ್ಟು ಬೇರೊಂದು ಶರೀರವನ್ನು ಆಕ್ರಮಿಸುತ್ತದೆ. ಆತ್ಮವು ಆ ಶರೀರದಲ್ಲಿ ವಾಸಿಸುತ್ತದೆ. ಕರ್ಮಾನುಸಾರ ವಿವಿಧ ಕಾಲಗಳಲ್ಲಿ ಅನೇಕ ವಿಧವಾದ ತೊಂದರೆಗಳಿಗೂ ಮತ್ತು ಕಷ್ಟಗ

ಳಿಗೂ ಈಡಾಗುವುದು. ಅನೇಕ ದುಷ್ಕರ್ಮಗಳ ಪರಿಣಾಮವಾಗಿ ದೇವ ಲೋಕದವರಿಗೆ ಸಹ ದೊರೆಯಲಾಗದ ಮಾನವ ಜನ್ಮದಲ್ಲಿ ಅನೇಕ ದುಷ್ಕಾರ್ಯಗಳನ್ನು ಎಸಗುವರು. ಹಿಂಸೆ, ಅಸತ್ಯ, ಕಳುವು, ದುರಾಚಾರ, ಅನೀತಿ, ಅನ್ಯಾಯ, ಅಸೂಯೆ, ದುರಾಪಾದನೆ ಮುಂತಾದ ಕೃತ್ಯಗಳನ್ನೆಸಗಿ ಕರ್ಮದ ಮೂಟೆಯನ್ನು ಹೊತ್ತುಕೊಳ್ಳುವನು. ಈ ಕರ್ಮವು, ಹಾಲಿನೊಳಿಗೆ ನೀರು ಸೇರುವಂತೆ, ಆತ್ಮನೊಡನೆ ಲೀನವಾಗುವುದು. ಇದರ ಪರಿಣಾಮವಾಗಿ ಆತ್ಮವು ಅನೇಕ ಜನ್ಮಗಳಲ್ಲಿ ಅತ್ಯಧಿಕ ರೀತಿಯಲ್ಲಿ ದುಃಖವನ್ನು ಸಹಿಸಬೇಕಾಗುವುದು. ಮನುಷ್ಯರು ತಾತ್ಕಾಲಿಕ ಪರಿಸ್ಥಿತಿಯನ್ನು ಕುರಿತು ಆಲೋಚಿಸುವರೇ ವಿನಹ ಮುಂದೇನಾಗುವುದೆಂಬುದರ ಕಡೆ ಲಕ್ಷ್ಯವೀಯುವುದಿಲ್ಲ. ಕೇವಲ ಸಂಕುಚಿತ ದೃಷ್ಟಿ ತೋರುವರು. ಕೇವಲ ಅತ್ಯಲ್ಪಕಾಲದ ಜೀವಿತದ ಅವಧಿಯಲ್ಲಿ, ತಮ್ಮ ಅಂತಸ್ತು, ಗೌರವ, ಪ್ರತಿಷ್ಠೆ ಇವುಗಳ ಕಡೆ ಹೆಚ್ಚಿನ ಲಕ್ಷ್ಯವಿತ್ತು ಧರ್ಮ, ಕರ್ಮ ಮತ್ತು ಆತ್ಮವನ್ನು ಮರೆತುಬಿಡುವರು. ತತ್ಫಲವಾಗಿ ತಮ್ಮ ಕರ್ಮ ಪರಿಪಾಕದಿಂದ ಒದಗುವ ದುಃಖ ಮತ್ತು ಕಷ್ಟಗಳನ್ನು ತಾವು ಅನುಭವಿಸಲೇಬೇಕು. ಭವಿಷ್ಯತ್ಕಾಲ ಅನಂತ ಜೀವಿತದ ಕ್ಷಣಿಕ ಸುಖಕ್ಕಾಗಿ ಪ್ರಾಣಿ ಅಸಂಖ್ಯಕಾಲದ ದುಃಖ ಪರಂಪರೆಯ ಮೂಟೆಯನ್ನು ತನ್ನ ತಲೆಯ ಮೇಲೆ ಹಾಕಿಕೊಳ್ಳುವನು. ಆಹಾ! ಎಂತಹ ಮೂರ್ಖತನ!

ಮನುಷ್ಯರು ತಮ್ಮ ಬುದ್ಧಿಯ ಮೇಲಿನ ಗರ್ವದಿಂದ ಅಂಧರಾಗಿ ಹತರಾಗುವರು. ಅವರು ಮದಾಂಧರಾಗಿ, ಗರ್ವಿಷ್ಠರಾಗಿ, ಮನಸ್ವೇಚ್ಛೆ ಮಾತನಾಡುತ್ತಾರೆ. ಪ್ರತಿ ನಿಮಿಷವೂ ಜೀವಿತದ ಸುಖವನ್ನೇ ಬಯಸುವರು. ಆದರೆ ಜೀವ ಹೋದ ಮೇಲೆ ಏನಾಗುತ್ತದೆ? ಜೀವನು ಶರೀರವನ್ನು ಬಿಟ್ಟ ಮೇಲೆ ಏನಾಗುತ್ತಾನೆ? ಎದೆಲ್ಲಿಗೆ ಹೋಗುವನು? ಈ ಅಂಶಗಳನ್ನು ಅವರು ಸ್ವಲ್ಪವೂ ಆಲೋಚಿಸುವುದಿಲ್ಲ. ಅರಮನೆ, ಐಶ್ವರ್ಯ, ಅಧಿಕಾರ ಇವಕ್ಕೆಲ್ಲಾ ಈ ಜೀವನದವರಿವಿಗೇನೇ ಮಾನ್ಯತೆ ಇರುವುವು. ಸೇವಿಸಲು ಅಯೋಗ್ಯವಾದ ಅಭಕ್ಷ್ಯ ಪದಾರ್ಥಗಳನ್ನು ಅದರಲ್ಲಿಯೂ ಮದ್ಯ-ಮಾಂಸ ಇತ್ಯಾದಿಗಳನ್ನು ಸೇವಿಸಿ ಈ ಶರೀರವನ್ನು ಪುಷ್ಟಿಮಾಡಿಕೊಳ್ಳುವರು. ಆದರೆ ಇದೇ ಶರೀರವು ಅದೇಕ್ಷಣದಲ್ಲಿ ಬೂದಿಯಾಗುವುದೆಂಬುದರ ಕಡೆ ಅವರ

ಲಕ್ಷ್ಯವಿರುವುದಿಲ್ಲ. ಅಲ್ಲದೆ ಆ ಜ್ಞಾನಿಯು (ಆತ್ಮ ಭೋಗವಿಲಾಸಗಳಲ್ಲಿ ಮತ್ತನಾಗಿ ಪಶುವಿನಂತೆ ವರ್ತಿಸಿ ತನ್ನ ಜೀವಿತವನ್ನು ಹಾಳುಮಾಡಿಕೊಳ್ಳುವನು ಮತ್ತು ಅಮೂಲ್ಯವಾದ ಮಾನವ ದೇಹವನ್ನು ತೃಣಕ್ಕಿಂತ ಕಡೆಯಾಗಿ ಮಾಡುವನು.

ಯಾವ ಈ ಮಾನವ ಜನ್ಮದಿಂದ ರತ್ನಗಳನ್ನು ಶೇಖರಿಸಬೇಕೋ ಅದರಿಂದ ಕಲ್ಲುಗಳನ್ನು ಶೇಖರಿಸಿಕೊಳ್ಳುವನು. ಅಹಹಾ ಎಂತಹಾ ಅಜ್ಞಾನ!

ತಾನು ಧರಿಸುವ ವಸ್ತ್ರವು ಮಲಿನವಾದರೆ ಅಥವಾ ದುರ್ವಾಸನೆಗೆ ಎಡೆಗೊಡುವುದಾದರೆ ಮನುಷ್ಯನು ಸಹಿಸನು. ಅದೇ ರೀತಿ ಕಸಕಡ್ಡಿಗಳಿಂದ ಕೂಡಿದ ಗೃಹವನ್ನು ಬಯಸನು, ಆದರೆ ಆತನ ಆತ್ಮವು ಮಲಿನವಾಗಿರಲು ಆತನು ಹೇಗೆ ಒಪ್ಪುವನು?

ಮನುಷ್ಯನು ತನ್ನ ಮನೆಯನ್ನು ಪರಕೆಯಿಂದ ಅನೇಕ ಸಲ ಗುಡಿಸಿ ಶುದ್ಧವಾಗಿಡುವನು, ತನ್ನ ಶರೀರದ ಮೇಲಿರುವ ಕೊಳೆಯನ್ನು ಕೊನೆಗಾಣಿಸಲು ಬಿಸಿನೀರಿನಲ್ಲಿ ಸ್ನಾನಮಾಡಿ ಸಾಬೂನನ್ನು ಮೈಗೆಲ್ಲಾ ತಿಕ್ಕಿ ತಿಕ್ಕಿ ಕೊಳೆಯನ್ನು ಹೋಗಲಾಡಿಸಿಕೊಂಡು ಶರೀರವನ್ನು ಸ್ವಚ್ಛಗೊಳಿಸಿಕೊಳ್ಳುವನು ಬಟ್ಟೆಯನ್ನು ಪ್ರತಿದಿನವೂ ಒಗೆಯುವನು ಮತ್ತು ಬದಲಾಯಿಸುವನು. ಆದರೆ ಅತ್ಯಂತ ನಿಕಟವಾದ ಆತ್ಮವು ಮಲಿನವಾದರೆ ಅದನ್ನು ಶುದ್ಧಗೊಳಿಸಲು ಸ್ವಲ್ಪವೂ ಪ್ರಯತ್ನಿಸುವುದಿಲ್ಲ. ಎಲ್ಲಕ್ಕಿಂತ ಮಿಗಿಲಾದ ಅಜ್ಞಾನವಿದು. ಶರೀರ, ಧನ, ವಿವಿಧ ವಸ್ತುಗಳು, ಜಹಗೀರಿ ಮತ್ತು ಅಸಂಖ್ಯ ಬಂಧುಬಾಂಧವರೆಲ್ಲಾ ಕ್ಷಣಿಕ ಮತ್ತು ನಶ್ವರ ಇವುಗಳ ಮೇಲಿನ ಮೋಹದಿಂದ ಮಾನವನು ತನ್ನ ಜೀವನವನ್ನು ನಾಶಪಡಿಸಿಕೊಳ್ಳುವನು ಮತ್ತು ಅಮರನಾದ ಆತನನ್ನು ಪೂರ್ಣವಾಗಿ ಮರೆತುಬಿಡುವನು.

ಆತ್ಮವಿದ್ದಲ್ಲಿ ಸರ್ವವೂ ಇರುವುವು. ಆತ್ಮವಿರುವವರೆಗೆ ಅವರನ್ನು ಎಲ್ಲರೂ ಗೌರವಿಸುವರು ಆದರಿಸುವರು ಮತ್ತು ಸತ್ಕರಿಸುವರು. ಹೆಣಕ್ಕೆ ಏನು ಗೌರವ? ನಾವು ಬದುಕಿದ್ದಾಗ ನಮ್ಮನ್ನು ಆದರಿಸಿ, ಸತ್ಕರಿಸಿ ಗೌರವಿಸಿ

ದವರೇ ನಾವು ಮೃತರಾದ ಮೇಲೆ ತಮ್ಮ ಕೈಯಿಂದಲೇ ನಮ್ಮ ಶರೀರಕ್ಕೆ ಅಗ್ನಿಯಿಟ್ಟು ದಹಿಸಿಬಿಡುವರು. ಬೂದಿಮಾಡಿಬಿಡುವರು

ಶರೀರದಲ್ಲಿ ಆತ್ಮ ಇರುವವರಿವಿಗೆ ಮಾತ್ರ ತೋಟ, ಬಂಗಲೆ, ಸಂಪತ್ತು ವಿವಿಧ ವಸ್ತುಗಳು ಉಪಯೋಗಕಾರಿ. ಆತ್ಮವು ಶರೀರದಿಂದ ಹೊರಬಿದ್ದು ಪರಲೋಕಕ್ಕೆ ತೆರಳಿಸೊಡನೆ ರಾಜಮಹಲ್, ಐಶ್ವರ್ಯ, ಸ್ವಜನ ಬಾಂಧವ್ಯ ಮತ್ತು ಪ್ರಿಯುವರ್ಯರು ಇಲ್ಲಿಯೇ ನಿಲ್ಲುವರು. ಅಂದೇ ಮಾಡಿದ ಕರ್ಮಫಲ ವನ್ನು ಅನುಭವಿಸಲು ಆತ್ಮವು ಬೇರೊಂದು ಶರೀರವನ್ನು ಪ್ರವೇಶಿಸುತ್ತದೆ.

ಮದ್ಯ ಜಡಪದಾರ್ಥವಾದರೂ ಆತ್ಮದ ಬುದ್ಧಿಯನ್ನು ಹೀನಗೊಳಿಸು ವುದು. ಅದೇ ರೀತಿ ಕರ್ಮವು ಜಡ ಪದಾರ್ಥವಾದರೂ ಸಹ ಆತ್ಮವನ್ನು ತನ್ನ ಪ್ರಭಾವಕ್ಕೆ ಒಳಪಡಿಸಿಕೊಂಡು ಫಲ ಉಣಿಸುವುದು. ಮಾಡಿದ ಕರ್ಮ ದಿಂದ ಪಾರಾಗಬೇಕಾದರೆ, ಶಾಶ್ವತ ಶಾಂತಿಯನ್ನು ಹೊಂದಬೇಕಾದರೆ, ಪೂರ್ಣ ಸುಖಿಯಾಗಿರಬೇಕಾದರೆ, ಸದಾ ಕಾಲದಲ್ಲಿಯೂ ಆನಂದದಿಂದಿರ ಬೇಕಾದರೆ ಜ್ಞಾನಿಗಳು ತೋರಿರುವ ಸನ್ಮಾರ್ಗದಲ್ಲಿ ನಡೆಯಬೇಕು. ಒಳ್ಳೆಯ ಜ್ಞಾನವನ್ನು ಅರಿಯಬೇಕು. ಸತ್ಯತೆಯ ಗೌರವವನ್ನು ರಕ್ಷಿಸಿ ಮತ್ತು ಒಳ್ಳೆಯ ಕೆಲಸವನ್ನು ಮಾಡಬೇಕು. ಸರ್ವ ಪ್ರಾಣಿಗಳಲ್ಲಿಯೂ ಸ್ನೇಹಭಾವ ತೋರಿ ಅಹಿಂಸಾ ನೀತಿಯನ್ನು ಪರಿಪಾಲಿಸಿ ಸದ್ವರ್ತನೆ, ಸದಾಚಾರ, ಸತ್ಯ ಮತ್ತು ನ್ಯಾಯ ಮಾರ್ಗವನು ಅನುಸರಿಸಬೇಕು ಮತ್ತು ತಪಸ್ಸು ಮಾಡಬೇಕು. ಇಂದ್ರಿಯಗಳ ದಾಸ ಆಗುವುದರ ಬದಲು ಅವುಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಆತ್ಮವನ್ನು ಅರಿತು ಆತ್ಮವಿಕಾಸಕ್ಕೆ ಪ್ರಯತ್ನಿಸಬೇಕು. ಆ ರೀತಿ ಮಾಡುವುದರಿಂದ ಆತ್ಮ ಕರ್ಮದಿಂದ ಮುಕ್ತಿಹೊಂದಿ ಮೋಕ್ಷವನ್ನು ಹೊಂದುವುದು. ಅಲ್ಲಿ ಶಾಶ್ವತ ಸುಖವನ್ನು ಪಡೆಯುವುದು.

ಅನಾದಿ ಕಾಲದಿಂದ ಗಣಿಯೊಳಗೆ ಮಣ್ಣಿನಿಂದ ಕೂಡಿ ಬಂಗಾರವು ಇರುವಂತೆ ದೀರ್ಘ ಕಾಲದಿಂದ ಆತ್ಮವು ಕರ್ಮದೊಡನೆ ಸೇರಿಕೊಂಡಿದೆ.

ಗಣಿಯಿಂದ ಹೊರಬಿದ್ದ ಬಂಗಾರವನ್ನು ಪ್ರಯೋಗದ ಮೂಲಕ ಶುದ್ಧ ಗೊಳಿಸುವಂತೆ, ಆತ್ಮವನ್ನು ಸಹ ತಪಸ್ಸು, ದಯೆ, ಧರ್ಮ, ಸಂಯಮ ಇತ್ಯಾದಿ ಸಾಧನೆಗಳ ಪ್ರಯೋಗದಿಂದ ಶುದ್ಧಗೊಳಿಸಬಹುದು. ಯಾವ

ಆತ್ಮವು ಕರ್ಮದಿಂದ ನಿರ್ಮುಕ್ತಿಹೊಂದಿತೋ ಅಂತಹ ಆತ್ಮ ಪರಮಾತ್ಮ ಶ್ರೇಣಿಗೆ ಸೇರುವುದು.

ಜೀವಾತ್ಮಗಳ ಸಂಖ್ಯೆ ಅನಂತಾನಂತವು. ಸರ್ವರ ಆತ್ಮಗಳು ಭಿನ್ನಭಿನ್ನ ವಾಗಿದೆ. ಸರ್ವರ ಆತ್ಮವೂ ಒಂದೇ ಆಗಿದ್ದಲ್ಲಿ ಓರ್ವರು ಸುಖಿಯಾಗಿದ್ದಲ್ಲಿ ಸರ್ವರೂ ಸುಖಿಗಳಾಗಿರಬೇಕು ಓರ್ವರು ದುಃಖಿಯಾದರೆ ಸರ್ವರೂ ದುಃಖಿ ಗಳಾಗಿರಬೇಕು. ಆದರೆ ನಾವು ಕಾಣುವುದೇ ಬೇರೆ, ಯಾರು ಸಕ್ಕರೆಯನ್ನು ತಿನ್ನುತ್ತಾರೋ ಅವರಿಗೆ ಸಕ್ಕರೆ ಸಿಹಿಯಾಗಿ ತೋರುವುದು, ಓರ್ವ ವ್ಯಕ್ತಿ ಮೃತನಾದರೆ ಆತನೊಡನೆ ಇತರರೆಲ್ಲಾ ಮೃತರಾಗುವುದಿಲ್ಲ. ಸ್ವಭಾವದಲ್ಲಿ ಆತ್ಮಗಳೆಲ್ಲಾ ಸಮಾನವಾಗಿದ್ದರೂ ವ್ಯಕ್ತಿಗಳ ರೂಪದಲ್ಲಿ ಭಿನ್ನಭಿನ್ನವಾಗಿದೆ ಯೆಂದು ಇದರಿಂದ ನಾವು ತಿಳಿಯಬಹುದು.

ಯಾವ ಯಾವ ಆತ್ಮಗಳು ಕರ್ಮದಿಂದ ಮುಕ್ತಿಹೊಂದುವುವೋ ಅವು ಪರಮಾತ್ಮ ಆಗುವುವು.

ಪರಿಶುದ್ಧವಾದ ಆತ್ಮಕ್ಕೆ ಕರ್ಮದ ಲೇಪವಿಲ್ಲ. ಆದಕ್ಕೆ ಪುನರ್ಜನ್ಮ ಅಥವ ಪುನರಾವತಾರವಿಲ್ಲ. ಬೀಜವು ಉರಿದುಹೊದರೆ ಸಸಿಯಾಗಲು ಹೇಗೆ ಸಾಧ್ಯವಿಲ್ಲವೋ ಅದೇ ರೀತಿ ಕರ್ಮರೂಪೀ ಬೀಜವು ಭಸ್ಮೀಭೂತವಾದರೆ ಜನನ-ಮರಣವೆಂಬ ಸಸಿ ಉದ್ಭವಿಸಲು ಅಸಾಧ್ಯ. ಪುನರ್ಜನ್ಮ ಅಥವ ಅವತಾರ ಅನಾವಶ್ಯಕ. ಆತ್ಮವು ಅಜರ-ಅಮರತ್ವವನ್ನು ಪಡೆಯುತ್ತದೆ. ಪರಮಾತ್ಮಶ್ರೇಣಿಗೆ ಸೇರಿದ ಆತ್ಮಗಳು ಈ ಶರೀರ ಬಿಟ್ಟು ಒಂದು ಸಮಯ ದಷ್ಟು ಸೂಕ್ಷ್ಮಕಾಲದಲ್ಲಿ ಏಳು ರಜ್ಜು ಪ್ರಮಾಣದಷ್ಟು ಮೇಲಕ್ಕೆ ಹೊರಟು ಹೋಗುವುದು, ಅಲ್ಲಿಯೇ ಸಿದ್ಧಾತ್ಮಗಳಿರುವುವು. ಅಲ್ಲಿ ಆತ್ಮಗಳಿಗೆ ಜನನ-ಮರಣವಾಗಲಿ, ಸುಖ-ದುಃಖಗಳಾಗಲಿ ಇರುವುದಿಲ್ಲ. ಯಾರಿಗೂ ಅಂಜ ಬೇಕಾಗಿಲ್ಲ. ಅನಂತ ಆನಂದಸಾಗರದಲ್ಲಿ ನಿಮಗ್ನವಾಗಿ ಇರಬಹುದು.

ಪರಮಾತ್ಮವೆಂಬ ಶಬ್ದವೇ ಈ ವಿಷಯವನ್ನು ತಿಳಿಸುವುದು. ಯಾವ ಆತ್ಮವು ಶುದ್ಧ ಮತ್ತು ನಿರ್ಮಲತ್ವವನ್ನು ಹೊಂದಿದೆಯೋ ಅದನ್ನು ಪರ ಮಾತ್ಮ ಎಂದು ಕರೆಯಲಾಗುವುದು. ಪರಮಾತ್ಮ ಒಬ್ಬನೇ ಎಂದು ಹೇಳು ವುದು ಆಶ್ಚರ್ಯಕರವಾದುದು. ನಮ್ಮ ಆತ್ಮವು ಪರಮಾತ್ಮ-ಪೂರ್ಣ ಮತ್ತು

ಪೂರ್ಣ ಜ್ಞಾನಿ ಆಗದಿದ್ದಲ್ಲಿ, ಸಾಧುಗಳು ತಮ್ಮ ಗೃಹಗಳನ್ನು ತ್ಯಜಿಸಿ ಕಠೋರವಾದ ತಪಸ್ಸು ಮಾಡುವುದು ಅನಾವಶ್ಯಕವಾಗಿತ್ತು ಸಾಧುಸಂತರು ಕೇವಲ ಮುಕ್ತಿಗಾಗಿ ಪ್ರತ್ಯೇಕ ಉತ್ಕೃಷ್ಟವಾದ ಕಾರ್ಯ ಮತ್ತು ಕಠಿಣವಾದ ತಪಸ್ಸನ್ನು ಮಾಡುತ್ತಿರುವರು. ಫಲಾಪೇಕ್ಷೆಯಿಲ್ಲದೆ ಮೂರ್ಖನು ಸಹಾ ಕೆಲಸಮಾಡಲಾರನು. ಬುದ್ಧಿವಂತರೂ ಮತ್ತು ತಪಸ್ವಿಗಳೂ ಕೈಗೊಳ್ಳುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕಾರ್ಯಗಳು ಯಥಾರ್ಥವಾದುವು.

"ಪರಮಶ್ಚಾಸೌ ಆತ್ಮಾಚ ಪರಮಾತ್ಮಾ" ಈ ಪರಮ ಎಂಬ ಉಕ್ತಿಯು ಆತ್ಮದ ವಿಶೇಷಣ. ತ್ಯಾಗಿ ಸಂತರ ಆಚಾರ ವಿಚಾರಗಳು ಉತ್ತಮವಾಗಿರುವುದಾದರೆ ಅಂತಹ ಆತ್ಮಗಳನ್ನು ಮಹಾತ್ಮರೂಪರೆಂದು ಪರಿಗಣಿಸಲಾಗುವುದು. ಯಾರ ಯಾರ ಆಚರಣೆ ನಿಕೃಷ್ಟವೋ ಯಾರು ಕೆಟ್ಟ ಕೆಲಸ ಮಾಡುವರೋ, ಯಾರು ನಿರ್ದಯಿಯೋ ಅಥವ ಪಾಪಿಯೋ ಅಂತಹವರು ಅಧಮ ಆತ್ಮ ಎಂದು ಪರಿಗಣಿಸಲಾಗುವುದು. ಸರ್ವಜ್ಞ. ಸರ್ವದರ್ಶಿ, ಸರ್ವಶಕ್ತಿವರ್ಮಾ ಪೂರ್ಣ ಸುಖಿ, ಅಖಂಡ ಆನಂದವನ್ನು ಅನುಭವಿಸುವ ಅನಂತ ಗುಣಗಳಿಂದ ಪರಿಪೂರ್ಣವಾದ ಆತ್ಮವನ್ನು ಪರಮಾತ್ಮ ಎಂದು ಕರೆಯಲಾಗುವುದು.

ಈಶ್ವರ ಉಪಾಸನೆ

ಹೇಗೆ ಜೈನರು ಈಶ್ವರನ ಉಪಾಸನೆ ಸೇವೆ ಮತ್ತು ಭಕ್ತಿಯನ್ನು ಮಾಡುವರೋ ಹಾಗೆ ಇತರರಲ್ಲಿ ಬಹಳ ಕಡಿಮೆಯೆಂದು ಹೇಳಬಹುದು. ಜೈನ ಧರ್ಮವು ಪೂರ್ಣ ಆಸ್ತಿಕವಾದ ದರ್ಶನವು. ಈಶ್ವರನ ಉಪಾಸನೆ ಮತ್ತು ಸೇವೆಯನ್ನು ಪರಮ ಭಕ್ತಿಯಿಂದ ಕೈಗೊಳ್ಳುವವರು ಜೈನರು. ಅವರು ಪರಮಾತ್ಮನ ಭಕ್ತಿಯಲ್ಲಿ ಲೀನರಾಗಿ ತಮ್ಮ ತನು, ಮನ ಮತ್ತು ಧನವೆಲ್ಲವನ್ನೂ ಸಮರ್ಪಿಸುವರು ಜೈನ ದೇವಾಲಯಗಳನ್ನು ನೋಡುವುದರಿಂದಲೇ ಇದು ತಿಳಿಯುವುದು.

ಪರಮಾತ್ಮನ ಸೇವೆಯಿಂದ ಆತ್ಮವು ಪರಮಾತ್ಮನಾಗುವುದು. ಕೀಟವು ಭ್ರಮರದ ಯೋಚನೆಯಲ್ಲೇ ಲೀನವಾಗಿ ಯಾವ ರೀತಿ ಭ್ರಮರವಾಗು

ವುದೋ! ಅದೇ ರೀತಿ ಪರಮಾತ್ಮನ ಭಕ್ತಿಯಲ್ಲೀ ಲೀನವಾದ ಆತ್ಮ ಪರಮಾತ್ಮನಾಗುವುದು. ಆತ್ಮವು ಸ್ಫಟಿಕ ರತ್ನದಂತೆ ನಿರ್ಮಲವಾದುದು. ಸ್ಫಟಿಕ ರತ್ನದ ಬಳಿ ವರ್ಣವಸ್ತುವನ್ನಿಟ್ಟಾಗ ಆ ವಸ್ತುವಿನ ಬಣ್ಣ ಅದರಲ್ಲಿ ಬೀಳುತ್ತದೆ, ಅದರಿಂದ ಆ ರತ್ನವು ಆ ವರ್ಣದ್ದೆಂದು ಕರೆಯಲ್ಪಡುವುದು. ಅದೇ ರೀತಿ ಆತ್ಮಕ್ಕೆ ಯಾವ ಯಾವ ಸಂಯೋಗವು ಪ್ರಾಪ್ತವಾಗುವುದೋ ಅದಕ್ಕನುಗುಣವಾಗಿ ಪರಿವರ್ತನೆ ಹೊಂದುವುದು. ರಾಗ, ದ್ವೇಶ, ಅಥವಾ ಮೋಹದ ನಿಮಿತ್ತ ಪ್ರಾಪ್ತಿಯಾದರೆ ಆತ್ಮವು ರಾಗ, ದ್ವೇಷಿ ಅಥವಾ ಮೋಹಿಯಾಗುತ್ತದೆ. ಒಳ್ಳೆಯ ಸಂಯೋಗವು ಪ್ರಾಪ್ತವಾದರೆ, ಒಳ್ಳೆಯ ಭಾವನೆಗಳು ಉತ್ಪನ್ನವಾಗುವುವು. ಆದುದರಿಂದ, ಸಂಸಾರ ಸಾಗರದಲ್ಲಿರುವ ಆತ್ಮಗಳು ಒಳ್ಳೆಯ ನಿಮಿತ್ತ ಮತ್ತು ಅವಲಂಭನೆಗಳನ್ನು ಮೊಟ್ಟಮೊದಲು ಅತಿ ಶೀಘ್ರ ಹೊಂದಲೆತ್ನಿಸಬೇಕು. ಆದುದರಿಂದ ಅಂತಹ ಸರ್ವೋತ್ಕೃಷ್ಟವಾದ ಮತ್ತು ಅತ್ಯಂತ ಸುಂದರವಾದ ನಿಮಿತ್ತವು ಪರಮಾತ್ಮನ ಶಾಂತರಸಪೂರ್ಣವಾದ ಮುಖಮುದ್ರೆಯು ಮತ್ತು ವೀತರಾಗತೆಯ ಪ್ರತ್ಯಕ್ಷಾನುಭವವನ್ನುಂಟುಮಾಡುವ ಚಿತ್ತಾಕರ್ಷಕವಾದ ಮನೋಹರ ಮೂರ್ತಿಯು ಶಾಂತಮಹಿಯಾದ ಪ್ರಸನ್ನ ವದನದಿಂದ ಕೂಡಿದ ಮೂರ್ತಿಯೊಂದನ್ನು ಹೊಂದುವುದರಿಂದ ಇದು ಸಾಧ್ಯ. ಈ ಮೂರ್ತಿಯ ದರ್ಶನ, ಪೂಜೆ ಮತ್ತು ಸೇವೆಯನ್ನು ಭಕ್ತಿಯಿಂದ ಮಾಡಿದರೆ ಆತ್ಮವು ವೀತರಾಗದೆಶೆಯ ಅನುಭವವನ್ನು ಹೊಂದುತ್ತದೆ.

ಪರಮಾತ್ಮನಿಗೆ ಯಾವ ವಸ್ತುವಿನ ಆವಶ್ಯಕತೆಯೂ ಇಲ್ಲ ಆದರೂ ಸಹ ಭಕ್ತರು ಸಂಸಾರದ ಮೋಹ ಮಾಯೆಯಿಂದ ಮುಕ್ತರಾಗಲು ತಮ್ಮ ತನು ಮನ ಮತ್ತು ಧನವನ್ನು ಪರಮಾತ್ಮನ ಪಾದಕಮಲಗಳಲ್ಲಿ ಅರ್ಪಿಸಿ ಬಿಡುವರು ಮತ್ತು "ಓ, ದಯಾಮಯನಾದ ಪರಮಾತ್ಮನೆ, ಈ ಸರ್ವ ವಸ್ತುಗಳ ಮೇಲಿನ ಮೋಹದಿಂದ ಆತ್ಮವು ಜನ್ಮಜನ್ಮಾಂತರಗಳಿಂದ ಹುಚ್ಚಿಗೀಡಾಗಿದೆ. ಆದರೂ ಯಾವ ಜನ್ಮದಲ್ಲಿಯೂ ಅದಕ್ಕೆ ತೃಪ್ತಿಯುಂಟಾಗಲಿಲ್ಲ. ಈಗ ಈ ತುಚ್ಛ ಜಡ ಪದಾರ್ಥಗಳ ಮೇಲಿನ ಮೋಹವನ್ನು ಬಿಟ್ಟು ನಿನ್ನಂತೆ ವೀತರಾಗಿಯಾಗುವುದು ಯಾವಾಗ?" ಎಂದು ಪ್ರಾರ್ಥಿಸುವರು

ವೀತರಾಗಿಯಾಗಬೇಕೆಂಬ ಹಂಬಲದಿಂದ ಕೂಡಿದ ಆತ್ಮ ಅದನ್ನು ಹೊಂದುವುದು ಖಚಿತ. ಏಕೆಂದರೆ, ಪ್ರತಿ ಆತ್ಮದಲ್ಲಿಯೂ ವೀತರಾಗತೆಯು ಇದ್ದೇ ಇರುವುದು. ಆದರೆ ಅದು ಕರ್ಮದಿಂದ ಮುಚ್ಚಲ್ಪಟ್ಟಿದೆ. ವಾಸ್ತವವಾಗಿ ಆತ್ಮ ಮತ್ತು ಪರಮಾತ್ಮಗಳ ಸ್ವರೂಪ ಒಂದೇ ಆಗಿರುತ್ತೆ. ಆದ್ದರಿಂದಲೇ ನಾವು "ಸೋಹಂ, ಸೋಹಂ" ಎಂದು ಜಪಿಸುವುದು.

"ಓ, ದಯಾಮಯನಾದ ಪರಮಾತ್ಮನೇ, ನನ್ನ ಮತ್ತು ನಿನ್ನ ರೂಪಗಳಲ್ಲಿ ಸ್ವಲ್ಪವೂ ಭೇದವಿಲ್ಲ. ನಾನೂ ಸಹ ಪರಮಾತ್ಮ ಸ್ವರೂಪಿ. ಕರ್ಮ ವಿಮೋಚನೆಯಿಂದ ನೀನು ಪರಮಾತ್ಮನಾದೆ. ನಾನು ಕರ್ಮದ ಶೃಂಖಲೆಗೊಳಗಾಗಿ ಸಂಸಾರ ಸಾಗರದಲ್ಲಿ ತೊಳಲುತ್ತಿದ್ದೇನೆ." ಎಂದು ಪ್ರಾರ್ಥಿಸುವನು ಭಕ್ತ.

ಈ ರೀತಿ ವಿವಿಧ ಭಾವನೆಗಳಿಂದ ಕೂಡಿ ಪರಮಾತ್ಮನನ್ನು ಭಕ್ತಿಯಿಂದ ಪೂಜಿಸಿದರೆ ಆತ್ಮವು ಅನಂತಸುಖವನ್ನು ಅನುಭಸುವುದು. ಆತ್ಮದ ಉದ್ಧಾರಕ್ಕೆ ಜಿನೇಶ್ವರ ದೇವರಮೂರ್ತಿಯು ಎಷ್ಟರಮಟ್ಟಿಗೆ ಆಲಂಬನವೋ ಅದೇ ರೀತಿ ಧಾರ್ಮಿಕ ಪುಸ್ತಕಗಳು ಮತ್ತು ತ್ಯಾಗಿ ಗುರುದೇವರು ಸಹಾ ಪ್ರಶಸ್ತ ಅರ್ಥಾತ್ ಶ್ರೇಷ್ಠವಾದ ಅವಲಂಬನೆಗಳು. ಇದರಿಂದ ಅವರ ಸಹವಾಸದಲ್ಲಿರುವ ಆತ್ಮವು ಪರಿವರ್ತನೆ ಹೊಂದುತ್ತದೆ. ಆ ಆತ್ಮವು ಸನ್ಮಾರ್ಗದಲ್ಲಿ ತೆರಳುತ್ತದೆ. ವಿಕಾಸ ಹೊಂದುತ್ತದೆ ಮತ್ತು ಕರ್ಮಗಳನ್ನು ಧ್ವಂಸ ಮಾಡಲು ಸಾಮರ್ಥ್ಯವನ್ನು ಗಳಿಸುತ್ತದೆ.

ಈಶ್ವರ ಕರ್ತಾ

ಈ ಜಗತ್ತಿನ ಸೃಷ್ಟಿಕರ್ತನು ಈಶ್ವರನೆಂದು ಅನೇಕರು ಭಾವಿಸಿರುವರು. ಏಕೆಂದರೆ ಇಂತಹ ಜಗತ್ತನ್ನು ಸೃಷ್ಟಿಸಲು ಸಾಮಾನ್ಯ ಮಾನವನಿಂದ ಸಾಧ್ಯವಿಲ್ಲ. ಆದರೆ ಈ ಭಾವನೆ ಕೇವಲ ಭ್ರಮೆಯಿಂದ ಕೂಡಿದ್ದಾಗಿದೆ. ಈಶ್ವರನನ್ನು ಜಗತ್ಕರ್ತನೆಂದು ಭಾವಿಸುವುದರಿಂದ ಅನೇಕ ದೋಷಗಳಿಗೆ ಎಡೆಕೊಟ್ಟಂತಾಗುವುದು.

ಈಶ್ವರನು ಜಗತ್ತನ್ನು ಏತಕ್ಕಾಗಿ ಸೃಷ್ಟಿಸಿದನು? ಜಗತ್ತಿಲ್ಲದಿದ್ದಾಗ ಈಶ್ವರನು ಇದ್ದುದೆಲ್ಲಿ? ಈಶ್ವರನು ಒಬ್ಬನೇ ಇರಲು ಇಚ್ಛಿಸಲಿಲ್ಲವೇನು?

ಆದುದರಿಂದಲೇ ಲೀಲೆಗಾಗಿ ಜಗತ್ತನ್ನು ಸೃಷ್ಟಿಸಿದನೇನು? ಈ ಅಭಿಪ್ರಾಯುವನ್ನು ಒಪ್ಪುವುದಾದರೆ ಈಶ್ವರನು ಬಾಲಕನ ಸಮಾನನೆಂದು ಪರಿಗಣಿಸಲಾಗುವುದು.

ತನ್ನ ಮನಸ್ಸಿಗೆ ಅನುಗುಣವಾಗಿ ಈಶ್ವರನು ಜಗತ್ತನ್ನು ಸೃಷ್ಟಿಸಿದ್ದರೆ, ಈಶ್ವರನನ್ನು ಯಾರು ಸೃಷ್ಟಿಸಿದರೆಂಬ ಪ್ರಶ್ನೆ ಉದ್ಭವಿಸುವುದು. ಅಲ್ಲದೆ ಆತನ ಸೃಷ್ಟಿಗೆ ಕಾರಣವಾದವನು ಹೇಗೆ ಉಂಟಾದನು? ಎಂಬೀ ಪ್ರಶ್ನೆಗಳು ಏಳುವುವು. ಈ ಪರಂಪರೆಯು ಹೀಗೆಯೇ ಬೆಳೆದರೆ ಅದರ ಅಂತ್ಯವೆಲ್ಲಿ? ಈಶ್ವರನು ಜಗತ್ತಿನ ಸೃಷ್ಟಿಗೆ ಕಾರಣನೆಂಬ ವಾದವನ್ನು ಒಂದು ಪಕ್ಷ ಒಪ್ಪಿಕೊಳ್ಳೋಣ. ಆದರೆ, ಈಶ್ವರನು ಸುಖಿ, ದುಃಖಿ, ಶ್ರೀಮಂತ, ಬಡವ, ಕೈಯಿಲ್ಲ, ಕಾಲಿಲ್ಲ, ಮೂಗ, ಕಿವುಡ, ಬಲಶಾಲಿ, ದುರ್ಬಲ, ಎಂಬ ತಾರತಮ್ಯವನ್ನು ಏಕೆ ಕಲ್ಪಿಸಿದ? ಈ ವಿಚಿತ್ರವಾದ ವಿಶ್ವವನ್ನು ರೂಪಿಸಲು ಕಾರಣವೇನು? ಈಶ್ವರದ ದೃಷ್ಟಿಯಲ್ಲಿ ಸರ್ವರೂ ಸಮಾನರು ಎಂದು ಹೇಳುವುದಾದರೆ ಓರ್ವನನ್ನು ಸುಖಿಯಾಗಿಯೂ ಮತ್ತೋರ್ವನನ್ನು ದುಃಖಿಯಾಗಿಯೂ ಇರಿಸಲು ಕಾರಣವಿಲ್ಲದ್ದರಿಂದ ಈಶ್ವರನಿಗೆ ಏಕೆ ಈ ಪಕ್ಷಪಾತ ಭಾವನೆ?

ಓರ್ವನನ್ನು ಕೊಂದು ಮತ್ತೋರ್ವನನ್ನು ಜೀವಂತನಾಗಿ ಇರಿಸುವುದರಲ್ಲಿ ಈಶ್ವರನಿಗೆ ಸಿದ್ಧಿಸುವುದಾದರೂ ಏನು? ಈ ವಿಚಿತ್ರವೆಲ್ಲಾ ಕರ್ಮಾನುಸಾರವಾಗಿ ನಡೆಯುವುದೆಂದು ಉತ್ತರ ಕೊಡುವುದಾದರೆ ಸೃಷ್ಟಿಯಾದಿಯ ಹೊಸ ಜೀವನಕ್ಕೆ ಕರ್ಮವೆಲ್ಲಿಂದ ಹಂತು? ಆದುದರಿಂದ ಜಗತ್ತು, ಜೀವ ಮತ್ತು ಕರ್ಮ ಅನಾದಿ ಕಾಲದಿಂದ ಇದೆಯೆಂಬುದನ್ನು ಒಪ್ಪಬೇಕು. ಜೀವವು ಹೊಸ ಕರ್ಮಕ್ಕೆ ಒಳಗಾಗುತ್ತದೆ ಹಿಂದಿನದನ್ನು ಬಿಸಾಡುತ್ತದೆ. ಈ ರೀತಿ ಕರ್ಮಾನುಸಾರ ಆತ್ಮಕ್ಕೆ ಭಿನ್ನ ಭಿನ್ನ ದೆಶೆ ಉಂಟಾಗುತ್ತದೆ. ಈಶ್ವರ ಕರ್ತೃತ್ವ ವಾದವು ಕಪೋಲಕಲ್ಪಿತವಾದುದು. ಒಂದು ಮನೆಯಲ್ಲಿ ಹತ್ತು ಜನರಿರುತ್ತಾರೆ. ಆ ಕುಟುಂಬಕ್ಕೆ ಸೇರಿದವರೆಲ್ಲರ ಸೌಖ್ಯಕ್ಕೆ ಬೇಕಾದ ವಸ್ತುಗಳನ್ನು ಒದಗಿಸಲು ಯಜಮಾನನಿಗಷ್ಟು ಕಷ್ಟವಾಗುವುದು? ಇದೇ ರೀತಿ ಜಗತ್ಸಂಸಾರ ಭಾರವನ್ನು ಹೊತ್ತಿರುವ ಈಶ್ವರನಿಗೆ ಒದಗುವ ತೊಂದರೆ ಎಷ್ಟು? ಹಾಗಾದರೆ, ಈಶ್ವರನು ನಮಗಿಂತಲೂ ಹೆಚ್ಚಿನ ದುಃಖಕ್ಕೆ

ಈಡಾದವನೆಂದು ಭಾವಿಸಬೇಕಾಗುವುದು. ಈ ರೀತಿ ದುಃಖಕ್ಕೀಡಾದ ಈಶ್ವರನನ್ನು ಸುಖಿ ಎಂದು ಹೇಗೆ ಕರೆಯಲು ಸಾಧ್ಯ?

ಈಶ್ವರನು ಸಮರ್ಥನಾದರೆ ಎಲ್ಲರನ್ನೂ ಏಕೆ ಸಮಾನರನ್ನಾಗಿ ಮಾಡಲಿಲ್ಲ?

ಫಲವು ಮತ್ತು ವಿಚಿತ್ರತೆಯು ಕರ್ಮಾಧೀನ ಎಂದು ಹಲವರು ಹೇಳುವರು. ಈ ವಿಚಿತ್ರವೆಲ್ಲಾ ಕರ್ಮಾನುಸಾರವಾಗಿ ನಡೆಯುವುದಾದರೆ ಈಶ್ವರನು ವಿಶೇಷವಾದುದೇನನ್ನು ಮಾಡಿದನೆಂದು ಪ್ರಶ್ನಿಸಬೇಕಾಗುವುದು. ಪ್ರತ್ಯೇಕ ಆತ್ಮಗಳಿಗೆ ಅವುಗಳ ಕರ್ಮಾನುಸಾರ ಫಲ ಸಿಗುವುದಾದರೆ ಮಧ್ಯೆ ಈಶ್ವರನನ್ನು ತರುವುದೇಕೆ?

ಇಂತಹ ಕಲ್ಪನೆಗಳಿಗೆ ಎಡೆಗೊಡುವುದು ಅನಾವಶ್ಯಕ. ಇಡೀ ಸೃಷ್ಟಿಗೆ ಕಾರಣ ಆತ್ಮ ಮತ್ತು ಕರ್ಮ, ಕರ್ಮ ಮತ್ತು ಆತ್ಮ ಅನಾದಿಯಾಗಿ ಇದ್ದರೂ ಸಹ ಕರ್ಮರಹಿತವಾದ ಆತ್ಮದ ಸೃಷ್ಟಿಯ ಅಂತ್ಯವಿದ್ದೇ ಇರುವುದು. ಯಾವ ಆತ್ಮವು ಕರ್ಮಾಚರಣೆಯ ಮೂಲಕ ಕರ್ಮವನ್ನು ನಾಶಪಡಿಸುತ್ತದೋ ಅಂತಹ ಆತ್ಮದ ಸೃಷ್ಟಿಯು ಅಂತ್ಯವಾಗುತ್ತದೆ ಮತ್ತು ಅದು ಪರಮಾತ್ಮವಾಗುತ್ತದೆ.

ಜೈನ

ಸಾಧುಧರ್ಮವನ್ನು ಪಾಲನೆ ಮಾಡುವುದು ಸಾಮಾನ್ಯ ವ್ಯಕ್ತಿಗೆ ಬಹು ಕಠಿಣ. ಈ ಮಾರ್ಗವು ಬಹಳ ಕಷ್ಟತಮವಾದುದು. ಗಟ್ಟಿ ಮನಸ್ಸಿನವರು ಕೆಲವರು ಮಾತ್ರ ಈ ಮಾರ್ಗವನ್ನು ಅವಲಂಭಿಸಬಹುದು. ಸಾಧುಧರ್ಮವನ್ನು ಪಾಲಿಸಲು ಯಾರಿಂದ ಸಾಧ್ಯವಿಲ್ಲವೋ ಅಂತಹವರ ಅನುಕೂಲಕ್ಕಾಗಿ ಶ್ರಾವಕ ಅಥವಾ ಗೃಹಸ್ಥ ಧರ್ಮದ ಮಾರ್ಗವನ್ನು ತೋರಲಾಗಿದೆ.

ಸಮ್ಯಕ್ತ್ವ

ಸಮ್ಯಕ್ತ್ವವೆಂದರೆ ಸದ್ದೃಷ್ಟಿ, ಸದ್ಭಾವನೆ, ತತ್ವಗಳಲ್ಲಿ ಪೂರ್ಣನಂಬಿಕೆ, ಪರಮಾತ್ಮನ ವಿಚಾರದಲ್ಲಿ ಪೂರ್ಣ ಶ್ರದ್ಧೆ, ತೀರ್ಥಂಕರರ ಮೂರ್ತಿಗಳಲ್ಲಿ

ದೇವತ್ವದ ಭಾವನೆ, ಗುರುವಿನಲ್ಲಿ ಗುರುತ್ವಭಾವನೆ ಮತ್ತು ಧರ್ಮದಲ್ಲಿ ಧರ್ಮತ್ವದ ಭಾವನೆ.

1. ರಾಗ, ದ್ವೇಷ ಆದಿದೋಷರಹಿತವೀತರಾಗಿ, ಸರ್ವಜ್ಞ, ತ್ರೈಲೋಕ್ಯ ಪೂಜಿತ ಅರಿಹಂತ ಭಗವಂತನನ್ನು ಪರಮಾತ್ಮ ರೂಪವೆಂದು ಭಾವಿಸಬೇಕು.

2. ಅಹಿಂಸಾ ಆದಿಪಂಚ ಮಹಾವ್ರತಗಳನ್ನು ಪಾಲಿಸುವವನನ್ನೂ ಮತ್ತು ಜೇನು ವಿವಿಧ ಪುಷ್ಪಗಳಿಂದ ಮಧುವನ್ನು ಯಾವ ರೀತಿ ಪಡೆಯುತ್ತದೋ ಅದೇ ರೀತಿ ತನ್ನ ಆಹಾರವನ್ನು ಭಿಕ್ಷೆಯ ಮೂಲಕ ಸಂಗ್ರಹಿಸಿ ಉದರಪೋಷಣೆ ಮಾಡಿಕೊಂಡು ಸರ್ವಜ್ಞನಾದ ಪರಮಾತ್ಮನಿಂದ ರೂಪಿಸಲ್ಪಟ್ಟ ಧರ್ಮದ ಉಪದೇಶ ಮಾಡುವವರನ್ನೂ ಗುರುಗಳೆಂದು ಭಾವಿಸಿ ಗೌರವಿಸಬೇಕು.

3. ದುರ್ಗತಿಯ ಮಾರ್ಗವನ್ನು ಅವಲಂಬಿಸುವ ಜೀವಗಳನ್ನು ರಕ್ಷಿಸುವ ಮಾರ್ಗಕ್ಕೆ ಧರ್ಮವೆಂದು ಹೆಸರು. ಈ ಧರ್ಮವು ದಯಾಪೂರಿತವಾದುದು. ಸರ್ವಜ್ಞನಾದ ಪರಮಾತ್ಮನಿಂದ ರೂಪಿಸಲ್ಪಟ್ಟ ಧರ್ಮವೇ ಸದ್ಧರ್ಮವೆಂದು ಭಾವಿಸಬೇಕು.

ದೇವ, ಗುರು ಮತ್ತು ಧರ್ಮಗಳಲ್ಲಿ ಪೂರ್ಣ ಶ್ರದ್ಧೆ ಯಾರಿಗೆ ಇರುವುದೋ ಅಂತಹವರನ್ನು " **ಜೈನ** " ಎಂದು ಕರೆಯಲಾಗುವುದು.

★

ಸ್ಯಾ ದ ವಾ ದ

ಜೈನಧರ್ಮವು ಸ್ಯಾದವಾದದ ಆಧಾರದ ಮೇಲೆ ರೂಪಿತವಾಗಿದೆ. ಸ್ಯಾದ್ವಾದವನ್ನು ಅನೇಕಾಂತವಾದ ಮತ್ತು ಅಪೇಕ್ಷಾವಾದವೆಂದೂ ಕರೆಯುವರು. ಒಂದು ವಸ್ತುವಿನ ವಾಸ್ತವಿಕ ಸ್ವರೂಪವನ್ನು ಅರಿಯುವುದಕ್ಕೆ ಅಪೇಕ್ಷೆಗಳು ಅವಶ್ಯಕವಾಗಿರುವು. ಜೈನಧರ್ಮದಲ್ಲಿ ಇಂತಹ ಅಪೇಕ್ಷೆಯನ್ನು " ನಯ " ಎಂದು ಕರೆಯಲಾಗುವುದು. ಸ್ಯಾದ್ವಾದವು ಯಥಾರ್ಥ

ವಾದುವು ಏಕಾಂತವಾದುವು ಮಿಥ್ಯಾವಾದ. ಒಂದು ವಸ್ತುವನ್ನು ಒಂದೇ ವಿಧವಾಗಿ ನುಡಿಯುವುದರಿಂದ ಸತ್ಯವನ್ನು ಅರಿಯಲು ಸಾಧ್ಯವಿಲ್ಲ. ವಿವಿಧ ರೂಪಗಳಿಂದ ಮತ್ತು ಮಾರ್ಗಗಳಿಂದ ವಿಚಾರ ಮಾಡಬೇಕು. ವಸ್ತುವಿನ ಯಥಾರ್ಥ ಜ್ಞಾನವನ್ನು ದೊರಕಿಸಿಕೊಡುವುದು ಸ್ಯಾದ್ವಾದ. ಇದನ್ನು ಈ ಉದಾಹರಣೆಯಿಂದ ಸ್ಪಷ್ಟಪಡಿಸಬಹುದು. ೭೫ ವರ್ಷ ವಯಸ್ಸಿನ ವೃದ್ಧನೋರ್ವನಿರುವನು. ಅವನಿಗೆ ೪೫ ವರ್ಷದ ಮಗನೋರ್ವನುಂಟು. ಆ ಮಗನಿಗೊಬ್ಬ ಮಗ ಅವನಿಗೆ ೧೫ ವರ್ಷ ವಯಸ್ಸು. ೪೫ ವರ್ಷದವನನ್ನು ತಂದೆಯೇ ಎಂದು ಕರೆಯುವುದು ತಪ್ಪು. ಏಕೆಂದರೆ ಆತನಿಗೆ ಪಿತನೋರ್ವನಿರುವನು. ಹಾಗೆಯೇ ಆ ವೃದ್ಧನಿಗೆ ಪುತ್ರನಾದ್ದರಿಂದ ೪೫ ವರ್ಷ ವಯಸ್ಸಿನವನನ್ನು ಪುತ್ರನೆ ಎಂದು ಹೇಳುವುದಕ್ಕೂ ಯೋಗ್ಯವಲ್ಲ. ಏಕೆಂದರೆ ಅವನು ೧೫ ವರ್ಷದವನಿಗೆ ತಂದೆಯೂ ಆಗಿರುತ್ತಾನೆ. ಹಾಗೆಯೆ ಅವನು ಮತ್ತೆ ಕೆಲವರಿಗೆ ಚಿಕ್ಕಪ್ಪನೋ ದೊಡ್ಡಪ್ಪನೋ ಸೋದರಮಾವನೋ ಆಗುವನು. ಆದುದರಿಂದ ೪೫ ವರ್ಷದವನು ಕೇವಲ ತಂದೆಯೇ ಅಲ್ಲ. ಕೇವಲ ಪುತ್ರನೇ ಅಲ್ಲ, ಚಿಕ್ಕಪ್ಪನೂ ಅಲ್ಲ. ದೊಡ್ಡಪ್ಪನೂ ಅಲ್ಲ ಒಂದೇ ಧರ್ಮವನ್ನು ನಿಶ್ಚಯಿಸಿದರೆ ಆ ನಿಶ್ಚಯವು ಮಿಥ್ಯಾನಿಶ್ಚಯವಾಗುವುದು. ಪರಂತು ಅವನು ಒಂದು ವಿಧವಾಗಿ ತಂದೆಯೂ, ಮತ್ತೊಂದು ವಿಧವಾಗಿ ಪುತ್ರನೂ, ಇನ್ನೊಂದು ವಿಧವಾಗಿ ಚಿಕ್ಕಪ್ಪನೂ, ಮತ್ತೊಂದು ವಿಧವಾಗಿ ದೊಡ್ಡಪ್ಪನೂ, ಆಗಿರುವನೆಂದು ನಿಶ್ಚಿಯಿಸಿದಲ್ಲಿ ಇದೇ ನಿಶ್ಚಯವು ಸ್ಯಾದ್ವಾದವು, ಯಥಾರ್ಥ ನಿಶ್ಚಯವು. ವಿವಿಧ ರೀತಿಯಲ್ಲಿ ಒಂದು ವಸ್ತುವನ್ನು ವಿಮರ್ಶಿಸಲು ಸ್ಯಾದ್ವಾದವು ಬಹು ಉಪಕಾರಿಯು. ಹೀಗೆ ವಿವಿಧ ದೃಷ್ಟಿಯಿಂದ ವಿಚಾರಿಸುವುದರಿಂದ ವಸ್ತುವಿನ ಯಥಾರ್ಥವು ತಿಳಿದುಬರುವುದು.

ವಸ್ತುವಿನ ಕೇವಲ ಒಂದು ಗುಣ ಅಥವ ಧರ್ಮವನ್ನು ಅರಿತು ಅದು ಇಂತಹದು, ಅಂತಹದು ಎಂದು ಹೇಳುವುದು ಕೇವಲ ಭ್ರಮೆ. ಏಕೆಂದರೆ ಅದೇ ಕಾಲದಲ್ಲಿ ಆ ವಸ್ತುವಿನಲ್ಲಿ ಇತರ ಅನೇಕ ಗುಣಗಳು ಅಡಕವಾಗಿರುವುವು ಸ್ಯಾದ್ವಾದವನ್ನು ಸರಿಯಾದ ರೀತಿಯಲ್ಲಿ ಅಭ್ಯಾಸಮಾಡಬೇಕು. ಅದರ ಸಹಾಯದಿಂದ ವಸ್ತುಗಳ ಸತ್ಯತೆಯನ್ನು ಅರಿಯಬಹುದು. ನಾವು ಕಾಣುತ್ತಾ ಇರುವ ಜಗತ್ತೇನು? ಅದರಲ್ಲಿರುವ ವಸ್ತುಗಳು ಹೇಗಿವೆ? ಅದರ

ಸ್ವಭಾವ ಹೇಗಿದೆ? ಅದರ ಗುಣವು ಯಾವ ರೀತಿ ಇದೆ? ಎಂಬುದನ್ನು ಯಥಾರ್ಥವಾಗಿ ಸ್ಯಾದ್ವಾದದ ಮೂಲಕವೇ ತಿಳಿಯಬಹುದು. ಜೈನಧರ್ಮವು ಅಹಿಂಸಾವಾದ, ಅಪರಿಗ್ರಹವಾದ ಮತ್ತು ಸ್ಯಾದ್ವಾದ ಎಂಬ ಬಲಯುತ ವಾದ ಕಂಬಗಳ ಬೆಂಬಲ ಪಡೆದಿದೆ ಈ ಮಹಾ ಬೆಂಬಲದ ಫಲವಾಗಿ ಜೈನಧರ್ಮವು ವಿಶ್ವದಲ್ಲಿ ಅತುತ್ತಮ ಸ್ಥಾನವನ್ನು ಗಳಿಸಿರುವುದು ಅದರ ವೈಶಾಲ್ಯ. ಪ್ರೇಮ, ವಾದ ವೈಖರಿಯಿಂದ ಜೈನಧರ್ಮವು ವಿಶ್ವಧರ್ಮವೆನಿಸಿ ಕೊಂಡಿದೆ.

ಜೈನಧರ್ಮವನ್ನು ಸರಿಯಾಗಿ ನಾವು ಅರ್ಥಮಾಡಿಕೊಂಡರೆ, ಅಹಿಂಸೆಯ ಮಹತ್ವವನ್ನು ನಾವು ಚೆನ್ನಾಗಿ ಅರಿಯುವೆವು. ಅಹಿಂಸೆಯು ಪ್ರತ್ಯೇಕ ವ್ಯಕ್ತಿಯನ್ನೂ ಬಲಶಾಲಿಯನ್ನಾಗಿಯೂ ಮತ್ತು ದೃಢಕಾಯನನ್ನಾಗಿಯೂ ಮಾಡುವುದು. ಅನೇಕರು ಭಾವಿಸಿರುವಂತೆ ಅಹಿಂಸೆಯು ಪುಕ್ಕಲನ್ನುಂಟು ಮಾಡುವುದಿಲ್ಲ. ಜೀವ ಎಂದು ಯಾವುದನ್ನು ಕರೆಯುವರು? ಅದು ಯಾವುದರಲ್ಲಿ ಇರುತ್ತದೆ? ಅದರ ಸ್ವರೂಪವೇನು? ದಯಾಪೂರಿತವಾಗಿದೆಯೆ ಅಥವ ಇಲ್ಲವೆ, ಹಿಂಸೆಯಿಂದ ಆವರ್ತಿತವಾಗಿದೆಯೋ ಅಥವ ಅಹಿಂಸಾಸ್ವರೂಪಿಯೆ, ಅದರ ಭಾವದಯೆ, ದ್ರವ್ಯದಯೆ, ಕರ್ಮಪರಿಪಾಕ ಇತ್ಯಾದಿ ಪ್ರಶ್ನೆ ಮತ್ತು ಜಿಜ್ಞಾಸೆಗಳಿಗೆ ತಕ್ಕ ಉತ್ತರವು ಜೈನಧರ್ಮಗಳಲ್ಲಿ ದೊರೆಯುವುದು.

— ★ —

ಷಡ್ ದ್ರವ್ಯ

ಜೈನರಲ್ಲಿ ಕಂಡುಬರುವ ಷಡ್‌ದ್ರವ್ಯಗಳು—

೧. ಧರ್ಮಾಸ್ತಿಕಾಯ ೨. ಅಧರ್ಮಾಸ್ತಿಕಾಯ. ೩ ಆಕಾಶಾಸ್ತಿಕಾಯ. ೪. ಪುದ್ಗಲಾಸ್ತಿಕಾಯ. ೫. ಜೀವಾಸ್ತಿಕಾಯ ಮತ್ತು ೬. ಅದ್ಧಾಸಮಯ ಅಥವ ಕಾಲ.

೧. ಧರ್ಮಾಸ್ತಿಕಾಯ—ಗತಿಗೆ ಸಾಧನ. ಜೀವಗಳ ಮತ್ತು ಪುದ್ಗಲದ ಚಲನೆಗೆ ಸಹಾಯಮಾಡುವ ಸಾಧನಕ್ಕೆ ಧರ್ಮವೆಂದು ಹೆಸರು. ಅನೇಕ ಪ್ರದೇಶಗಳನ್ನು ಹೊಂದಿರುವ ವಸ್ತುವಿಗೆ ಅಸ್ತಿಕಾಯ ಎಂದು ಹೆಸರು. ಧರ್ಮ

ವೆಂಬ ಪ್ರದೇಶ ಸಮೂಹವೇ ಧರ್ಮಾಸ್ತಿಕಾಯವೆನಿಸಿಕೊಳ್ಳುವುದು. ಮೀನು ಈಜುವ ಶಕ್ತಿಯನ್ನು ಹೊಂದಿದೆ. ಅದಕ್ಕೆ ಈಜಲು ಇಚ್ಛೆ ಸಹ ಇದೆ. ಆದರೆ ನಿಮಿತ್ತಕಾರಣವಾದ ನೀರಿಲ್ಲದೆ ಅದು ಈಜಲಾರದು. ಅದೇ ರೀತಿ ಪುದ್ಗಲ ಮತ್ತು ಆತ್ಮದ ಚಲನೆಗೆ ಸಹಾಯಮಾಡುವ ದ್ರವ್ಯಕ್ಕೆ 'ಧರ್ಮಾಸ್ತಿ ಕಾಯ' ಎಂದು ಹೆಸರು.

೨. ಅಧರ್ಮಾಸ್ತಿಕಾಯ—ಸ್ಥಿತಿಗೆ ಸಾಧನ-

ಚಲಿಸುವ ಜೀವ ಮತ್ತು ಪುದ್ಗಲಗಳ ಸ್ಥಿತಿಗೆ (ವಿಶ್ರಾಂತಿ ಪಡೆಯಲು) ಇದು ಸಹಾಯ ಮಾಡುವುದು. ಉಚಿತ ಭೋಜನ ಸಿಗುವೆಡೆ ಭಿಕ್ಷುಗಳು ಇರಲು ಇಚ್ಛಿಸುವರು. ಉಚಿತ ಭೋಜನವು ಭಿಕ್ಷುಗಳನ್ನು ಬಲವಂತವಾಗಿ ಕೈಹಿಡಿದು ಕರೆದುಕೊಂಡು ಹೋಗುವುದಿಲ್ಲ. ಉಚಿತವಾಗಿ ಭೋಜನ ವನ್ನು ಹಂಚುವರೆಂಬ ಸುದ್ದಿಯನ್ನು ಭಿಕ್ಷುಗಳು ತಾವೇ ಕೇಳಿ ಅಲ್ಲಿಗೆ ತೆರಳು ವರು. ಬಿಸಿಲಿನ ತಾಪದಲ್ಲಿ ನಡೆಯುವ ಪ್ರವಾಸಿಯು ಸುಸ್ತಾಗಿ ಮರದ ನೆರಳಿರುವೆಡೆಗೆ ತೆರಳಿ ವಿಶ್ರಾಂತಿ ಪಡೆಯುವನು. ನೆರಳಿಗೆ ಬಾ ಎಂದು ಮರವು ಪ್ರವಾಸಿಯನ್ನು ಖಂಡಿತವಾಗಿ ಕರೆಯುವುದಿಲ್ಲ. ಪ್ರವಾಸಿ ತನ್ನ ಇಚ್ಛೆ ಯಂತೆ ನೆರಳಿಗೆ ತೆರಳುವನು. ಮರವು ಆತನಿಗೆ ಸಹಾಯ ಮಾಡುವುದು. ಅದೇ ರೀತಿ ಅಧರ್ಮಾಸ್ತಿಕಾಯವು ಚಲಿಸುವ ವಸ್ತುಗಳು ವಿಶ್ರಾಂತಿಯನ್ನು ಪಡೆಯಬೇಕೆಂದು ಒತ್ತಾಯಪಡಿಸುವುದಿಲ್ಲ. ವಿಶ್ರಾಂತಿ ಪಡೆಯಲು ಸಹಾಯ ಮಾತ್ರ ಮಾಡುವುದು.

೩. ಅಕಾಸ್ತಿಕಾಯ -ಅವಕಾಶದಾತಾ.

ಇತರ ದ್ರವ್ಯಗಳಿಗೆ ಇರಲು ಅವಕಾಶಕೊಡುವುದು ಈ ದ್ರವ್ಯದ ವೈಶಿಷ್ಟ್ಯ. ಆಕಾಶವನ್ನು ಕಣ್ಣಿನಿಂದಾಗಲಿ ಅಥವಾ ಮತ್ಯಾವ ಇಂದ್ರಿಯ ದಿಂದಾಗಲಿ ನೋಡಲು ಸಾಧ್ಯವಿಲ್ಲ. ಇತರ ವಸ್ತುಗಳು ಇರುವಿಕೆಗೆ ಅದು ಅವಕಾಶ ಕೊಡುವುದರಿಂದ ಅದರ ಅಸ್ತಿತ್ವವು ಸ್ಥಿರಪಟ್ಟಿದೆ. ಲೋಕಕ್ಕೆ ಸಂಬಂಧಿಸಿದ ಆಕಾಶವನ್ನು 'ಲೋಕಾಕಾಶ' ಎಂದೂ ಆಲೋಕಸಂಬಂಧಿ ಆಕಾಶವನ್ನು 'ಅಲೋಕಾಕಾಶ' ಎಂದೂ ಕರೆಯುವರು. ಲೋಕಾಕಾಶದಲ್ಲಿ ಧರ್ಮಾಸ್ತಿಕಾಯ ಮತ್ತು ಅಧರ್ಮಾಸ್ತಿಕಾಯಗಳ ಸಹಾಯದಿಂದ ಮಾತ್ರ

ಜೀವ ಮತ್ತು ಪುದ್ಗಲಗಳ ಚಲನೆ ಸಾಧ್ಯ. ಅಲೋಕದಲ್ಲಿ ಈ ಧರ್ಮಾಸ್ತಿಕಾಯವೂ ಅಧರ್ಮಾಸ್ತಿಕಾಯವೂ ಇಲ್ಲದಿರುವುದರಿಂದ ಅಲ್ಲಿ ಅಣು ಅಥವ ಜೀವವಿಲ್ಲ. ಅಲ್ಲಿಗೆ ಲೋಕದಿಂದ ಅಣು ಅಥವ ಜೀವ ಹೋಗಲು ಅಸಾಧ್ಯ. ಏಕೆಂದರೆ, ಚಲನೆಗೆ ಸಾಧನವಾದ ಧರ್ಮವೂ ಮತ್ತು ವಿಶ್ರಾಂತಿ ಸಾಧನವಾದ ಅಧರ್ಮವೂ ಅಲ್ಲಿಲ್ಲ. ಆಕಾಶವು ವಿಸ್ತಾರದಲ್ಲಿ ಅನಂತ

೪. ಪುದ್ಗಲಾಸ್ತಿಕಾಯ—

ಪರಿಪೂರ್ಣ ಹೊಂದುವುದು, ಕೆಳಗೆ ಬೀಳುವುದು, ಪ್ರತ್ಯೇಕವಾಗುವುದು ಇತ್ಯಾದಿ ಸ್ವಭಾವದ ಪದಾರ್ಥಗಳಿಗೆ 'ಪುದ್ಗಲ' ಎಂದು ಹೆಸರು. ಪುದ್ಗಲಗಳ ಕೆಲವು ಭಾಗವು ನೇತ್ರಕ್ಕೆ ವಿಷಯವೂ ಮತ್ತು ಕೆಲವು ಭಾಗಗಳು (ಪರಮಾಣುಗಳು) ಅನುಮಾನದಿಂದ ಸ್ಥಿರಪಡುವುವು. ಮಡಿಕೆ. ಚಾಪೆ, ಮರದ ಹಲಗೆ, ಮನೆ, ಗಾಡಿ ಇತ್ಯಾದಿಗಳು ಸ್ಥೂಲ ಪುದ್ಗಲಮಯವಾಗಿದೆ. ಏಕೆಂದರೆ ಪದಾರ್ಥಗಳು ನಮ್ಮ ದೃಷ್ಟಿಗೆ ಗೋಚರಿಸುವುವು. ಇವುಗಳಲ್ಲದೆ ಸೂಕ್ಷ್ಮವಾಗಿರುವ ಪುದ್ಗಲವನ್ನು ಕೇವಲ ಅನುಮಾನದಿಂದ ಅರಿಯಬೇಕು. ಜೈನಧರ್ಮದ ಪ್ರಕಾರ ಶಬ್ದ, ಪ್ರಕಾಶ, ನೆರಳು, ಸೂರ್ಯರಶ್ಮಿ, ಕತ್ತಲು ಇತ್ಯಾದಿಗಳೂ ಸಹ ಪುದ್ಗಲದ ಭೇದವೇ.

೫. ಜೀವಾಸ್ತಿಕಾಯ—ಜೀವ ಅಥವ ಆತ್ಮ.

ಚೈತನ್ಯಸ್ವರೂಪಿ ಆತ್ಮವನ್ನು ಜೀವ ಎಂದು ಕರೆಯುವರು. 'ನಾನು ಸುಖವಾಗಿದ್ದೇನೆ. ನಾನು ದುಃಖಿ' ಎಂಬ ಅನುಭವವು ಮೃತನಾದವನಿಗೆ ಇಲ್ಲ. ಏಕೆಂದರೆ ಆ ಸಮಯದಲ್ಲಿ ಆತನಲ್ಲಿ ಚೈತನ್ಯಸ್ವರೂಪಿ ಆತ್ಮನಿರುವುದಿಲ್ಲ. ಆಗ್ಯೆ ಆತ್ಮವು ಈ ಶರೀರ ಬಿಟ್ಟು ಬೇರೊಂದು ಶರೀರವನ್ನು ಸೇರುತ್ತದೆ. ಕೊಡಲಿಯಿಂದ ಮರ ಕಡಿಯಲ್ಪಡುವುದು. ಆದರೆ ಕೊಡಲಿಯೂ ಮರ ಕಡಿಯುವವನೂ ಪ್ರತ್ಯೇಕ ಪ್ರತ್ಯೇಕ. ದೀಪದ ಸಹಾಯದಿಂದ ನಾವು ನೋಡುತ್ತೇವೆ. ಆದರೆ ನಾವೂ ಮತ್ತು ದೀಪವೂ ಬೇರೆಬೇರೆ. ಇದೇ ರೀತಿ ಇಂದ್ರಿಯಗಳ ಮೂಲಕ ರೂಪ, ರಸ ಇತ್ಯಾದಿಗಳನ್ನು ಗ್ರಹಿಸಲಾಗುವುದು. ಆದರೆ ಇಂದ್ರಿಯಗಳು ಮತ್ತು ಅವುಗಳನ್ನು ಅನುಭವಿಸುವವರು

ಪ್ರತ್ಯೇಕಪ್ರತ್ಯೇಕ. ಆತ್ಮಕ್ಕೆ ವರ್ಣವಿಲ್ಲ. ಆದುದರಿಂದ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದರೂ ಸಹ ಅನುಭವದಿಂದ ನಾವು ಅದನ್ನು ನಂಬುತ್ತೇವೆ.

೬. ಕಾಲ—ಸಮಯ.

ಎರಡೂವರೆ ದ್ವೀಪಗಳಲ್ಲಿರತಕ್ಕ ಸೂಕ್ಷ್ಮವಾದ ಒಂದು ದ್ರವ್ಯವು ಇದನ್ನು ವಿಭಾಗಿಸಲಾಗದು. ಇದು ಒಂದು ಸಮಯ ರೂಪವಾದುದರಿಂದ ಪ್ರದೇಶಗಳ ಸಮೂಹ ರೂಪವಲ್ಲ. ಅತಏವ ಇದು ಅಸ್ತಿಕಾಯವೆನಿಸದು. ಋತು ಧರ್ಮಕ್ಕೆ ಅನುಗುಣವಾಗಿ ಮರಗಳು ಪರಿವರ್ತನೆ ಹೊಂದುವುವು. ಈ ಪರಿವರ್ತನೆಯು ಕಾಲದ ಅಸ್ತಿತ್ವವನ್ನು ಸೂಚಿಸುತ್ತದೆ. ಕಾಲದ ಅಸ್ತಿತ್ವ ವಿಲ್ಲದಿದ್ದರೆ ಈ ಬಾಲಕನು ಕಿರಿಯವನು, ಆ ವಿದ್ಯಾರ್ಥಿಗೆ ವಯಸ್ಸಾಗಿದೆ ಎಂದು ಹೇಳಲು ಹೇಗೆ ಸಾಧ್ಯ? ಇದರಿಂದ ಕಾಲದ ಸ್ಥಿರತೆಯು ನಿಸ್ಸಂಶಯ ವಾಗಿ ಸಿದ್ಧಿಸುವುದು.

ಈ ಷಡ್ದ್ರವ್ಯಗಳು ವಿಶ್ವರಚನೆಗೆ ಆಧಾರ ಎಂದು ಜೈನಧರ್ಮ ಸಾರುತ್ತದೆ. ವಿವಿಧ ವಸ್ತುಗಳ ಚಲನ ಮತ್ತು ಸ್ಥಿರತ್ವಕ್ಕೆ ಜೀವ ಮತ್ತು ಜಡವೇ ಸ್ವತಂತ್ರ ಕಾರಣವು. ಅವುಗಳು ತಮ್ಮ ವ್ಯಾಪಾರದಿಂದಲೇ ಚಲಿಸುವುವು ಮತ್ತು ಸ್ಥಿರಪಡುವವು ಆದರೂ ಆ ಕ್ರಿಯೆಗಳಿಗೆ ಸಹಾಯಕರೂಪವಾಗಿ ಒಂದು ಶಕ್ತಿಯ ಅಪೇಕ್ಷೆಯೂ ಇರುವುದೆಂದು ಆಧುನಿಕವೈಜ್ಞಾನಿಕರು ಭಾವಿಸುತ್ತಾರೆ. ವೈಜ್ಞಾನಿಕರ ಈ ಭಾವನೆಯು ಧರ್ಮಾಸ್ತಿಕಾಯವನ್ನು ಸಮರ್ಥಿಸುವುದು. ಷಡ್ದ್ರವ್ಯದ ವಿಚಾರದಲ್ಲಿ ಅನೇಕ ಗ್ರಂಥಗಳನ್ನು ಬರೆಯಬಹುದು. ಆದರೆ ಇಲ್ಲಿ ಸ್ಥಳ ಸಂಕೋಚದಿಂದ ಅವುಗಳ ಸಾರವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

★

ಜೈನ ತಪಸ್ಸು

ಜೈನರ ತಪಸ್ಸು ವಿಶ್ವವಿಖ್ಯಾತವಾದುದು. ಜೈನರ ಉಪವಾಸವು ಬಹಳ ಕಠಿಣವಾದುದು. ಉಪವಾಸ ಮಾಡುವವರು ರಾತ್ರಿಯಾಗಲಿ ಅಥವ ಬೆಳಿಗ್ಗೆಯಾಗಲಿ ಉಪಹಾರ, ಫಲ, ಜಲ ಇತ್ಯಾದಿಗಳನ್ನು ಸೇವಿಸಕೂಡದು. ಇಂದ್ರಿಯಗಳನ್ನು ನಿಗ್ರಹಿಸುವ ಉದ್ದೇಶ್ಯದಿಂದಲೇ ತಪಸ್ಸು ಮಾಡುವುದು.

ಆತ್ಮಶುದ್ಧಿಗಾಗಿ ಜೈನರು ಹರ್ಷದಿಂದ ಅನೇಕ ಮಾಸ ಉಪವಾಸ ಮಾಡು ವರು. ಈ ರೀತಿ ವಿಧಿಪೂರ್ವಕವಾಗಿ ತಪಸ್ಸು ಮಾಡುವುದರಿಂದ ಶರೀರ ಶುದ್ಧಿ ಹೊಂದುವುದು. ಅನೇಕ ಅಸಾಧ್ಯ ರೋಗಗಳೂ ಜಡಮೂಲವಾಗಿ ನಿರ್ನಾಮವಾಗುವುವು. ಉಪದ್ರವ ದೂರವಾಗುತ್ತದೆ. ಪಾಪ ನಾಶವಾಗು ತ್ತದೆ. ದುಷ್ಕರ್ಮಗಳು ಕರಗುವುವು. ವಿಘ್ನಗಳು ದೂರವಾಗುವುವು ಆತ್ಮವು ಪುಣ್ಯಶಾಲಿ, ಸುಖಿ ಮತ್ತು ಸಮೃದ್ಧಿ ಹೊಂದುತ್ತದೆ. ಸಹಸ್ರಾರು ಜನರಿಗೆ ಆಧಾರವಾಗುತ್ತದೆ ಈ ರೀತಿಯಾದ ತಪಸ್ಸಿನಿಂದ ಸಾವಿರಾರು ಜೀವಿಗಳ ರಕ್ಷಣೆಯಾಗುತ್ತದೆ. ತಪಸ್ಸಿನಲ್ಲಿ ದಯೆ ಸಹ ಅಡಗಿದೆ. ತಪಸ್ಸಿನಿಂದ ಧರ್ಮ ಹೆಚ್ಚುವುದು ಪಾಪ ಕರಗುವುದು. ಸುಖ ಅಧಿಕವಾಗುವುದು. ದುಃಖ ಕ್ಷೀಣಿಸುವುದು. ಸಂಪತ್ತು ಅಧಿಕವಾಗುವುದು. ದರಿದ್ರವು ನಷ್ಟ ವಾಗುತ್ತದೆ. ಆದುದರಿಂದ ಪ್ರತಿ ವ್ಯಕ್ತಿಯೂ ಆತನ ಶಕ್ತಿಗೆ ಅನುಗುಣವಾಗಿ ತಪಸ್ಸು ಮಾಡಬೇಕು.

ಇತರ ಜನರು ಪುಣ್ಯ ದಿವಸಗಳ ಅಮೂಲ್ಯ ಕಾಲವನ್ನು ಆತ್ಮೋದ್ಧಾ ರಕ್ಕೆ ಬದಲು ಸಂತೋಷ ಮತ್ತು ವಿಲಾಸಗಳಲ್ಲಿ ಕಳೆಯುವರು. ಆದರೆ ಜೈನ ರಿಗೆ ಈ ಕಾಲವು ಅತಿ ಮಹತ್ವವಾದುದು. ಜೈನರು ತಮ್ಮ ಇಚ್ಛಾನುಸಾರ ಆ ಕಾಲವನ್ನು ಸದುಪಯೋಗಪಡಿಸಿಕೊಳ್ಳಲು ಧರ್ಮ ವಿಚಾರ ವಿನಿಮಯ ನಡೆಸುತ್ತಾರೆ. ಇಂದ್ರಿಯನಿಗ್ರಹಕಾರ್ಯ ಕೈಗೊಳ್ಳುವರು ಧಾರ್ಮಿಕ ಗ್ರಂಥ ಗಳನ್ನು ಪಠಿಸುವರು. ಧರ್ಮಕಾರ್ಯ ನಡೆಸುವರು. ಈ ಪುಣ್ಯದಿನಗಳು ಜೈನರ ಜ್ಞಾನಸಾಧನೆಯನ್ನು ಹೆಚ್ಚಿಸುವುವು.

ಅಷ್ಟ ಕರ್ಮಗಳು

ಕರ್ಮದ ಮೂಲಾಧಾರವು ಎಂಟು ವಿಧವು. ಅವುಗಳ ಉತ್ತರ ಭೇದಗಳು ೧೫೮. ತದುತ್ತರ ಭೇದಗಳು ಅಸಂಖ್ಯೆಯು.

೧. ಜ್ಞಾನಾವರಣೀಯ ಕರ್ಮ—ಜ್ಞಾನವನ್ನು ಆವರಿಸುವುದು.

೨. ದರ್ಶನಾವರಣೀಯಕರ್ಮ-ದರ್ಶನದ ಶಕ್ತಿಯನ್ನು ಅಡ್ಡಿಮಾಡುವುದು.

೩. ವೇದನೀಯಕರ್ಮ-ಸುಖ ಮತ್ತು ದುಃಖವನ್ನುಂಟುಮಾಡುವುದು.

೪. ಮೋಹನೀಯಕರ್ಮ ಆತ್ಮನ ಸ್ವಭಾವವನ್ನು ಮುಚ್ಚುವುದು.

೫. ಆಯುಷ್ಯಕರ್ಮ-ನಾಲ್ಕು ಗತಿಗಳಲ್ಲಿ ಬಂಧಿಸುವುದು.

೬. ನಾಮಕರ್ಮ-ಶರೀರದ ಆಕೃತಿ ರೂಪ ಮತ್ತು ರಂಗುಗಳನ್ನು ರಚಿಸುವುದು

೭. ಗೋತ್ರಕರ್ಮ-ಉಚ್ಛತ್ವ ಮತ್ತು ನೀಚತ್ವವನ್ನುಂಟುಮಾಡುವುದು.

೮. ಅಂತರಾಯಕರ್ಮ-ದಾನವನ್ನು ಲಾಭವನ್ನು ಭೋಗವನ್ನು ಮತು ಉಪಭೋಗವನ್ನು ತಡೆಯುವುದು.

★

ಜ್ಞಾನ ಮತ್ತು ಕ್ರಿಯೆಯಿಂದ ಮೋಕ್ಷವು

ಕೇವಲ ಜ್ಞಾನ ಅಥವ ಕೇವಲ ಕ್ರಿಯೆಯಿಂದ ಮುಕ್ತಿ ಸಿಗುವುದಿಲ್ಲ ವೆಂಬುದು ಜೈನ ಸಿದ್ಧಾಂತ ಕೇವಲ ಜ್ಞಾನ ಕುಂಟನಂತೆ. ಕೇವಲ ಕ್ರಿಯೆ ಕುರುಡನಂತೆ. ರಥವು ಎರಡು ಚಕ್ರಗಳ ಸಹಾಯದಿಂದಲೇ ಚಲಿಸುವುದು. ಮನುಷ್ಯನು ಕೈಗಳೆರಡರ ಸಹಾಯದಿಂದ ಸಮುದ್ರ ದಾಟುತ್ತಾನೆ. ಅದೇ ರೀತಿ ಆತ್ಮನೂ ಸಹ ಸಮ್ಯಕ್‌ಜ್ಞಾನ ಅಥವ ಸಂಯುಕ್ಕ್ರಿಯೆಗಳ ಮೂಲಕ ಮುಕ್ತಿಹೊಂದುವುದು. ಓರ್ವ ವ್ಯಕ್ತಿಯು ಬೊಂಬಾಯಿ ಮಾರ್ಗವನ್ನು ಅರಿತಿರುವನು. ಮಾರ್ಗವನ್ನರಿತಿರುವುದರಿಂದ ಮಾತ್ರ ಆ ಸ್ಥಳ ಸೇರಲಾರನು. ಅಲ್ಲಿಗೆ ಸೇರಲು ಆತ ನಡೆಯಲೇಬೇಕು. ನಿಧಾನವಾಗಿ ನಡೆಯುವುದರ ಮೂಲಕ ಆತ ತನ್ನ ಗುರಿ ಮುಟ್ಟುವನು. ಭೋಜನದ ಜ್ಞಾನದಿಂದ ಕ್ಷುದ್ಬಾದೆ ಅಡಗುವುದಿಲ್ಲ. ಹಸಿವನ್ನು ಹೋಗಲಾಡಿಸಲು ಭೋಜನದ ಕ್ರಿಯೆ ಮಾಡಲೇಬೇಕು. ಆಹಾರವನ್ನು ಸಿದ್ಧಗೊಳಸಿದ ಮೇಲೆ ಸಹ ಅದನ್ನು ಭುಜಿಸುವುದರಿಂದಲೇ ಹಸಿವನ್ನು ಅಡಗಿಸಲು ಸಾಧ್ಯ. ಅದೇ ರೀತಿ ಸಮ್ಯಕ್‌ಜ್ಞಾನಪೂರ್ವಕವಾಗಿ ಸರಿಯಾದ ಕ್ರಿಯೆ ಕೈಗೊಳ್ಳುವುದಾದರೆ ಮಾತ್ರ ಆ ವ್ಯಕ್ತಿಯು ಮುಕ್ತಿಪುರಿ (ಮೋಕ್ಷ) ಯನ್ನು ಪ್ರವೇಶಿಸಬಲ್ಲನು. ಏಕೆಂದರೆ ಅನಂತಕಾಲ ಆತ್ಮವು ಅಜ್ಞಾನ ಮತ್ತು ದುಷ್ಟವೃತ್ತಿಗಳಿಗೆ ಒಳಪಟ್ಟು ಈ

ಕರ್ಮಗಳ ಬಲೆಯೊಳಗೆ ಸಿಲುಕಿರುವದು. ಆ ಕರ್ಮವನ್ನು ನಾಶಪಡಿಸಲು ಸಮ್ಯಕ್ ಜ್ಞಾನ ಮತ್ತು ಸಮ್ಯಕ್ಕ್ರಿಯೆಯು ಅತ್ಯಾವಶ್ಯಕವು.

★

ಆಧುನಿಕ ವಿಜ್ಞಾನ

ಇಂದು ವಿಜ್ಞಾನವು ಬಹು ಪ್ರಗತಿಯನ್ನು ಹೊಂದುತ್ತಿದೆ. ಈ ರೀತಿಯಾದ ಅಭಿವೃದ್ಧಿಯನ್ನು ಕಂಡು ಜನರು ಆಶ್ಚರ್ಯಪಡುವುದಲ್ಲದೆ ಭಯ ಭ್ರಾಂತರಾಗಿರುತ್ತಾರೆ. ಈ ರೀತಿಯಾದ ವಿಜ್ಞಾನಾಭಿವೃದ್ಧಿಯಿಂದ ವಿಶ್ವ ಶಾಂತಿ ಮತ್ತು ಕ್ಷೇಮಕ್ಕೆ ಎಷ್ಟರಮಟ್ಟಿಗೆ ಸಹಾಯವಾಗಿದೆ ಎಂಬುದರ ಅರಿವು, ಶಾಂತಚಿತ್ತರಾಗಿ ವಿವೇಚಿಸಿರುವುದರಿಂದ ವ್ಯಕ್ತವಾಗುವುದು. ವಿಜ್ಞಾನದಿಂದ ವಿಶ್ವಶಾಂತಿ ಮತ್ತು ಕ್ಷೇಮಕ್ಕೆ ತಿಲಾಂಶವೂ ಸಹಾಯವಾಗಿಲ್ಲವೆಂದು ಬಹು ದುಃಖದಿಂದ ಹೇಳಬೇಕಾಗಿದೆ. ವಿಶ್ವವಸ್ತುಗಳ ನಾಶಕ್ಕಾಗಿ ಮಾರಣಾಸ್ತ್ರ ಮತ್ತು ಬಾಂಬುಗಳ ತಯಾರಿಕೆಯನ್ನು ಬಿಡುವಿಲ್ಲದೆ ಅಹೋರಾತ್ರಿಯೂ ವೈಜ್ಞಾನಿಕರು ಮಾಡುತ್ತಿರುವರು. ಈ ವಿಧವಾದ ವೈಜ್ಞಾನಿಕ ಪ್ರಗತಿಯಿಂದ ನಮಗೆ ಎಲ್ಲೆಲ್ಲಿಯೂ ಕಾಣುತ್ತಿರುವುದು ವಿನಾಶವೇ.

ನಮ್ಮ ಋಷಿಗಳು ಮತ್ತು ಮುನಿಗಳು ಈ ವಸ್ತುಗಳನ್ನು ಚೆನ್ನಾಗಿ ಅರಿತಿದ್ದರು ಆದರೆ ಅವುಗಳ ಪ್ರಯೋಜನ ಮತ್ತು ಉಪಯೋಗಿಸುವ ವಿಧಾನವನ್ನು ಯಾರಿಗೂ ತಿಳಿಸಲಿಲ್ಲ. ಅವರು ಜನತೆಗೆ ಇತ್ತ ಉಪದೇಶ ಆತ್ಮವಿಕಾಸಕ್ಕೆ ಸಂಬಂದಿಸಿದ್ದು. ಅದಕ್ಕೆ ಕಾರಣವೇನು? ಅಪಾಯಕರವಾದ ಅಸ್ತ್ರಗಳನ್ನು ಉಪಯೋಗಿಸುವುದರಿಂದ ವಿನಾಶ ಪ್ರಾಪ್ತವಾಗುವುದೆಂಬುದನ್ನು ಅವರು ಚೆನ್ನಾಗಿ ಅರಿತಿದ್ದರು. ಆತ್ಮಶಾಂತಿಯು ನಾಶವಾಗುವುದಲ್ಲದೆ, ನಿರಪರಾಧಿಗಳ ಪ್ರಾಣಾಪಹರಣ, ಅತ್ಯಧಿಕ ಪ್ರಮಾಣದ ದ್ರವ್ಯನಷ್ಟ ಮತ್ತು ಕಾಲವ್ಯರ್ಥವೆಂದು ಅವರು ಭಾವಿಸಿದ್ದರು.

ಒಂದು ಅಣುಬಾಂಬಿನ ಪ್ರಯೋಗದಿಂದಲೇ ಲಕ್ಷಾಂತರ ಜೀವರಾಶಿಗಳು ಪ್ರಾಣನೀಗಿದವು. ಆ ಬಾಂಬಿನ ತಯಾರಿಕೆ ಲಕ್ಷಾಂತರ ರೂಪಾಯಿಗಳ ವೆಚ್ಚವಾಯಿತು. ಒಂದು ರಾಷ್ಟ್ರವು ಅಣುಬಾಂಬುಗಳನ್ನು ತಯಾರಿಸಿ

ದರೆ ಇತರ ರಾಷ್ಟ್ರಗಳು ಎಚ್ಚೆತ್ತು ಅದಕ್ಕಿಂತಲೂ ಹೆಚ್ಚಿಗೆ ಅಪಾಯಕರ ವಾದ ವಸ್ತುಗಳನ್ನು ತಯಾರಿಸತೊಡಗುವುವು. ಈ ಅಪಾಯಕರವಾದ ಬಾಂಬುಗಳ ಮತ್ತು ವಸ್ತುಗಳ ತಯಾರಿಕೆಗೆ ವೆಚ್ಚವಾಗುವ ಕೋಟ್ಯಾಂತರ ರೂಪಾಯಿಗಳಿಂದ ಒಂದು ಕಾಸನ್ನು ಸಹ ಮತ್ತೆ ಪಡೆಯಲು ಸಾಧ್ಯವಿಲ್ಲ. ಅದೇ ಹಣವನ್ನು ನೊಂದು ನರಳುತ್ತಿರುವ ಮತ್ತು ಬಡವರ ಅಭ್ಯುದಯಕ್ಕೆ ವೆಚ್ಚಮಾಡಿದರೆ ಲಕ್ಷಾಂತರ ಮಂದಿ ಸುಖವಾಗಿರಬಹುದು. ಈ ಪ್ರಕಾರವಾದ ಅಂಶವನ್ನು ಅರಿಯುವುದು ಮತ್ತು ಜನತೆಗೆ ತಿಳಿಸುವುದು ಆವಶ್ಯಕ.

ಯಂತ್ರಗಳನ್ನು ಉಪಯೋಗಿಸುತ್ತಿರುವುದರ ಪರಿಣಾಮವಾಗಿ ಸಾವಿರಾರು ಜನ ಇಂದು ದುಃಖಕ್ಕೆ ಈಡಾಗಿದ್ದಾರೆ. ಜನರು ಕಡುಬಡವರಾಗಿರುವರಲ್ಲದೆ ಶಕ್ತಿಯನ್ನು ಮತ್ತು ಧೈರ್ಯವನ್ನು ಕಳೆದುಕೊಂಡಿದ್ದಾರೆ. ಅವಶ್ಯಕತೆಗಳು ಅಧಿಕವಾದಂತೆಲ್ಲಾ ದುಃಖ ಅಧಿಕ. ಬಯಸುವ ವಸ್ತುಗಳ ನಿರ್ಮಾಣಕ್ಕೆ ಹೊಸ ಯಂತ್ರಗಳು, ಹೊಸ ಯಂತ್ರಗಳ ರಚನೆಯ ಫಲವಾಗಿ ನವ ನಾಗರೀಕತೆ, ಈ ನವನಾಗರೀಕತೆಯಿಂದ ದುಃಖ ಮತ್ತು ಅಶಾಂತಿಯು. ಹಿಂದೆ ಇದೇ ಪುಣ್ಯಭೂಮಿಯಲ್ಲಿ ಸುಖಶಾಂತಿಯು ತಾಂಡವಾಡುತ್ತಿತ್ತು. ಪ್ರತಿಯೊಂದು ವಸ್ತುವೂ ಹೇರಳವಾಗಿತ್ತು. ಇಂದು ನಾವು ಕಾಣುತ್ತಿರುವುದೇನು? ಎಲ್ಲೆಲ್ಲಿಯೂ ಭಯ, ಅಶಾಂತಿ. ಆದರೂ ಸಹ ಜನರು ಪ್ರಕೃತ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ಬುದ್ಧಿವಂತರು ನಮ್ಮ ಶಾಸ್ತ್ರಗಳನ್ನು ಎಚ್ಚರಿಕೆಯಿಂದ ಓದಿ, ಅನೇಕ ವೈಜ್ಞಾನಿಕ ಪರಿಶೋಧನೆಗಳನ್ನು ತಿಳಿದು ಅವುಗಳ ಲಾಭವನ್ನು ಪಡೆದಿರುವರೆಂದು ಪ್ರಸಿದ್ಧವಷ್ಟೆ. ನಮ್ಮ ಪೂರ್ವಜರು ಎಷ್ಟು ದೊಡ್ಡ ಜ್ಞಾನಿಗಳಾಗಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸಾವಿರಾರು ವರ್ಷಗಳ ಹಿಂದೆ ಈ ರೀತಿ ಯಂತ್ರ ಸಾಮುಗ್ರಿಗಳು ಇರಲಿಲ್ಲ, ಅವುಗಳ ಆವಿಷ್ಕಾರಕ್ಕೆ ತಕ್ಕ ಸಾಧನೆಗಳೂ ಇರಲಿಲ್ಲ. ಆದರೂ ವಿಜ್ಞಾನದ ಮೂಲಕ ಇಂದಿನ ಕಾಲದಲ್ಲಿ ಕಂಡುಹಿಡಿಯಲ್ಪಟ್ಟ ವಸ್ತುಗಳು ನಮ್ಮ ಪೂರ್ವಜರಿಗೆ ತಿಳಿದೇ ಇತ್ತು.

ಆಕಾಶದಲ್ಲಿ ವಿಮಾನಗಳು ಹಾರಾಡುತ್ತಿದ್ದ ವಿಷಯವು ನಮ್ಮ ಶಾಸ್ತ್ರಗಳಲ್ಲಿ ಇದೆ. ಈ ವಿಷಯುವನ್ನು ನಮ್ಮ ಜನರಿಗೆ ತಿಳಿಸಿದಾಗ ಅವರದನ್ನು ನಂಬಲೂ ಇಲ್ಲ ಮತ್ತು ಅದಕ್ಕೆ ಮಹತ್ವವನ್ನು ಕೊಡಲೂ ಇಲ್ಲ. ಈಗ ವಿಮಾನಗಳು ಹಾರುವುದನ್ನು ಕಾಣುತ್ತಿರುವುದರಿಂದ ನಮ್ಮ ಪೂರ್ವಜರ ಲೇಖನಗಳಲ್ಲಿ ನಂಬಿಕೆ ಈಗ ಹುಟ್ಟುತ್ತಿದೆ. ಭಾರತದ ಪ್ರಸಿದ್ಧ ವಿಜ್ಞಾನಿ ಜಗದೀಶಚಂದ್ರ ಬೋಸರು, ತಮ್ಮ ವೈಜ್ಞಾನಿಕ ಪರಿಶೋಧನೆಗಳಿಂದ ಮರ, ಗಿಡ, ಮತ್ತು ಬಳ್ಳಿ ಇತ್ಯಾದಿಗಳಿಗೂ ಜೀವವಿದೆ, ಅವೂ ಸಹ ಸುಖ ದುಃಖಗಳನ್ನು ವ್ಯಕ್ತಪಡಿಸುವುವು ಎಂದು ಹೇಳಿದಾಗ, ಸಸ್ಯಪ್ರಪಂಚ ವಸ್ತುಗಳಲ್ಲೂ ಜೀವವಿದೆಯೆಂಬುದನ್ನು ನಂಬತೊಡಗಿದರು. ಜೈನ ಶಾಸ್ತ್ರದ ಹಳೆಯ ಮತ್ತು ಪುರಾತನ ಹಸ್ತಲಿಖಿತ ಗ್ರಂಥಗಳಲ್ಲಿ ಈ ಅಂಶಗಳನ್ನೆಲ್ಲಾ ವಿವರವಾಗಿ ವರ್ಣಿಸಲಾಗಿದೆ.

ಜಗದೀಶಚಂದ್ರ ಬೋಸರು ಅನೇಕ ವರ್ಷಗಳ ಹಿಂದೆ ಜರ್ಮನಿಯಲ್ಲಿ ಭಾಷಣಮಾಡಿದಾಗ ಸಸ್ಯಪ್ರಪಂಚದಲ್ಲಿರುವ ವಸ್ತುಗಳಿಗೆ ಜೀವ ಇದೆ ಎಂಬುದನ್ನು ಸಸ್ಯಪ್ರಮಾಣಗಳಿಂದ ಸಿದ್ಧಪಡಿಸಿ ನಾನು ತೋರಿಸಿರುವುದು ಇದು ಭಾರತೀಯರಿಗೇನೋ ಹೊಸದಲ್ಲ. ನಾನು ಸಿದ್ಧಪಡಿಸಿದನ್ನು ಹಿಂದೆಯೇ ಜೈನ ಆಚಾರ್ಯರು ಉಪದೇಶಿಸಿರುವರು. ಆಚಾರಾಂಗಸೂತ್ರ ಮತ್ತು ಜೀವಾಭಿಗಮ ಶಾಸ್ತ್ರಗಳೇ ಇದಕ್ಕೆ ನಿದರ್ಶನ ಎಂದು ಹೇಳಿದರು

ಜಲಕಾಯಿಕಜೀವ, ವನಸ್ಪತಿ ಕಾಯಿಕಜೀವ ಶಬ್ದಶಕ್ತಿ, ರೇಡಿಯೋ, ಅಣುಬಾಂಬು, ಭಾವಚಿತ್ರಗ್ರಹಣ ಇವುಗಳನ್ನು ನಮ್ಮ ಪೂರ್ವಜರು ಶಾಸ್ತ್ರಗಳಲ್ಲಿ ವಿವರಿಸಿದ್ದಾರೆ. ಈಗ ವೈಜ್ಞಾನಿಕರು ವಿವಿಧ ಸಲಕರಣೆಗಳನ್ನು ಇಟ್ಟುಕೊಂಡು ಅವುಗಳ ಸಹಾಯದಿಂದ ಈ ಅಂಶಗಳನ್ನು ವಿವರಿಸಿರುವರು. ಆಧುನಿಕ ವೈಜ್ಞಾನಿಕ ಜ್ಞಾನ ಪರಿಪೂರ್ಣವಾಗಿಲ್ಲ. ಆದುದರಿಂದಲೇ ದಿನಪ್ರತಿ ಹೊಸಹೊಸ ಪರಿಶೋಧನೆಗಳು ನಡೆಯುತ್ತಿರುವುದು. ವೈಜ್ಞಾನಿಕರು ಆಗಾಗ ತಮ್ಮ ಸಿದ್ಧಾಂತಗಳನ್ನು ಬದಲಾಯಿಸುವರು. ಹಲವು ವರ್ಷಗಳ ಹಿಂದೆ ಅಮೇರಿಕದ ಬಳಿ ಸಾವಿರಾರು ಮೈಲಿ ವಿಸ್ತಾರದ ದ್ವೀಪವೊಂದು ಕಂಡಿತು. ಆ ಕಾಲದಿಂದ ಆ ವಿಚಾರದಲ್ಲಿ ಪರಿಶೋಧನೆಗಳಾಗುತ್ತಿವೆ. ಆದರೆ ಇದುವರೆಗೂ ನಿರ್ದಿಷ್ಟ ತೀರ್ಮಾನಕ್ಕೆ ಬಂದಿಲ್ಲ. ಅವರು ಕೇವಲ ಕಲ್ಪನೆಯ

ಆಧಾರದ ಮೇಲೆ ಮುಂದುವರಿಯುತ್ತಿದ್ದಾರೆ. ಅಂತಹ ವಿಜ್ಞಾನಿಗಳ ತೀರ್ಮಾನದ ಆಧಾರದ ಮೇಲೆ ನಾವು ಮುಂದುವರಿದರೆ, ನಮ್ಮ ತಿಳಿಗೇಡಿತನವು ಎಷ್ಟರ ಮಟ್ಟಿಗೆ ಇರುವುದು ಎಂಬುದು ಚೆನ್ನಾಗಿ ಗೋಚರವಾಗುವುದು.

ಒಂದು ತೊಟ್ಟು ನೀರಿನಲ್ಲಿ ೩೬,೪೫೦ ಜೀವರಾಶಿಗಳಿರುವುದಾಗಿ ಕ್ಯಾಪ್ಟನ್ ಸ್ಕೋರ್ಸ್‌ಬೀ ದೂರದರ್ಶನ ಯಂತ್ರದ ಮೂಲಕ ತೋರಿಸಿದ. ಒಂದು ತೊಟ್ಟು ನೀರಿನಲ್ಲಿ ಜೀವರಾಶಿಗಳ ಜೊತೆಗೆ ಚಲಿಸದ ಸಹಸ್ರಾರು ವಸ್ತುಗಳೂ ಇವೆಯೆಂದು ನಮ್ಮ ಜ್ಞಾನಿಗಳು ಅನೇಕ ವರ್ಷಗಳ ಹಿಂದೆಯೇ ತಿಳಿಸಿದ್ದಾರೆ

ಒಂದು ಕಡಲೆ ಗಾತ್ರದ ಸ್ಥಳದಲ್ಲಿ ಸಹಸ್ರಾರು ಕ್ಷಯರೋಗದ ಜಂತುಗಳಿವೆಯೆಂದು ಆಧುನಿಕ ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸೂಜಿಯ ಮೊನೆಯ ಸ್ಥಳದಲ್ಲೇ ಲಕ್ಷಾಂತರ ಜೀವರಾಶಿ ಇರುವುದಾಗಿ ನಮ್ಮ ಜ್ಞಾನಿಗಳು ಸಾರಿದ್ದಾರೆ. ವೈಜ್ಞಾನಿಕರು ತಮಗೆ ದೊರೆಯುವ ಸಲಕರಣೆಗಳನ್ನು ಉಪಯೋಗಿಸಿಕೊಂಡು ಪರಿಶೋಧನೆ ನಡೆಸುತ್ತಿದ್ದಾರೆ. ಹೊಸ ಸಲಕರಣೆಗಳು ಮತ್ತು ಸಾಧನೆಗಳು ಸಿಕ್ಕಿದರೆ ಅವರು ಹೊಸ ಅಂಶಗಳನ್ನು ಕಂಡುಹಿಡಿಯುವರು. ಅವರು ತಮ್ಮ ಹಳೆಯ ಭಾವನೆಗಳನ್ನು ತ್ಯಜಿಸುವರು. ಹೊಸವಿಷಯ ಅರಿತ ಕೂಡಲೆ ತಮ್ಮ ಭಾವನೆಯನ್ನು ಬದಲಾಯಿಸಿಕೊಳ್ಳುವರು. ಅದು ಒಂದು ಅಂಶದಲ್ಲಿ ಸರಿಯಾದ ನೀತಿ ಅಪೂರ್ಣ ಜ್ಞಾನಿಗಳು ಪೂರ್ಣವಾದ ವಿಷಯವನ್ನು ಹೇಗೆ ತಿಳಿಯಬಲ್ಲರು. ಹೀಗಿರಲು ಪೂರ್ಣವಸ್ತುವನ್ನು ಪೂರ್ಣ ರೂಪದಲ್ಲಿ ಸ್ವೀಕರಿಸಲು ಮತ್ತು ನಿಜವಾದ ಜ್ಞಾನವನ್ನು ತೋರುವ ಪರಮಾತ್ಮನ ಉಪಾಸನೆಮಾಡಲು ಮನುಷ್ಯನಿಗೆ ಏಕೆ ಅನಿಚ್ಛೆಯು ಎಂಬುದು ಅರ್ಥವಾಗುವುದಿಲ್ಲ. ಮನುಷ್ಯನ ಸಂಸಾರ ಭ್ರಮಣೆ ಇನ್ನೂ ಬಾಕಿ ಇರುವುದೇ ಇದಕ್ಕೆ ಕಾರಣವೆಂದು ಹೇಳಬಹುದು.

ಜಗತ್ತಿನವಿಚಾರದಲ್ಲಿ ಇದುವರೆಗೆ ನಡೆದಿರುವ ಶೋಧನೆಗಳು ಸಮುದ್ರದ ಒಂದು ಬಿಂದುವಿಗೆ ಸಮಾನ, ಭಾರತ ವರ್ಷದ ಷಡ್ಖಂಡಗಳ ಶೋಧನೆ ಪೂರ್ಣವಾಗಿ ಆಗಿಲ್ಲ. ಇದಕ್ಕಿಂತ ವಿಶಾಲವಾದ ದೊಡ್ಡದಾದ ಅಸಂಖ್ಯಾತ ದ್ವೀಪಗಳು, ಸಾವಿರಾರು ದೇಶಗಳು ಮತ್ತು ದೊಡ್ಡ ದೊಡ್ಡ ಖಂಡಗಳು

ಈ ಜಗತ್ತಿನಲ್ಲಿ ಇವೆ. ಅಪೂರ್ಣ ಜ್ಞಾನದಿಂದ ಕೂಡಿದ ಜನರು ಇವನ್ನೆಲ್ಲಾ ಕಂಡುಹಿಡಿಯುವುದು ಹೇಗೆ?

ನಮ್ಮ ಮಹಾಪುರುಷರು ಪೂರ್ಣಜ್ಞಾನಿಗಳಾಗಿದ್ದರು. ಆದುದರಿಂದ ಅವರಿಗೆ ಶೋಧನೆ ಮತ್ತು ಪರಿಶೋಧನೆಗಳು ಅನಾವಶ್ಯಕವಾಗಿತ್ತು. ಅವರು ಮಹಾ ಜ್ಞಾನಿಗಳಾಗಿದ್ದು ತಮ್ಮ ಜ್ಞಾನದಿಂದ ವಿಶ್ವದ ಸಕಲ ಚರಾಚರ ವಸ್ತುಗಳಿಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನೂ ತಿಳಿದು ಹೇಳಿಹೋಗಿರುವರು.

ಅಪೂರ್ಣ ಜ್ಞಾನಿಗಳಾದ ವೈಜ್ಞಾನಿಕರ ಭಾವನೆಗಳು ಆಗಾಗ ಬದಲಾವಣೆ ಹೊಂದುವುದರಿಂದ ಅವರಲ್ಲಿ ವಿಶ್ವಾಸವಿಡುವುದರ ಬದಲು, ಪೂರ್ಣ ಜ್ಞಾನವನ್ನು ಗಳಿಸಿರುವ ಜಿನೇಶ್ವರ ದೇವನಲ್ಲಿ ಪೂರ್ಣ ನಂಬಿಕೆಯನ್ನು ಇಡಬೇಕು.

ಶೋಧನೆ ನಡೆಸುವ ಮನುಷ್ಯನಿಗೆ ಭೂಮಿ ಗುಂಡಾಗಿದೆ, ಎಂದು ನಿರ್ಧರವಾಗಿ ಹೇಗೆ ಹೇಳಲು ಸಾಧ್ಯ? ಯಾರಿಗೆ ಪೂರ್ಣಜ್ಞಾನ ಇಲ್ಲವೋ ಅಂತಹವನು ಪೂರ್ಣತೆಯ ಮಾತುಗಳನ್ನು ಆಡಿದರೆ ಅವನನ್ನು ಹುಚ್ಚರ ಶ್ರೇಣಿಗೆ ಸೇರಿದವನೆಂದು ಭಾವಿಸಬೇಕು. ಅಪೂರ್ಣ ಜ್ಞಾನದ ಮನುಷ್ಯನಲ್ಲಿ ವಿಶ್ವಾಸ ವಿಡುವುದಾದರೂ ಹೇಗೆ? ಇಂತಹ ವ್ಯಕ್ತಿಗಳ ಭಾವನೆ ಯಾವಾಗ ಪರಿವರ್ತನೆ ಹೊಂದುವುವೆಂಬುದನ್ನು ಅರಿಯಲು ಆಗುವುದಿಲ್ಲ.

ಸೂರ್ಯ, ಚಂದ್ರರು ಸ್ಥಿರ, ಭೂಮಿ ಸುತ್ತುತ್ತದೆ ಎಂಬ ವಾದವೂ ಸಹ ಪ್ರಮಾಣವಿಹೀನವಾದುದು. ಧ್ರುವ ನಕ್ಷತ್ರವು ಉತ್ತರ ದಿಕ್ಕಿನಲ್ಲಿ ಸ್ಥಿರವಾಗಿ ಏಕೆ ಇರುತ್ತದೆ ಎಂದು ಅವರನ್ನು ಪ್ರಶ್ನಿಸಿ ಭೂಮಿ ಸುತ್ತುತ್ತಿದ್ದರೆ ಧ್ರುವ ನಕ್ಷತ್ರ ಸಹ ಸುತ್ತುವುದು ನಮಗೆ ಕಾಣಬೇಕು. ಆದರೆ ಧ್ರುವ ನಕ್ಷತ್ರವು ಸದಾ ಉತ್ತರ ದಿಕ್ಕಿನಲ್ಲೇ ಕಾಣುವುದು. ಆದುದರಿಂದ ಭೂಮಿ ಸುತ್ತುತ್ತದೆ, ಸೂರ್ಯ, ಚಂದ್ರಸ್ಥಿರ ಇತ್ಯಾದಿ ವಾದಗಳು ಕಪೋಲಕಲ್ಪಿತವಾದವು.

ಧ್ರುವ ನಕ್ಷತ್ರವು ನಮ್ಮ ತಲೆಗೆ ನೇರವಾಗಿ ಸ್ಥಿರವಾಗಿರುವುದರಿಂದ ಭೂಮಿ ಚಲಿಸುವಾಗ ಅದು ಚಲಿಸದೇ ಇದ್ದಲ್ಲಿಯೇ ಇರುವಂತೆ ತೋರುವುದೆಂದು ಕೆಲವರು ಹೇಳಬಹುದು. ಆದರೆ ಈ ವಾದವನ್ನು ಸಹ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, ಧ್ರುವನಕ್ಷತ್ರದ ಬಳಿ ಸಪ್ತಋಷಿಗಳ ನಕ್ಷತ್ರಗಳಿವೆ. ಅವು ಚಲಿಸುವಂತೆ ಕಾಣುವುದು. ಆದರೆ ಅವೂ ಸಹ ಸ್ಥಿರವಾಗಿರಬೇಕು.

ಹಾಗಿಲ್ಲದೇ ಆ ಸಪ್ತಋಷಿಗಳ ನಕ್ಷತ್ರಗಳೂ ಚಲಿಸುವ ಸ್ವಭಾವವುಳ್ಳದಾದ್ದರಿಂದ ಚಲಿಸುತ್ತವೆ, ಧೃವ ನಕ್ಷತ್ರವು ಸ್ಥಿರಸ್ವಭಾವವುಳ್ಳದಾದ್ದರಿಂದ ಸ್ಥಿರವಾಗಿದೆ. ಪೃಥ್ವಿಯೂ ಚಲಿಸಿದರೆ, ಇತರ ನಕ್ಷತ್ರಗಳಂತೆ ಧೃವ ನಕ್ಷತ್ರವೂ ಸಹ ಚಲಿಸುವಂತೆ ತೋರಬೇಕು. ಆದರೆ ವಾಸ್ತವವಾಗಿ ಧ್ರುವನಕ್ಷತ್ರ ಅಚಲವಾದುದು. ಅದೇ ರೀತಿ ಪೃಥ್ವಿ ಸಹ ಸ್ಥಿರವಾದುದು ಎಂದು ಅನಾದಿಕಾಲದ ಸಿದ್ಧಾಂತ. ಸೂರ್ಯ, ಚಂದ್ರ ಗ್ರಹಗಳು ಮತ್ತು ಇತರ ನಕ್ಷತ್ರಗಳು ಚಲಿಸುವುವು ಎಂಬುದು ಅನುಭವ ಸಿದ್ಧಾಂತವು.

ಭೂಮಿ ಚಲಿಸುತ್ತದೆ ಎಂದು ಭಾವಿಸುವವರಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಅವರಲ್ಲಿ ಕೆಲವರು, ಪೃಥ್ವಿ ಸ್ಥಿರವಾದುದೆಂಬ ಅಭಿಪ್ರಾಯ ಹೊಂದಿದ್ದಾರೆ. ಆದುದರಿಂದ ಕಲ್ಪನೆಯಿಂದ ಕೂಡಿರುವವರಲ್ಲಿ ಪೂರ್ಣ ವಿಶ್ವಾಸವಿಡಲು ಸಾಧ್ಯವಿಲ್ಲ. ಪೂರ್ಣನಂಬಿಕೆಯನ್ನು ಜ್ಞಾನಿಯ ಸಿದ್ಧಾಂತದಲ್ಲಿಯೇ ಮಾತ್ರ ಇಡಲಾಗುವುದು.

ಸಿದ್ಧಾಂತದ ಪ್ರರೂಪಣೆಯು ಸರ್ವಜ್ಞನಾದ ಪರಮಾತ್ಮನಿಂದ ಆದುದು. ಆದುದರಿಂದ ಅದು ಶಾಶ್ವತ ಮತ್ತು ಅವಿಚಲವಾದುದು. ಈ ಸಿದ್ಧಾಂತವು ತ್ರಿಕಾಲಕ್ಕೂ ಅನ್ವಯಿಸುತ್ತದೆ. ಯಾವ ಕಾಲದಲ್ಲಿಯೂ ಇದು ಪರಿವರ್ತನೆಯಾಗುವುದಿಲ್ಲ. ಅಸತ್ಯವೇ ಪರಿವರ್ತನೆ ಹೊಂದುತ್ತದೆ. ಸತ್ಯವೆಂದಿಗೂ ಪರಿವರ್ತನೆ ಹೊಂದುವುದಿಲ್ಲ. ಸತ್ಯ ಪರಿವರ್ತನೆ ಆಗುವುದಾದರೆ ಅದು ಅಸತ್ಯವಾಗಿರಬೇಕೇ ವಿನಹ ಸತ್ಯವೆಂದಿಗೂ ಆಗಿರಲಾರದು. ಎರಡಕ್ಕೆ ಎರಡು ಸೇರಿದರೆ ನಾಲ್ಕು ಹೇಗೆ ಆಗುವುದೋ ಮತ್ತು ಹೇಗೆ ಅನಾದಿಕಾಲದಿಂದ ನಿಜವೋ ಅದೇ ರೀತಿ ಸತ್ಯವು ಪರಿವರ್ತನೆ ಹೊಂದದಿರುವುದು. ಸಾವಿರಾರು ವರ್ಷಗಳ ಹಿಂದೆ ಸಹ ಎರಡಕ್ಕೆ ಎರಡು ಸೇರಿದರೆ ನಾಲ್ಕು ಎಂದು ಭಾವಿಸಲಾಗಿತ್ತು. ವರ್ತಮಾನ, ಭೂತ ಮತ್ತು ಭವಿಷ್ಯತ್ಕಾಲಗಳಲ್ಲಿಯೂ ಎರಡಕ್ಕೆ ಎರಡು ಸೇರಿದರೆ ನಾಲ್ಕೇ ಆಗಿರುವುದು ಏಕೆಂದರೆ ಅದು ಸತ್ಯ, ಎರಡಕ್ಕೆ ಎರಡು ಸೇರಿದರೆ ಮೂರು ಅಥವಾ ಐದು ಎಂದು ಹೇಳುವುದಾದರೆ ಅದು ಅಸತ್ಯವಾಗುವುದು. ಈ ರೀತಿ ಸರ್ವಜ್ಞರ ಮೂಲಕ ನಿರೂಪಿಸಲ್ಪಟ್ಟ ಸಿದ್ಧಾಂತವು ತ್ರಿಕಾಲದಲ್ಲಿಯೂ ಏಕ ರೀತಿಯಾಗಿಯೇ ಇರುವುದು.

ಜೈನ ಧರ್ಮ ಅನಾದಿಕಾಲದ್ದು

ಜೈನ ಧರ್ಮವು ಬೌದ್ಧ ಧರ್ಮದ ಶಾಖೆಯಲ್ಲವೆಂಬುದು ವಿಶ್ವವಿಖ್ಯಾತವಾಗಿದೆ. ತಥಾಗತ ಬುದ್ಧನ ಚಿಕ್ಕಪ್ಪನಾದ ಬಪ್ಪನು ಭಗವಾನ್ ಪಾರ್ಶ್ವನಾಥರ ಪರಂಪರೆಯಲ್ಲಿ ಸೇರಿದವನು. ಗೌತಮ ಬುದ್ಧನು ಬಾಲ್ಯದಲ್ಲಿ ಅನೇಕ ಸಲ ತನ್ನ ಚಿಕ್ಕಪ್ಪನೊಡನೆ ಭಗವಾನ್ ಪಾರ್ಶ್ವನಾಥರ ಶಿಷ್ಯನ ಬಳಿಗೆ ಹೋಗುತ್ತಿದ್ದನು. ಇಪ್ಪತ್ತುಮೂರನೆಯ ತೀರ್ಥಂಕರರಾದ ಪಾರ್ಶ್ವನಾಥ ಸ್ವಾಮಿಯೂ ಉಪದೇಶಿಸಿದ ಜೈನಮತದ ಪ್ರತಿಬಿಂಬವನ್ನು ನಾವು ಬುದ್ಧನ ಉಪದೇಶದಲ್ಲಿ ಕಾಣಬಹುದು.

ಭಗವಾನ್ ಮಹಾವೀರನು ಜೈನ ಧರ್ಮವನ್ನು ಕಂಡುಹಿಡಿದನೆಂದು ಕೆಲವರ ಅಭಿಮತ. ಇದು ನಿಜವಲ್ಲ. ಈ ಧರ್ಮಸ್ಥಾಪನಾಚಾರ್ಯ ಮಹಾವೀರನಲ್ಲ, ಆತನ ಹಿಂದೆ ತೀರ್ಥಂಕರು ಇದ್ದರು–ಎಂಬ ಅಂಶವು ಇತಿಹಾಸದ ಮೂಲಕವೂ ಮತ್ತು ಜೈನ ಸಿದ್ಧಾಂತದ ಮೂಲಕವೂ ವ್ಯಕ್ತಪಡುವುದು. ಮಹಾವೀರನ ಪೂರ್ವಕಾಲದಲ್ಲಿ ಜೈನ ಧರ್ಮವಿತ್ತು. ಇಪ್ಪತ್ತನಾಲ್ಕು ತೀರ್ಥಂಕರರ ಪೂರ್ವಕಾಲದಲ್ಲಿಯೂ ಸಹ ಜೈನ ಧರ್ಮವಿತ್ತು.

ತೀರ್ಥಂಕರರು ಹೊಸದಾಗಿ ಏನನ್ನೂ ಮಾಡುವುದಿಲ್ಲವೆಂದು ಜೈನ ಸಿದ್ಧಾಂತ ತಿಳಿಸುತ್ತದೆ. ಆದರೆ ಅವರು ಸಂಪೂರ್ಣ ಜ್ಞಾನಿಗಳಾಗಿ ಧರ್ಮವನ್ನು ಪ್ರಕಾಶಕ್ಕೆ ತರುತ್ತಾರೆ, ಅದರ ಪ್ರಚಾರಣೆಯನ್ನು ಮಾಡುತ್ತಾರೆ. ಧರ್ಮವನ್ನು ನಿರೂಪಿಸುತ್ತಾರೆ. ಆದರೆ ಅದು ಅವರ ಕಾಲದಲ್ಲಿ ಆರಂಭವಾಯಿತು ಎಂಬುದು ಶಾಸ್ತ್ರಗಳಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರ ಪ್ರಶಂಸೆಯಿದೆ. ಇದರಿಂದ ಜೈನ ಧರ್ಮವು ವೇದಕ್ಕಿಂತ ಪುರಾತನವಾದುದು ಎಂದು ಸ್ಥಿರಪಡುವುದು.

ಜೈನ ಧರ್ಮವು ಹಿಂದೂ ಧರ್ಮದ ಶಾಖೆಯೂ ಅಲ್ಲ. ಇದರ ಸತ್ಯತೆಯು ಆಧುನಿಕ ಕಾಲದ ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವನ್ಮಣಿಗಳು ವ್ಯಕ್ತಪಡಿಸಿರುವ ಅಭಿಪ್ರಾಯಗನಿಂದ ವೇದ್ಯವಾಗುವುದು. ಅಲ್ಲದೆ ಈ ಪುಸ್ತಕದ ಅಂತ್ಯದಲ್ಲಿ ಸೂಚಿಸಲಾಗಿರುವ ಅನೇಕ ಮಹನೀಯರ ಅಭಿಪ್ರಾಯಗಳಿಂದ ಸಹ ಇದು ವ್ಯಕ್ತಪಡುವುದು.

★ ಧ್ರುವ.

ಗೃಹಸ್ಥರ ವ್ರತಗಳು

ಜೈನ ಗೃಹಸ್ಥರು ಪಾಲಿಸಬೇಕಾದ ವ್ರತಗಳು ಹನ್ನೆರಡು. ಮೊದಲನೆಯ ಐದುಅಣುವ್ರತ. ಆರರಿಂದ ಎಂಟರ ವರೆಗಿನ ಮೂರು ಗುಣವ್ರತ ಮತ್ತು ಒಂಭತ್ತರಿಂದ ಹನ್ನೆರಡರ ವರೆಗಿನ ಕಡೆಯ ನಾಲ್ಕು ಶಿಕ್ಷಾವ್ರತ ಎಂದು ಕರೆಯಲ್ಪಡುವುವು.

ಮೊದಲನೆಯ ವ್ರತ: ಹಿಂಸೆ ಮಾಡದಿರುವುದು. ಗೃಹಸ್ಥರು ಸ್ಥಾವರ ಜೀವಿಗಳ (ಸಸಿ, ಮರ, ಗಿಡ, ಬಳ್ಳಿ, ಇತ್ಯಾದಿ) ಹಿಂಸೆಯನ್ನು ಪೂರ್ಣವ ಗಿ ಮಾಡದಿರಲು ಸಾಧ್ಯವಿಲ್ಲ. ಪೂರ್ಣದಯೆಯನ್ನೂ ತೋರಲಸಾಧ್ಯ. ಆದರೆ ಅವರು ಚಲಿಸುವ ಪ್ರಾಣಿಗಳಿಗೆ ನೋವಾಗದಂತೆ ವರ್ತಿಸಬೇಕು. ಯಾವ ಜೀವಕ್ಕೂ ನೋವುಂಟಾಗದಂತೆ ಎಷ್ಟರಮಟ್ಟಿಗೆ ಕೆಲಸಮಾಡಬಹುದೆಂಬ ಅಂಶವನ್ನು ಮೊದಲೇ ಆಲೋಚಿರಬೇಕು. ಸಾಧ್ಯವಾದ ಮಟ್ಟಿಗೆ ಸ್ಥಾವರ ಜೀವಗಳಿಗೆ ಹಿಂಸೆಯಾಗದಂತೆ ನೋಡಿಕೊಳ್ಳಬೇಕು.

ಎರಡನೇ ವ್ರತ: ಅಸತ್ಯ ನುಡಿಯದಿರುವುದು. ಗೃಹಸ್ಥನಿಗೆ ಅಸತ್ಯ ನುಡಿಯುವುದನ್ನು ಸರ್ವಥಾ ತ್ಯಜಿಸಲು ಸಾಧ್ಯವಾಗದ ಪಕ್ಷದಲ್ಲಿ ಇತರರಿಗೆ ದೊಡ್ಡ ಆಘಾತಕರವಾದ ಮಿಥ್ಯಾಭಾಷಣವನ್ನವರು ಅವಶ್ಯವಾಗಿ ತ್ಯಜಿಸಬೇಕು. ಸುಳ್ಳು ಸಾಕ್ಷಿ, ಸುಳ್ಳು ಪತ್ರ, ಸುಳ್ಳು ಸಲಹೆ, ವಿಶ್ವಾಸಘಾತಕ ಅಥವಾ ಇನ್ನೂ ಈ ವಿಧವಾದ ಅನರ್ಥಕಾರಿ ವಚನಗಳನ್ನು ಸರ್ವಥಾ ತ್ಯಜಿಸಬೇಕಾದುದು ಅತ್ಯಗತ್ಯ.

ಮೂರನೇ ವ್ರತ: ಕದಿಯದಿರುವುದು. ಗೃಹಸ್ಥರು ಕದಿಯುವುದನ್ನು ಸಂಪೂರ್ಣವಾಗಿ ತ್ಯಜಿಸಬೇಕು. ವಿಶೇಷ ಕಾರಣದಿಂದ ಕದಿಯುವುದನ್ನು ಸಂಪೂರ್ಣವಾಗಿ ತ್ಯಾಗಮಾಡಲಸಾಧ್ಯವಾದರೆ, ಕಳ್ಳ ವ್ಯಾಪಾರ, ಜೇಬು ಕತ್ತರಿಸುವುದು, ಬೀಗ ಒಡೆಯುವುದು, ಗೋಡೆಯಲ್ಲಿ ಕನ್ನ ಕೊರೆದು ಒಳಗೆ ಹೋಗುವದು, ಕಳವು ಮಾಲನ್ನು ಸ್ವೀಗರಿಸುವುದು, ಲೂಟಿ ಮಾಡುವುದು, ಅಧಿಕ ಪ್ರಮಾಣದಲ್ಲಿ ವಸ್ತುಗಳನ್ನು ಸ್ವೀಕರಿಸಿ ಕಡಿಮೆ ಪ್ರಮಾಣದಲ್ಲಿ ಅವುಗಳನ್ನು ವಾಪಸು ಕೊಡುವುದು, ಕಳ್ಳತೂಕದ ಬೊಟ್ಟುಗಳನ್ನು ಮತ್ತು ಅಳತೆಯನ್ನು ಉಪಯೋಗಿಸುವುದು ಮತ್ತು ಹಲಬೆರಿಕೆ ಸಾಮಗ್ರಿಗಳ ವ್ಯಾಪಾರ ಮಾಡುವುದು, ಇತ್ಯಾದಿಗಳನ್ನು ಪೂರ್ಣವಾಗಿ ತ್ಯಜಿಸಬೇಕು.

ನಾಲ್ಕನೆಯ ವ್ರತ: ಸ್ಥೂಲ ಮೈಥುನವಿರಮಣ. ಗೃಹಸ್ಥರು ಸದಾ ಬ್ರಹ್ಮಚರ್ಯವನ್ನು ಪಾಲಿಸಲು ಸಾಧ್ಯವಿಲ್ಲದಿದ್ದರೂ ಇತರ ಸ್ತ್ರೀಯರನ್ನು ಮಾತೆಯರು, ಸೋದರಿಯರು ಮತು ಮಕ್ಕಳಂತೆ (ಆಯಾ ವಯಸ್ಸಿಗೆ ಅನುಗುಣವಾಗಿ) ಭಾವಿಸಬೇಕು. ತನ್ನ ಪತ್ನಿಯ ವಿಚಾರದಲ್ಲಿ ಸಹ ಮರ್ಯಾದೆಯಿಂದ ಸಂಯೋಗನಡೆಸಬೇಕು. ತಿಂಗಳಲ್ಲಿ ಕೆಲವು ದಿನ ಬ್ರಹ್ಮಚರ್ಯವನ್ನು ಅತ್ಯಾವಶ್ಯಕವಾಗಿ ಪಾಲಿಸಲೇಬೇಕು.

ಪಂಚಮ ವ್ರತ: ಆಸ್ತಿಪಾಸ್ತಿಗಳ ಸಂಗ್ರಹಣ. ಆಶೆಯನ್ನು ಮಿತಗೊಳಿಸಲು ತನ್ನ ವಸ್ತುಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಧನ, ಧಾನ್ಯ, ಮನೆ ಇತ್ಯಾದಿಗಳನ್ನು ಆವಶ್ಯಕತೆಗಿಂತ ಅಧಿಕವಾಗಿ ಸಂಗ್ರಹಿಸಿಕೊಳ್ಳಬಾರದು. ಅವನ್ನು ಮಿತಿಯಲ್ಲಿರಿಸಿಕೊಳ್ಳಬೇಕು. ವ್ಯಾಪಾರದ ಮೂಲಕ ಧನ ಅಧಿಕವಾಗಿ ಶೇಖರವಾದರೆ ಅದನ್ನು ಧಾರ್ಮಿಕ ಸಂಸ್ಥೆಗಳಿಗೆ ಅಥವಾ ದೀನ ದುಃಖಿಗಳ ಅಭ್ಯುದಯಕ್ಕೆ ವೆಚ್ಚಮಾಡಬೇಕು.

ಆರನೆಯ ವ್ರತ: ದಿಕ್ಪರಿಮಿತಿ. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ನೈರುತ್ಯ, ಆಗ್ನೇಯ ಮತ್ತು ವಾಯುವ್ಯ, ಊರ್ಧ್ವ ಮತ್ತು ಅಧೋ ದಿಕ್ಕುಗಳಲ್ಲಿ ಗಮನಾಗಮನೆಗಳ ಮಾರ್ಗ ಪರಿಮಾಣಗಳನ್ನು ನಿಯಮಿಸಬೇಕು. ಇಷ್ಟು ದೂರದವರಿವಿಗೇನೇ ನನ್ನ ಗಮನಾಗಮನಗಳು ಮತ್ತು ವ್ಯಾಪಾರಗಳು. ಅವನ್ನತಿಕ್ರಮಿಸು ವುದಿಲ್ಲ. ಇತ್ಯಾದಿ.

ಏಳನೆಯ ವ್ರತ: ಭೋಗ ಮತ್ತು ಉಪಭೋಗ ವಸ್ತುಗಳ ಮಿತಿ. ಆಹಾರ, ಬಟ್ಟೆ, ಒಡವೆ, ಮರಮುಟ್ಟು, ವಾಹನ ಇತ್ಯಾದಿ ಉಪಯುಕ್ತ ಭೋಗ ವಸ್ತುಗಳನ್ನು ಮಿತಿಯಲ್ಲಿರಿಸಿಕೊಳ್ಳಬೇಕು ಈ ದಿನವು ಇಷ್ಟು ಪದಾರ್ಥಗಳಿಗಿಂತ ಅಧಿಕವಾದುವನ್ನು ಉಪಯೋಗಿಸುವುದಿಲ್ಲವೆಂದು ತೀರ್ಮಾನಿಸಿಕೊಳ್ಳಬೇಕು ಈ ವಿಷಯದಲ್ಲಿ ೧೪ ನಿಯಮಗಳುಂಟು. ಪಾಪದಲ್ಲಿ ಪರಿಣಮಿಸುವ ವ್ಯಾಪಾರವನ್ನು ಮಾಡಬಾರದು. ಅದರಲ್ಲೂ ಹಿಂಸೆಯಲ್ಲಿ ಪರಿಣಮಿಸುವ ವ್ಯಾಪಾರವನ್ನು ಮುಖ್ಯವಾಗಿ ಬಿಡಬೇಕು. ಅಶನ ಪಾನ ಮತ್ತು ವಸ್ತ್ರ ಇತ್ಯಾದಿ ಶರೀರಕ್ಕೆ ಉಪಯೋಗಕರವಾದ ವಸ್ತುಗಳನ್ನು ಮರ್ಯಾದೆಗಿಂತ ಅಧಿಕವಾಗಿ ಉಪಯೋಗಿಸುವುದಿಲ್ಲವೆಂದು ಜೀವನ ಪರ್ಯಂತ ನಿಯಮಿಸಬೇಕು.

ಎಂಟನೆಯ ವ್ರತ: ಅನರ್ಥ ಮತ್ತು ದುರಾಲೋಚನೆ. ದುರಾಲೋಚನೆ ಮತ್ತು ಅನರ್ಥಕಾರಿ ಭಾವನೆಯಿಂದ ಆತ್ಮವು ಮತ್ತೊಂದು ಜನ್ಮದಲ್ಲಿ ದುರ್ಗತಿಗೆ ಈಡಾಗುವುದು. ಯಾರಿಗೂ ಪಾಪ ಕಾರ್ಯಕ್ಕೆ ಸಂಬಂಧಿಸಿದ ವಿಷಯವಾವುದನ್ನೂ ಉಪದೇಶಿಸಕೂಡದು ಶಸ್ತ್ರಾಸ್ತ್ರಗಳನ್ನು ನಿರ್ಮಿಸಕೂಡದು. ಸುಳ್ಳು ಕಥೆಗಳನ್ನು ರಚಿಸಕೂಡದು. ದೇಶ, ಸ್ತ್ರೀ, ಭೋಜನ ಮತ್ತು ರಾಜನಿಗೆ ಅನ್ವಯಿಸಿದ ಕಥೆಗಳನ್ನು ತ್ಯಾಗಮಾಡಬೇಕು. ಪಾಪದ ಉಪದೇಶ ಕೂಡದು. ಸಿನಿಮಾ, ಸರ್ಕಸ್ ಇತ್ಯಾದಿಗಳನ್ನು ತ್ಯಜಿಸಬೇಕು. ವ್ಯರ್ಥವಾಗಿ ಪಾಪಕರ್ಮ ಮಾಡಕೂಡದು. ಹಿಂಸೆಮಾಡುವ ಪ್ರಾಣಿಗಳನ್ನು ಪಾಲಿಸಕೂಡದು.

ಓಂಭತ್ತನೆಯ ವ್ರತ: ಸಾಮಾಯಿಕ ವ್ರತ. ಮನಸ್ಸನ್ನು ಸಮಾಧಿಯಲ್ಲಿ ನಿಲ್ಲಿಸಲು ಮತ್ತು ಸಮತೆಯ ಆನಂದವನ್ನನುಭವಿಸಲು ಕೆಲವು ಕಾಲದವರಿವಿಗೆ ಅರ್ಥಾತ್ ವಿಧಿಪೂರ್ವಕ ೪೮ ನಿಮಿಷಗಳ ಕಾಲ ಸಮಭಾವದಲ್ಲಿರುವಿಕೆಗೆ ಸಾಮಾಯಿಕ ವ್ರತವೆನ್ನುವರು. ಪರಮಾತ್ಮನ ಧ್ಯಾನದಲ್ಲಿ ಲೀನವಾಗಿರುವುದು ಮತ್ತು ಆತ್ಮನ ವಿಕಾಸಕ್ಕೆ ಸಹಕಾರಿಯಾದ ಗ್ರಂಥಗಳ ಪಠನ ಮಾಡುವುದು, ವ್ಯಾಪಾರ, ಆರಂಭ ಮತ್ತು ಸಮಾರಂಭವನ್ನು ಸರ್ವಥಾ ತ್ಯಜಿಸಿ ೪೮ ನಿಮಿಷಗಳ ಕಾಲ ಏಕಾಗ್ರತೆಯಿಂದ ಧರ್ಮದ ಧ್ಯಾನವನ್ನು ಮಾಡಬೇಕು.

ಹತ್ತನೆಯ ವ್ರತ: ದೇಶಾವಕಾಶಿಕ ವ್ರತ. ವರ್ಷದಲ್ಲಿ ಒಂದು ದಿನವಾದರೂ ಎಲ್ಲವನ್ನೂ ತ್ಯಜಿಸಿ ತಪಶ್ಚರ್ಯಪೂರ್ವಕವಾಗಿ ೧೦ ಸಾಮಾಯಿಕಗಳನ್ನಾದರೂ ಮಾಡಬೇಕು

ಹನ್ನೊಂದನೆಯ ವ್ರತ: ಪೌಷಧ ವ್ರತ. ಸಾಧುಜೀವನ ನಡೆಸಲು ಸಾಧ್ಯವಿಲ್ಲದವರು ವರ್ಷಕ್ಕೊಂದು ದಿನವಾದರೂ ಪೂರ್ಣ ಉಪವಾಸವಿದ್ದು ತಪಶ್ಚರ್ಯೆಯುಪೂರ್ವಕ ಪೌಷಧ ವ್ರತವನ್ನಂಗೀಕರಿಸಬೇಕು. ಆ ಕಾಲದಲ್ಲಿ ವಿಶ್ವವ್ಯವಹಾರಕ್ಕೆ ಸಂಬಂಧಿಸಿದ ಸಕಲ ಅಂಶಗಳನ್ನೂ ತೊರೆದು ೧೪ ಅಥವಾ ೧೫ ಘಂಟೆಗಳ ಕಾಲ ಸಮಭಾವದಿಂದ ಜ್ಞಾನ, ಧ್ಯಾನ ಮತ್ತು ಕ್ರಿಯಾ ಕಾಂಡಗಳಲ್ಲಿ ಮಗ್ನನಾಗಿರಬೇಕು.

ಹನ್ನೆರಡನೆಯ ವ್ರತ: ಅತಿಥಿ ಸಂವಿಭಾಗ ವ್ರತ. ವರ್ಷಕ್ಕೊಂದು ದಿನವಾದರೂ ಪೂರ್ಣ ಉಪವಾಸಮಾಡಬೇಕು. ೨೪ ಘಂಟೆಗಳ ಕಾಲವೂ

ನಾಲ್ಕು ವಿಧವಾದ ಆಹಾರವನ್ನು ತ್ಯಜಿಸಿ ಪೌಷಧವನ್ನು ಮಾಡಬೇಕು. ಮಾರನೆಯ ದಿನ ಒಂದು ಹೊತ್ತು ಮಾತ್ರ ಊಟಮಾಡಬೇಕು. ಆ ದಿನ ಗುರುಮಹಾರಾಜರಿಗೆ ಭೋಜನದಾನ ಮಾಡಬೇಕು. ಆ ಸಮಯದಲ್ಲಿ ಗುರುಗಳನುಗ್ರಹಿಸಿದ ವಸ್ತುವನ್ನೇ ತಾನು ಉಪಯೋಗಿಸಬೇಕು. ಕಾರಣಾಂತರದಿಂದ ಗುರುವರ್ಯರಾರೂ ದೊರೆಯದಿದ್ದಲ್ಲಿ ನಿಷ್ಠರಾದ ಸ್ವಧರ್ಮಿ ಬಂಧುವನ್ನಾಹ್ವಾನಿಸಿ ಭೋಜನ ಮಾಡಿಸಬೇಕು. ಅವರು ಭೋಜನದ ಕಾಲದಲ್ಲಿ ಯಾವ ಯಾವ ವಸ್ತುಗಳನ್ನು ಭುಂಜಿಸುವರೋ ಅದೇ ವಸ್ತುಗಳನ್ನು ತದನಂತರ ಉಪಯೋಗಿಸಬೇಕು.

ಮೇಲೆ ಹೇಳಿದ ಈ ಹನ್ನೆರಡು ವ್ರತಗಳನ್ನು ಯಾರು ಪಾಲಿಸಬಲ್ಲರೋ ಅವರೆಲ್ಲಾ ಪಾಲಿಸಲೇಬೇಕು. ಈ ಹನ್ನೆರಡು ವ್ರತಗಳನ್ನು ಪಾಲಿಸಲು ಅಸಮರ್ಥರಾದವರು ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಎಷ್ಟು ವ್ರತಗಳನ್ನು ಪಾಲಿಸಲು ಸಾಧ್ಯವೋ ಅಷ್ಟನ್ನು ಪಾಲಿಸಬೇಕು. ಒಂದು ವ್ರತವನ್ನು ಅನುಷ್ಠಾನಕ್ಕೆ ತರುವವನನ್ನೂ ವ್ರತಧಾರಿ ಜೈನನೆಂದು ಕರೆಯಲಾಗುವುದು.

ಯಾವ ಒಂದು ವ್ರತವನ್ನೂ ಪಾಲಿಸಲು ಸಾಧ್ಯವಿಲ್ಲವೋ ಅಂತಹವರು ಪರಮಾತ್ಮ ಪೂಜೆ, ಗುರುವಂದನೆ ಮತ್ತು ಅಭಕ್ಷ್ಯ ಭೋಜನ, ಕಂದಮೂಲ ರಾತ್ರಿಯ ಭೋಜನವನ್ನು ತ್ಯಜಿಸಬೇಕು. ಪ್ರತಿ ದಿನವೂ ಧಾರ್ಮಿಕ ಗ್ರಂಥಗಳನ್ನು ಪಠಿಸಬೇಕು. ಸ್ವಧರ್ಮಿಗಳಲ್ಲಿ ಮಮತೆ ತೋರಬೇಕು. ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಬಡವರಿಗೂ ಮತ್ತು ನೊಂದವರಿಗೂ ನೆರವೀಯಬೇಕು. ತಪ, ಜಪ, ನಮಸ್ಕಾರ, ಮಂತ್ರಗಳ ಸ್ಮರಣೆ ಇತ್ಯಾದಿ ನಿತ್ಯಕರ್ಮಗಳನ್ನು ಶ್ರದ್ಧೆಯಿಂದ ಕೈಕೊಳ್ಳಬೇಕು. ಇಂತಹ ಆಚಾರಗಳನ್ನು ಪಾಲಿಸುವ ವ್ಯಕ್ತಿ ಸಹ 'ಜೈನ' ಎಂದು ಕರೆಯಲ್ಪಡುವನು. ಕಡೆಗೆ ಏನು ಮಾಡಲೂ ಆಗದಿದ್ದಲ್ಲಿ, ಪರಮಾತ್ಮಜಿನೇಶ್ವರ ದೇವನು ಏನನ್ನು ಉಪದೇಶಿಸಿರುವನೋ ಆ ಸಂಪೂರ್ಣ ವಚನಗಳಲ್ಲಿ ವಿಶೇಷ ಶ್ರದ್ಧೆ ಇಡಬೇಕು. ಈ ರೀತಿ ಮಾಡುವವನನ್ನು ಸಹ 'ಜೈನ' ಎಂದು ಸಂಬೋಧಿಸಲಾಗುವುದು.

ಮೇಲೆ ಸೂಚಿಸಿರುವ ವಿಧಿಗಳಿಗೆ ಅನುಸಾರವಾಗಿ ಕ್ರಿಯೆಗಳನ್ನು ಮಾಡುವವನು ನಿಧಾನವಾಗಿ ಕರ್ಮದ ಬಲೆಯಿಂದ ಹೊರಬಿದ್ದು ಸದ್ಗತಿ

ಯನ್ನು ಹೊಂದುವನು. ಕಡೆಯಲ್ಲಿ ಶಿವಪುರದ ಅಪೂರ್ವ ಆನಂದವನ್ನು ಅನುಭವಿಸುವನು.

ಇದರಿಂದ ಜೈನ ಧರ್ಮವು ಎಷ್ಟು ವಿಶಾಲವಾದುದೆಂದು ತೋರುವುದು. ಇಡೀ ಸಂಸಾರ ಸಾಗರದಲ್ಲಿ ಸಿಲುಕಿರುವ ಸಕಲ ಪ್ರಾಣಿಗಳೂ ಜೈನ ಧರ್ಮವನ್ನು ಅಂಗೀಕರಿಸಿ ಅದನ್ನು ಆಚರಣೆಗೆ ತರಬಹುದು. ಈ ಸತ್ಯವನ್ನು ಅರಿಯದ ಅನೇಕರು ಜೈನ ಧರ್ಮವನ್ನು ಆಚರಿಸಲಾಗದ ಧರ್ಮವೆಂದು ಹೇಳುವರು. ಜೈನ ಧರ್ಮವು ಎಷ್ಟು ವಿಶಾಲವಾದುದೆಂಬುದನ್ನು ಅವರು ಅರಿಯರು. ಯಾರು ಬೇಕಾದರೂ ಜೈನ ಧರ್ಮವನ್ನು ಹಿರಿಯ ಅಥವಾ ಕಿರಿಯ ಮಟ್ಟದಲ್ಲಿ ಆಚರಿಸಬಹುದು. ಕೊನೆಗೆ ಜೈನ ಧರ್ಮದಲ್ಲಿ ಯಾರಿಗೆ ಶ್ರದ್ಧೆ ಇದೆಯೋ ಅವರನ್ನು ಸಹ ಜೈನರೆಂದು ಕರೆಯಲಾಗುವುದು. ಜೈನ ಧರ್ಮದ ಸಿದ್ಧಾಂತಗಳನ್ನು ವಿಶೇಷವಾಗಿ ಅರಿಯಲು ಆಯಾಯಾ ವಿಷಯಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದಬೇಕು. ಓದುವುದನ್ನು ಕೇಳಬೇಕು. ವಿಚಾರ ವಿನಿಮಯ ಮಾಡಬೇಕು. ಮತ್ತು ಮನನ ಮಾಡಬೇಕು. ಕರ್ಮದ ವಿಚಾರದಲ್ಲಿ ಮಾತ್ರವೇ ಜೈನ ಧರ್ಮದ ಭಾವನೆ ಎಂತಿದೆ ಎಂಬುದನ್ನು ವಿವರಿಸುವ ಗ್ರಂಥಗಳು ಮತ್ತು ಶ್ಲೋಕಗಳು ಹೇರಳವಾಗಿವೆ. ಜೈನರು ರಚಿಸಿದ ಜ್ಯೋತಿಷ್ಯವಿಜ್ಞಾನ, ಕರ್ಮ, ಸಿದ್ಧಾಂತ, ಆತ್ಮವಾದ, ಪರಮಾತ್ಮವಾದ, ಆಗಮ ಜ್ಞಾನ ನ್ಯಾಯ, ವ್ಯಾಕರಣ, ಛಂದ, ಅಲಂಕಾರ, ತರ್ಕ, ಆಚಾರ, ವಿಚಾರ, ಇತ್ಯಾದಿ ಅನೇಕ ವಿಷಯಗಳಿಗೆ ಸಂಬಂಧಿಸಿದ ಸಾವಿರಾರು ಗ್ರಂಥಗಳು ಇಂದಿಗೂ ದೊರೆಯುತ್ತವೆ. ಈ ವಿಷಯಗಳಲ್ಲಿ ನೈಪುಣ್ಯತೆಯನ್ನು ಪಡೆದಿರುವ ಗುರುವರ್ಯರ ಮೂಲಕ ಇವುಗಳನ್ನು ಅಭ್ಯಾಸಮಾಡಬೇಕು.

ಮಧ್ಯಸ್ಥ ದೃಷ್ಟಿಯಿಂದ ಕೂಡಿದ ವ್ಯಕ್ತಿ ಒಳ್ಳೆಯ ತ್ಯಾಗಿಯಾದ ಗುರುವಿನ ಬಳಿ ಇದ್ದು ಸೂಕ್ಷ್ಮದೃಷ್ಟಿಯಿಂದ ಇಂತಹ ಅಪೂರ್ವ ಗ್ರಂಥಗಳನ್ನು ಅವಲೋಕಿಸುತ್ತಿದ್ದರೆ ಆ ವ್ಯಕ್ತಿಗೆ ದಿವ್ಯದೃಷ್ಟಿಯು ದೊರೆಯುವುದು ಖಂಡಿತ.

★

ಜಗತ್ತಿನ ದೃಷ್ಟಿಯಲ್ಲಿ

ಪಾಶ್ಚಾತ್ಯ ವಿದ್ವಾಂಸರು ಮತ್ತು ಘನ ವ್ಯಕ್ತಿಗಳು ಜೈನಧರ್ಮದ ವಿಚಾರದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಈ ಕೆಳಗೆ ಕೊಡಲಾಗಿದೆ.

"ಮಹಾವೀರನ ಹೆಸರು ಯಾವ ಧರ್ಮ ಪ್ರತಿಪಾದನೆಯಿಂದ ಪ್ರಖ್ಯಾತವಾಗಿದೆಯೋ ಅದು ಅಹಿಂಸಾ ತತ್ವದಿಂದ ಕೂಡಿದುದಾಗಿದೆಯೆಂದು ನನ್ನ ಖಚಿತಾಭಿಪ್ರಾಯ. ಅಹಿಂಸಾ ತತ್ವವನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಂಡು ಅದನ್ನು ಆಚರಣೆಗೆ ತಂದು ಪ್ರಚಾರ ಮಾಡಿದವರು ಮಹಾವೀರ." —ಮಹಾತ್ಮಾ ಗಾಂಧಿ.

"ಜೈನ ಧರ್ಮವು ಅಹಿಂಸೆಯ ಮಹತ್ವವನ್ನು ಇಡೀ ಜಗತ್ತಿಗೆ ತೋರಿದೆ ಅಹಿಂಸೆಗೆ ಜೈನ ಧರ್ಮ ಇತ್ತಿರುವಷ್ಟು ಪ್ರಾಮುಖ್ಯತೆಯನ್ನು ಇದುವರೆಗೆ ಮತ್ಯಾವ ಧರ್ಮವೂ ಇತ್ತಿಲ್ಲ. ಜೈನಧರ್ಮವು ತನ್ನ ಅಹಿಂಸಾ ಸಿದ್ಧಾಂತದಿಂದ ವಿಶ್ವಧರ್ಮವಾಗುವ ಪೂರ್ಣ ಯೋಗ್ಯತೆಯನ್ನು ಸಂಪಾದಿಸಿ ಕೊಂಡಿದೆ"

—ಬಾಬು ರಾಜೇಂದ್ರ ಪ್ರಸಾದ್, ರಾಷ್ಟ್ರಪತಿ.

"ವೇದಗಳ ರಚನೆಯಾಗುವ ಪೂರ್ವವೇ ಜೈನಧರ್ಮವು ಇತ್ತೆಂದು ನಾನು ಹೇಳುವುದರಲ್ಲಿ ಆಶ್ಚರ್ಯವೇನೂ ಇಲ್ಲ."

ಡಾ|| ಎಸ್. ರಾಧಾಕೃಷ್ಣ, ಉಪ ರಾಷ್ಟ್ರಪತಿ.

"ಜೈನ ಧರ್ಮವು ಯತಾರ್ಥವಾಗಿ ಹಿಂದೂ ಧರ್ಮವೂ ಅಲ್ಲ, ವೇದ ಧರ್ಮವೂ ಅಲ್ಲ. ಇದು ಭಾರತೀಯ ಜೀವನ ಸಂಸ್ಕೃತಿ ಮತ್ತು ತತ್ವ ಜ್ಞಾನದ ಮುಖ್ಯ ಸಾಧನವಾಗಿದೆ."

ಪಂ|| ಜವಾಹರಲಾಲ್ ನೆಹರು, ಭಾರತದ ಪ್ರಧಾನಿ.

"ಆತ್ಮಸಂಯಮ ಮತ್ತು ಅಹಿಂಸೆ ಜೈನಧರ್ಮದಲ್ಲಿ ಮೂರ್ತಿಮತ್ತಾಗಿದೆ. ಅಹಿಂಸೆ ನೆಲೆಸಿರುವ ಕಡೆ ದ್ವೇಷಭಾವನೆಗೆ ಎಡೆಯಿಲ್ಲ. ಅಹಿಂಸಾ ತತ್ವವನ್ನು ಇಡೀ ವಿಶ್ವದಲ್ಲಿ ಪ್ರಚಾರಮಾಡುವುದು ಜೈನರ ಕರ್ತವ್ಯ."

ಸರದಾರ್ ವಲ್ಲಭಭಾಯೀ ಪಟೇಲ್.

"ಧರ್ಮವು ನಿಜವಾದುದು. ಅದು ಎಂದಿಗೂ ಸಾಮಾಜಿಕ ಸಂಪ್ರದಾಯವಲ್ಲ ಎಂದು ಮಹಾವೀರ ಭಾರತದಲ್ಲಿ ಘೋಷಣೆ ಮಾಡಿದರು. ಇದು ಸತ್ಯ, ಹೊರಗಿನ ಆಚಾರಗಳನ್ನು ಆಚರಿಸುವುದರಿಂದ ಮಾತ್ರ ಮೋಕ್ಷ ಪ್ರಾಪ್ತವಾಗುವುದಿಲ್ಲ. ಧರ್ಮವು ಮನುಷ್ಯ-ಮನುಷ್ಯನಲ್ಲಿ ವ್ಯತ್ಯಾಸವನ್ನು ಉಂಟುಮಾಡುವುದಿಲ್ಲ."

—ಡಾ|| ರಬೀಂದ್ರನಾಥ ಠಾಕೂರ್.

"ಜೈನಧರ್ಮವು ಅನಾದಿಕಾಲದಿಂದ ಇದೆ ಎಂಬುದನ್ನು ಶಾಸ್ತ್ರ ಮತ್ತು ಅವುಗಳ ಮೇಲಿನ ಟೀಕೆಗಳಿಂದ ಅರಿಯುವೆವು. ಈ ವಿಚಾರದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ನಿರ್ವಿವಾದ ಅಂಶವಿದು. ಇದಕ್ಕೆ ಇತಿಹಾಸದ ಆಧಾರ ಸಹ ಇದೆ.''

— ಲೋಕಮಾನ್ಯ ಬಾಲಗಂಗಾಧರ ತಿಲಕ್

"ಜೈನಧರ್ಮ ಅತ್ಯಂತ ಉಚ್ಚ ಪಂಕ್ತಿಗೆ ಸೇರಿದ್ದು. ಇದರ ಮುಖ್ಯ ತತ್ವವು ವಿಜ್ಞಾನದ ಆಧಾರದ ಮೇಲೆ ರಚಿತವಾಗಿದೆ. ಪದಾರ್ಥ ವಿಜ್ಞಾನವು ಯಾಯಾವ ರೀತಿ ಪ್ರಗತಿಯನ್ನು ಹೊಂದುತ್ತದೆಯೋ ಆಯಾ ರೀತಿಯಲ್ಲಿ ಜೈನಧರ್ಮದ ಸಿದ್ಧಾಂತಗಳೂ ಸಹ ಸಿದ್ಧಿಯನ್ನು ಹೊಂದುವುವು.''

ಡಾ|| ಎಲ್. ಈ ಟೆಸೀಟೋಸಿ, ಇಟಲಿಯ ವಿದ್ವಾಂಸರು

ವಿಶ್ವದ ಅಪ್ರತಿಮ ವಿದ್ವಾಂ ಜಾರ್ಜ್ ಬರ್ನಾಡ್ ಷಾ ಶ್ರೀ ದೇವದಾಸ್ ಗಾಂಧಿಯವರೊಡನೆ ಮಾತನಾಡುತ್ತಿದ್ದಾಗ "ಜೈನಧರ್ಮದ ಸಿದ್ಧಾಂತ ನನಗೆ ಬಹಳ ಪ್ರಿಯ. ಮೃತನಾದಮೇಲೆ ಜೈನಕುಟುಂಬದಲ್ಲಿ ಮತ್ತೆ ಜನ್ಮವೆತ್ತಬೇಕೆಂಬ ಮಹದಾಸೆ ನನಗೆ ಇದೆ" ಎಂದು ಅಭಿಪ್ರಾಯಪಟ್ಟರು.

ಜೈನಧರ್ಮದ ಪ್ರಭಾವದ ಪರಿಣಾಮವಾಗಿ ಅವರು ಮಾಂಸ, ಮದ್ಯ ರಹಿತ ಆಹಾರ ಸೇವಿಸುತ್ತಿದ್ದರು.

—ಜಾರ್ಜ್ ಬರ್ನಾಡ್ ಷಾ.

"ಉಚ್ಚ ಆಚಾರ ವಿಚಾರ ಮತ್ತು ಉಚ್ಚ ತಪಶ್ಚರ್ಯ ಜೈನಧರ್ಮದಲ್ಲಿದೆ ಜೈನಧರ್ಮದ ಆರಂಭವನ್ನು ಅರಿಯಲು ಸಾಧ್ಯವಿಲ್ಲ."

ಮೇ|| ಜ|| ಫರ್ಲಾಂಗ್ ಸಾಹಬ.

"ಋಗ್ವೇದದಲ್ಲಿ ಭಗವಾನ್ ಋಷಭದೇವನ ಸದ್ಭಾವ ಜ್ಞಾಪಕ ಮಂತ್ರ ಅಡಕವಾಗಿದೆ. "ಋಷಭಾರಿ ಮಾಸಮಾನಾನಾಂ ಸಪತ್ನಾನಾಂ ವಿಷಾಸಹಿ ಹಂತಾನಾಂ ಶತ್ರೂಣಾಂ ದಧಿ ವಿರಾಜಗೋಪಿತಂಗವಾಂ" ೧೦೧-೨೧-೨೬

ಜೈನ ಸಿದ್ಧಾಂತವು ಅಸಂದಿಗ್ಧರೂಪದಲ್ಲಿ ಪ್ರಾಚೀನಕಾಲದಿಂದಿದೆ. ಏಕೆಂದರೆ, 'ಅರ್ಹನ್ ಇದಂ ದಯಸೆ ವಿಶ್ವಮಯಂ' ಇತ್ಯಾದಿ ವೇದವಚನ ಗಳಿಂದ ಸಹ ಇದರ ಪ್ರಾಚೀನತೆ ವ್ಯಕ್ತಪಡುವುದು"

—**ಪ್ರೊ|| ವಿರೂಪಾಕ್ಷ** ಎಂ.ಎ., **ವೇದತೀರ್ಥ**, ವೈದಿಕ ವಿದ್ವಾನ್.

ಕನ್ನಡ ಭಾಷೆಯ ಆದಿಕವಿ ಜೈನರೆ. ಪ್ರಾಚೀನ ಮತ್ತು ಉತ್ಕೃಷ್ಟ ಸಾಹಿತ್ಯ ರಚನೆಯು ಜೈನರಿಗೆ ಸೇರಿದ್ದು.

—**ಆರ್. ಬಿ. ನರಸಿಂಹಾಚಾರ್ಯ.**

"ಬ್ರಾಹ್ಮಣ ಧರ್ಮದ ಸದ್ಭಾವ ಅಥವ ಅದು ಹಿಂದೂ ಧರ್ಮವಾಗಿ ಪ್ರತಿರೂಪ ಹೊಂದುವುದಕ್ಕಿಂತ ಬಹಳ ಮುಂಚಿತವಾಗಿ ಜೈನಧರ್ಮವು ಈ ದೇಶದಲ್ಲಿ ವಿರಾಜಿಸುತ್ತಿತ್ತೆಂದು ಆಧುನಿಕ ಇತಿಹಾಸದ ಶೋಧನೆಗಳಿಂದ ಗೊತ್ತಾಗುವುದು."

—**ನ್ಯಾಯಮೂರ್ತಿ ರಂಗಲೇಕರ್**, ಮುಂಬೈ ಹೈಕೋರ್ಟ್.

"ಮೊಹನಜೋದರೋ, ಪುರಾತನ ಶಾಸನಗಳು ಮತ್ತು ಗುಹೆಗಳಲ್ಲಿ ಕಂಡುಬಂದ ಲೇಖನಗಳನ್ನು ಪರೀಕ್ಷಿಸಿದರೆ ಜೈನಧರ್ಮದ ಪ್ರಾಚೀನತೆಯು ತಿಳಿಯುವುದು. ಜಗತ್ತು ಆರಂಭವಾದ ಸಮಯದಲ್ಲಿ ಜೈನಧರ್ಮವೂ ಆರಂಭವಾಯಿತು. ಜೈನಧರ್ಮವು ವೇದದರ್ಶನಕ್ಕಿಂತ ಪುರಾತನವಾದು ದೆಂಬುದೇ ನನ್ನ ಖಚಿತ ಅಭಿಪ್ರಾಯ.

—**ಸ್ವಾಮಿ ರಾಮಮಿಶ್ರಜೀಶಾಸ್ತ್ರಿ**, ಪ್ರೊ|| ಸಂಸ್ಕೃತ ಕಾಲೇಜ್, ಬನಾರಸ್.

"ಜೈನ ಸಾಧುಗಳು ಪ್ರಶಂಸನೀಯವಾದ ರೀತಿಯಲ್ಲಿ ಜೀವನವನ್ನು ಸಾಗಿಸುತ್ತಾರೆ. ಜೈನಸಾಧು ಪೂರ್ಣರೂಪದಲ್ಲಿ ವ್ರತ, ನಿಯಮ ಮತ್ತು ಇಂದ್ರಿಯ ಸಂಯಮಗಳ ಪಾಲನೆ ಮಾಡಿ ವಿಶ್ವದಲ್ಲಿ ಆತ್ಮಸಂಯಮದ ಶಕ್ತಿ ಶಾಲಿ ಉತ್ತಮ ಆದರ್ಶವನ್ನು ತೋರುವರು.

"ಜೈನ ಆಚಾರ ವಿಚಾರಗಳನ್ನು ಪಾಲಿಸುವ ಓರ್ವ ಜೈನ ಗೃಹಸ್ಥನೂ ನಿರ್ದೋಷಿಯಾಗುವನು. ಭಾರತವರ್ಷವು ಆತನ ವಿಚಾರದಲ್ಲಿ ಗೌರವವನ್ನು ವ್ಯಕ್ತಪಡಿಸಬೇಕು.

"ಐತಿಹಾಸಿಕ ಸಂಸಾರದಲ್ಲಿ ಜೈನ ಸಾಹಿತ್ಯವು ಜಗತ್ತಿನ ಸರ್ವ ಜನರಿಗೂ ಅತ್ಯಧಿಕ ಉಪಕಾರಿ. ಐತಿಹಾಸಿಕ ವಿಷಯಗಳನ್ನು ಬರೆಯುವರಿಗೂ ಮತ್ತು ಪ್ರಾಕ್ತನ ವಿಮರ್ಶ ವಿಚಕ್ಷಣೆಗೂ ಅದು ಮಹತ್ಸಹಕಾರಿ.

–ಡಾ|| ಸತೀಶಚಂದ್ರ ವಿದ್ಯಾಭೂಷಣ, ಎಂ.ಎ., ಪಿ.ಹೆಚ್ ಡಿ., ಕಲ್ಕತ್ತ

"ವಿಶ್ವಶಾಂತಿ ಸಂಸ್ಥಾಪನೆ ಮಾಡುವ ಸಭೆಯ ಪ್ರತಿನಿಧಿಗಳನ್ನು ಆಹ್ವಾನಿಸುವ ಅಧಿಕಾರ ಇರುವುದು ಜೈನರಿಗೆ ಮಾತ್ರ ವಿಶ್ವಶಾಂತಿಸ್ಥಾಪನೆ ಅಹಿಂಸೆಯ ಮೂಲಕವೇ ಸಾಧ್ಯ. ಜೈನ ಧರ್ಮವನ್ನು ಇಡೀ ಲೋಕಕ್ಕೆ ಪ್ರಚಾರ ಮಾಡಿದವರು ತೀರ್ಥಂಕರರು. ಆದುದರಿಂದ ಭಗವಾನ್‌ಪಾರ್ಶ್ವನಾಥ ಮತ್ತು ಮಹಾವೀರನ ಅನುಯಾಯಿಗಳು ವಿನಹ ಮತ್ಯಾರು ವಿಶ್ವಶಾಂತಿ ಪ್ರಚಾರ ನಡೆಸಬಲ್ಲರು ?"

—ಡಾ|| ರಾಧಾವಿನೋದಪಾಲ್.

"ವಿಸ್ತೃತ ಲೋಕೋಪಯೋಗಿ ಸಾಹಿತ್ಯವನ್ನು ಜೈನರು ಹೊರಗೆಡಹಿದ್ದಾರೆ."

ಡಾ|| ಜೊಹನ್ಸ್ ಹಾರ್ಬಲ್

"ಪಾಶ್ಚಾತ್ಯದೇಶಗಳಲ್ಲಿ ಹಿಂಸೆ ಮಾಡುವುದು ಸಾಮಾನ್ಯ ವಿಷಯವಾಗಿದೆ. ಮನುಷ್ಯರು ಮನುಷ್ಯರನ್ನು ಹಿಂಸಿಸುವುದನ್ನು ಕಂಡರೂ ಸಹ ಅಪರ ಮನಸ್ಸಿನ ಮೇಲೆ ಯಾವ ಪರಿಣಾಮವೂ ಉಂಟಾಗುವುದಿಲ್ಲ. ಆದ್ದರಿಂದ ಸಕಲ ಜೀವರಾಶಿಗಳನ್ನೂ ರಕ್ಷಿಸಬೇಕೆಂದೂ ಅಹಿಂಸೆಯನ್ನೂ ಜೀವನದ ಸರ್ವ ಮಾರ್ಗಗಳಲ್ಲಿಯೂ ಪಾಲಿಸಬೇಕೆಂದೂ ಬೋಧಿಸುವ ಜೈನ ಧರ್ಮವು ಅದ್ವಿತೀಯವಾದ ಧರ್ಮ. ನಡೆಯುವಾಗ, ಕುಳಿತುಕೊಳ್ಳುವಾಗ, ಊಟ ಮಾಡುವಾಗ ಅಥವ ನೀರನ್ನು ಕುಡಿಯುವಾಗ ಮತ್ತು ಇತರ ಯಾವುದೇ ಕೆಲಸವನ್ನು ಮಾಡುವಾಗ ಯಾವ ಜೀವರಾಶಿಗೂ ಯಾವ ವಿಧವಾದ ಹಿಂಸೆಯನ್ನು ಮಾಡಕೂಡದೆಂಬುದು ಜೈನರ ಸಿದ್ಧಾಂತ. ಈ ವಿಧವಾದ ದಯೆ ಮತ್ಯಾವ ಧರ್ಮದಲ್ಲಿಯೂ ಕಾಣುವುದಿಲ್ಲ."

—ಓರ್ವ ಅಮೆರಿಕದ ಮಹಿಳೆ.

"ನಾನು ರಾಮನಲ್ಲ. ಇಹಲೋಕದ ವಸ್ತುಗಳಲ್ಲಿ ನನಗೆ ಅಭಿಮಾನವೇ ಇಲ್ಲ. ಜಿನನಂತೆ ನನ್ನೊಳಗೆ ಶಾಂತಿಸ್ಥಾಪನೆ ಮಾಡಿಕೊಳ್ಳಬೇಕೆಂಬುದೇ ನನ್ನ ಉತ್ಕಟೇಚ್ಛೆಯಾಗಿದೆ.

—**ಯೋಗವಾಶಿಷ್ಠ** ೧೫ನೇ ಪರಿಚ್ಛೇದ ೮ನೇ ಶ್ಲೋಕ.

"ಓ ಅರ್ಹನ್! ವಸ್ತುಸ್ವರೂಪದ ಅಸ್ತ್ರವನ್ನು ಉಪದೇಶದ ನಿಯಮವನ್ನೂ ಮತ್ತು ಅಪೂರ್ವ ಚತುಷ್ಟಾಂಶಗಳ ಸಾರವನ್ನು ನೀನು ಹೊಂದಿರುವೆ. ಓ ಆರ್ಹನ್! ಇಡೀ ಜಗತ್ತಿನಲ್ಲಿ ಪ್ರತಿಬಿಂಬಿಸುವ ಜ್ಞಾನವೆಲ್ಲದರ ಆಧಾರ ನೀನು. ಓ ಆರ್ಹನ್! ಜಗತ್ತಿನ ಸಕಲ ಜೀವರಾಶಿಗಳ ಸಂರಕ್ಷಕನು ನೀನು. ಕರ್ಮವನ್ನು ನಾಶಗೊಳಿಸುವವನು ನೀನು. ನಿನಗೆ ಸಮಾನನಾದ ಬಲಶಾಲಿ ಮತ್ತೋರ್ವನಿಲ್ಲ."

—**ಯಜುರ್ವೇದ,** ಪರಿಚ್ಛೇದ ೧೯, ಮಂತ್ರ ೧೪

"ಹಿಂದೂ ಸಂಸ್ಕೃತಿ, ಭಾರತ ಸಂಸ್ಕೃತಿಯ ಒಂದು ಭಾಗ. ಜೈನ ಮತ್ತು ಬೌದ್ಧ ಸಂಸ್ಕೃತಿಗಳೂ ಸಹ ಭಾರತೀಯ ಸಂಸ್ಕೃತಿ. ಆದರೆ ಅವು ಹಿಂದೂ ಸಂಸ್ಕೃತಿಯ ಅಂಗವಲ್ಲ."

—**ಪಂಡಿತ ಜವಹರಲಾಲ್ ನೆಹರು.**

"ಭಗವಾನ್ ಮಹಾವೀರ ಮತ್ತೆ ಜೈನ ಧರ್ಮವನ್ನು ಉಪದೇಶಿಸಿದ. ಅವನ ಅವತಾರವು ಇಪ್ಪತ್ತನಾಲ್ಕನೆಯದು. ಋಷಭ, ನೇಮಿ, ಪಾರ್ಶ್ವ ಇತ್ಯಾದಿ ಇಪ್ಪತ್ತಮೂರು ಮಂದಿಯ ಅವತಾರ ಇದಕ್ಕೆ ಪೂರ್ವ ಆಯಿತು. ಅವರೂ ಸಹ ಜೈನಧರ್ಮವನ್ನು ಉಪದೇಶಮಾಡಿದರು. ಇದೇ ರೀತಿ ಈ ಇಪ್ಪತ್ತಮೂರು ಅವತಾರಗಳಾಗುವುದಕ್ಕೆ ಮುಂಚಿತವಾಗಿಯೇ ಜೈನಧರ್ಮವಿತ್ತು. ಇದರಿಂದ ಜೈನಧರ್ಮವು ಬಹಳ ಪುರಾತನ ಧರ್ಮವೆಂದು ಸ್ಥಿರಪಡುವುದು."

—**ಲೋಕಮಾನ್ಯ ಬಾಲಗಂಗಾಧರ ತಿಲಕ್.**

"ಅಶೋಕ ಚಕ್ರವರ್ತಿಯು ಜೈನ ಧರ್ಮವನ್ನು ಕಾಶ್ಮೀರದವರೆಗೆ ಹರಡಿದ್ದನು."

—**ಅಬುಲ್ ಫಸಲ್** (ಅಕ್ಬರನ ಆಸ್ಥಾನ ಕವಿ)

" ಭಾರತ ವರ್ಷದ ಯಾವ ಭಾಗವನ್ನಾದರೂ ಕ್ರೇಂದ್ರಸ್ಥಾನವೆ ಪರಿಗಣಿಸೋಣ. ಅಲ್ಲಿಂದ ಹತ್ತುಮೈಲಿಯ ಸುತ್ತಳತೆಯಲ್ಲಿ ಜೈನಧರ್ಮದ ಅವಶೇಷ ಸಿಗುವುದು."

ವಿಖ್ಯಾತ ಪ್ರಾಕ್ತನ ವಿಮರ್ಶಿ. (ಕಾನಂದಮಾಸಿಕ)

" ಜೈನ ಧರ್ಮದ ತತ್ವವನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಶ್ರೀ ಶಂಕರಾಚಾರ್ಯರು ಸ್ಯಾದ್ವಾದ ಸಿದ್ಧಾಂತಕ್ಕೆ ಬಹಳ ಅನ್ಯಾಯ ಮಾ ದ್ದಾರೆ. ಅವರ ಅನಂತರ ಅನೇಕ ವಿದ್ವನ್ಮಣಿಗಳು ಸಹ ಅದೇ ರೀತಿಯಾ ಅಭಿಪ್ರಾಯವನ್ನು ಹೊಂದಿದ್ದಾರೆ. ಜೈನಧರ್ಮ ತತ್ವಕ್ಕೆ ಸಂಬಂಧಿಸಿ ಮೂಲ ಗ್ರಂಥಗಳನ್ನು ಓದುವುದು ಅನಾವಶ್ಯಕವೆಂದು ಆ ಮಹರ್ಷಿ ಭಾ ಸಿದರು. (ಅವರು ಮೂಲಗ್ರಂಥ ಓದಿದ್ದರೆ ಜೈನ ಧರ್ಮತತ್ವದ ವಿಚಾರದ ಅನ್ಯಾಯ ಮಾಡುತ್ತಿರಲಿಲ್ಲ)"

ಪ್ರೊ॥ಫಾಣಿಭೂಷಣ ಅಧಿಕಾರಿ, ಹಿಂದೂ ವಿಶ್ವವಿದ್ಯಾನಿಲಯ ಬನಾರಸ್

" ಜೈನ ಧರ್ಮದಲ್ಲಿರುವ ವಿಶಾಲ ಸಂಸ್ಕೃತಸಾಹಿತ್ಯವನ್ನು ಪೃಥಕ್ಕರಣ ಮಾಡಿದರೆ ಸಂಸ್ಕೃತ ಕವಿತೆಗೆ ಯಾವ ಗತಿ ಒದಗುವುದು? ಜೈನ ಸಾಹಿತ್ಯ ವನ್ನು ಓದಿದಂತೆಲ್ಲಾ ಜ್ಞಾನವೃದ್ಧಿಯಾಗುವುದಲ್ಲದೆ ಅನಂತ ಹೆಚ್ಚುವುದು.

—ಜರ್ಮನ್ ಡಾ॥ ಹರ್ಟಲ್

"ಜೈನ ದರ್ಶನವು ಸ್ವತಂತ್ರ ದರ್ಶನ. ಜೈನ ಧರ್ಮ ಮೂಲ ಧರ್ಮ, ಎಂಬುದೇ ನನ್ನ ಖಚಿತ ಅಭಿಪ್ರಾಯ ಸರ್ವ ದರ್ಶನ ಶಾಸ್ತ್ರಗಳಿಂದ ಭಿನ್ನವಾದ ಸ್ವತಂತ್ರ ದರ್ಶನ ಜೈನ ದರ್ಶನ. ಪ್ರಾಚೀನ ಭಾರತ ವರ್ಷದ ತತ್ವ ಜ್ಞಾನ ಮತ್ತು ಧಾರ್ಮಿಕ ಜೀವನದ ಅಭ್ಯಾಸಕ್ಕೆ ಮಹತ್ಪೂರಿತವಾದುದು.

—ಜರ್ಮನ್ ಡಾ॥ ಹರ್ಮನ್ ಜಾಕೋಬಿ.

" ಜೈನ ಧರ್ಮದ ಉದ್ಭವ ಇತಿಹಾಸ ಸ್ಮೃತಿಶಾಸ್ತ್ರ ಮತ್ತು ಅವುಗಳ ಟೀಕೆಗಳಿಗಿಂತ ಪ್ರಾಚೀನವಾದುದು. ಜೈನ ಧರ್ಮವು ಹಿಂದೂ ಧರ್ಮದಿಂದ ಭಿನ್ನವಾದುದು ಮತ್ತು ಸ್ವತಂತ್ರವಾದುದು."

—ಶ್ರೀ ಕುಮಾರಸ್ವಾಮಿಶಾಸ್ತ್ರಿ,
ಮದರಾಸ್ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರು.

— ★ —

ವಿಶ್ವನಾಥ ಕೇಶವೇಂದ್ರ ಉಪಾಧ್ಯೆ

ಆಲಗೂರ

ಮ

ಸನ್ನ

“ಜೆ

ಎಂಬ

ಸ್ವತಂ

ಜ್ಞಾನ

ಟ

ಭಿ